ತ್ರೈಮಾಸಿಕ

ಸಂಚಿಕೆ 52

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಜೂನ್, ೨೦೨೫




KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಪರಿವಿಡಿ


- ಸಂಪಾದಕೀಯ.......3
- ಸಂಪಾದಕೀಯ ತಂಡ.......4
- ಅಧ್ಯಕ್ಷರ ನುಡಿ.......5
- ಜ್ಞಾನ ದೀವಿಗೆ.......6
- ಚೈತ್ರದ ಚಿತ್ತಾರ.......7
- ವಸಂತೋತ್ಸವ.......9
- ಶ್ರೀರಾಮ ನವಮಿ.......11
- ವನವಿಹಾರ.......12
- ವ್ಯಕ್ತಿ ವಿಶೇಷ.......14
- ಭಾವಪೂರ್ಣ ಶ್ರದ್ಧಾಂಜಲಿ.......16

**ಪ್ರವಾಸ ಕಥನ**

- ಸ್ವಾಮಿನಾರಾಯಣ ಮಂದಿರ.......19
- ನಾನು ಕಂಡ ಪೂರ್ಣ ಮಹಾಕುಂಭ.......21

**ಬದುಕು**

- ನಾಳೆಯ ನಾವು!.......24
- ಕಾಫೀ ಪ್ರೇಮ.......25

**ಕಥಾ ಸಂಕಲನ**

- ಅಸತೋಮ ಸತ್ಗಮಯ.......27

**ಕವನ ಸಂಕಲನ**

- ರಸಋಷಿಗೆ.......31
- ಚುಟುಕಗಳು.......32

**ಅಡಿಗೆ ಅರಮನೆ**

- ಅವರೆ ಕಾಳು ಕೋಡುಬಳೆ.......34
- ಹಾಲು ಹೋಳಿಗೆ.......35
- ಪದಬಂಧ.......36
- ಚಿಣ್ಣರ ಲೋಕ.......37
- ಕ್ಯಾಮರಾ ಕಣ್ಣಲ್ಲಿ.......42
- ಅನಿಸಿಕೆ–ಅಭಿಪ್ರಾಯ.......45



# ಬೇಸಿಗೆಯ ರಜಾ ದಿನಗಳು ಅಂದು-ಇಂದು

**ಬೇ**ಸಿಗೆಯ ರಜಾ ದಿನಗಳು!!! ನೆನೆಸಿಕೊಂಡರೆ ಯಾರಿಗೆ ತಾನೇ ಖುಷಿಯಾಗುವುದಿಲ್ಲ. ಬೇಸಿಗೆ ರಜೆ ಅಂದ ತಕ್ಷಣ ಮನಸ್ಸಿಗೆ ಬರುವುದು ಅಜ್ಜಿಯ ಮನೆ. ಅಜ್ಜಿ ಮಾಡುವ ಕೋಡುಬಳೆ, ಚಕ್ಕುಲಿ, ರವೆ ಉಂಡೆ, ಉಪ್ಪಿನ ಕಾಯಿ, ರುಚಿ ರುಚಿಯಾದ ಹಬ್ಬದ ಅಡುಗೆಗಳನ್ನು ನೆನೆಸಿಕೊಂಡರೆ ಈಗಲೂ ಬಾಯಲ್ಲಿ ನೀರೂರುತ್ತದೆ. ನಾವು ಚಿಕ್ಕವರಿದ್ದಾಗ ಪರೀಕ್ಷೆ ಮುಗಿದ ದಿನವೇ ಪುಸ್ತಕಗಳನ್ನು ಮೂಲೆಗೆ ತಳ್ಳಿ, ಬೆಂಗಳೂರಿನಲ್ಲಿ ವಾಸವಾಗಿದ್ದ ಅಜ್ಜಿ ಮನೆಗೆ ಹೋಗುವ ತಯ್ಯಾರಿ. ನಮ್ಮ ಕಾಲದ ಬೆಂಗಳೂರು ಬೇಸಿಗೆಯಲ್ಲೂ ತಂಪಾಗಿರುತ್ತಿತ್ತು. ಕಾಂಗ್ರೆಸ್ ಎಕ್ಸಿಬಿಷನ್, ರಷ್ಯನ್ ತ್ರೀ ರಿಂಗ್ ಸರ್ಕಸ್ಗೆ ಸೋದರಮಾವ ಕರೆದುಕೊಂಡು ಹೋಗುತ್ತಿದ್ದರು. ಅಲ್ಲೇ ಹತ್ತಿರದಲ್ಲಿ ಇದ್ದ ಕಾಮತ್ ಹೋಟೆಲ್ನಲ್ಲಿ ಮಸಾಲೆ ದೋಸೆ, ಜಾಮೂನ್ ತಿನ್ನುತ್ತಿದ್ದರೇ....ಸ್ವರ್ಗಕ್ಕೆ ಮೂರೇ ಗೇಣು. ಬೇಸಿಗೆಯಲ್ಲಿ ಮಾತ್ರ ಸಿಗುತ್ತಿದ್ದ ಮಾವಿನ ಹಣ್ಣು, ಹಲಸಿನ ಹಣ್ಣು, ರಾಮಫಲ, ಸೀತಾ ಫಲ, ಸಪೋಟ, ತಾಟಿ ನಿಂಗು, ಇವುಗಳನ್ನು ತಿಂದ ಸಿಹಿ ಇನ್ನೂ ನಾಲಿಗೆಯಲ್ಲಿ ಇದೆ ಅನ್ಸುತ್ತೆ.

ಆ ದಿನಗಳಲ್ಲಿ ರಜಾ ದಿನಗಳು ಅಂದ್ರೆ, ಅಜ್ಜಿ ಮನೆ, ದೊಡ್ಡಮ್ಮನ ಮನೆ, ಚಿಕ್ಕಮ್ಮನ ಮನೆಗೆ ಹೋಗಿ ಅವರ ಮಕ್ಕಳ ಜೊತೆ ಬೆಳಿಗ್ಗೆಯಿಂದ ರಾತ್ರಿಯವರೆಗೆ, ಚೌಕಾಭಾರ, ಅಳಗುಣಿಮನೆ, ಐಸ್ಪೈಸ್, ಕಣ್ಣಾ ಮುಚ್ಚಾಲೆ ಆಟಗಳು, ಒಂದೇ ಕಥೇ ಪುಸ್ತಕವನ್ನು , ಒಟ್ಟೊಟ್ಟಿಗೆ ಇಬ್ಬರು ಮೂವರು ಜೊತೆ ಜೊತೆಯಲ್ಲಿ ಓದುತ್ತಿದ್ದುದು, ಸುಧಾ, ಮಯೂರ, ಪ್ರಜಾಮತ ಇವುಗಳನ್ನು ಬರುವುದೇ ಕಾದು ಎದ್ದು ಬಿದ್ದು ಓಡಿಹೋಗಿ ಓದುತ್ತಿದ್ದುದು ಜ್ಞಾಪಕಕ್ಕೆ ಬರುತ್ತದೆ. ಎಂತಹ ಸುಂದರ ದಿನಗಳು!!! ಕಾರು, ಫೋನ್, ಟಿ.ವಿ., ವಿಡಿಯೋ ಗೇಮ್ಸ್, ಹಣ ಇಲ್ಲದಿದ್ದರೂ.....ಸಂತೋಷಕ್ಕೆ ಕಡಮೆ ಏನು ಇರಲಿಲ್ಲ, ಬೇಜಾರು ಎನ್ನುವ ದಿನಗಳೇ ಇರಲಿಲ್ಲ ಅಂದರೆ ಉತ್ಪ್ರೇಕ್ಷೆ ಏನಲ್ಲ.

ಈಗ ನಮ್ಮ ಮಕ್ಕಳಿಗೆ ಬೇಸಿಗೆ ರಜೆ ಎಂದರೆ...ಡಿಸ್ನಿ ಲ್ಯಾಂಡ್, ಸಮ್ಮರ್ ಕ್ಯಾಂಪ್, ಸಮುದ್ರ ತೀರ, ಬೇಸಿಗೆ ಹಣ್ಣುಗಳಾದ ಬ್ಲೂ ಬೆರಿ, ಸ್ಟ್ರಾ ಬೆರಿ, ರಾಸ್ ಬೆರಿ, ಪೀಚ್, ಹೀಗೆ ಹಲವಾರು ಹಣ್ಣುಗಳನ್ನು ಮಾರಾಟ ಮಾಡುವ ತೋಟಕ್ಕೆ ಹೋಗಿ ದುಡ್ಡು ಕೊಟ್ಟು ಕೀಳುವುದೇ ಒಂದು ಸಂಭ್ರಮ. ಅದಲ್ಲದೆ ಭಾರತದಲ್ಲಿರುವ ವರ್ಷಕ್ಕೋ, ಎರಡು ವರ್ಷಕ್ಕೊ ಒಮ್ಮೆ ನೋಡುವ ನೆಂಟರಿಷ್ಟರು, ಅವರ ಮಕ್ಕಳ ರಜೆ ಮತ್ತು ನಮ್ಮ ರಜಾ ದಿನಗಳು ಬೇರೆ ಬೇರೆ ಸಮಯದಲ್ಲಿ ಬರುವುದರಿಂದ, ನಮ್ಮ ಮಕ್ಕಳಿಗೆ ಸಮ ವಯಸ್ಕರ ಜೊತೆ ಬೆರೆಯುವ ಅವಕಾಶ ಸ್ವಲ್ಪ ಕಡಿಮೆಯೇ ಎಂದು ಹೇಳಬಹುದು.

ಆದರೂ ಅಲ್ಲಿ ಸಿಗುವ ಮಾವಿನಹಣ್ಣು, ಹಲಸಿನಹಣ್ಣು, ರಾಮಫಲ, ಸೀತಾ ಫಲ, ಸಪೋಟ, ತಾಟಿ ನಿಂಗು ಇವುಗಳನ್ನು ರುಚಿ ನೋಡುವುದು ಕೂಡ ಒಂದು ಸಾಹಸ ಎಂದರೆ ತಪ್ಪಿಲ್ಲ. ಕೆಲವರು ಬೇಸಿಗೆ ರಜೆಯಲ್ಲಿ ಮುಂದಿನ ತರಗತಿ ವಿಷಯಗಳನ್ನು ಈಗಲೇ ಓದಿ ಮುಗಿಸುವುದು. ಹಿರಿಯ ಪ್ರಾಥಮಿಕ ಶಾಲೆ ಮಕ್ಕಳು ಕಾಲೇಜ್ ಕೋರ್ಸ್ ಗಳನ್ನು ಖಾಸಗಿ ಶಾಲೆಯಲ್ಲಿ ತರಬೇತಿ ಪಡೆಯುವುದು, ವಾಲಂಟೀರ್ ಆಗಿ, ಆಸ್ಪತ್ರೆ, ಯೂನಿವರ್ಸಿಟೀ, ಸೂಪ್ ಕಿಚನ್ ಕೆಲಸ ಮಾಡುವುದು, ಇಂಟರ್ನ್ಶಿಪ್ ಮಾಡುವುದು ಹೀಗೆ ಹಲವಾರು ತಾಪತ್ರಯ ಗಳಿಗೆ ಗಂಟು ಹಾಕಿಕೊಳ್ಳುವುದು. ಕುಳಿತು, ಬಿಡುವಾಗಿ ಮನೆಯವರ ಜೊತೆ ಮಾತನಾಡಲು ಸಮಯ ಇಲ್ಲದ ಹಾಗೆ ಮಾಡಿಕೊಳ್ಳುವುದು. ಅಷ್ಟೇ ಏಕೆ, ನೆಮ್ಮದಿಯಾಗಿ ಊಟ ಮಾಡಲೂ ಸಂಯಮ ಇರದಹಾಗೆ ಮಾಡಿಕೊಳ್ಳುವುದು. Rat ರೇಸ್ ಗೆ ಚಿಕ್ಕಂದಿನಿಂದಲೇ ಅಭ್ಯಾಸ ಮಾಡಿಕೊಳ್ಳುತ್ತಿರುತ್ತಾರೆ. ಯಾರಿಗೂ ತಾವು ಮತ್ತೊಬ್ಬರಿಗಿಂತ ಹಿಂದೆ ಬೀಳಬಾರದು ಎಂದು ಹದಿನೆಂಟು ವರ್ಷ ತುಂಬುವುದರಲ್ಲಿಯೇ ದೊಡ್ಡವರಾಗುವ ಅವಸರವೇಕೆ ಎನ್ನುವುದು ಒಂದು ಯಕ್ಷ ಪ್ರಶ್ನೆಯೇ ಸರಿ.

ಆದರೂ, ನಮಗೆ ಬೇಸಿಗೆ ರಜೆಯಲ್ಲಿದ್ದ ಸಂತೋಷ ಈಗಿನ ಪೀಳಿಗೆಗೆ ಇಲ್ಲ ಎಂದು ನನ್ನ ಭಾವನೆ. ಆಗ ನಾವು ಎಷ್ಟು ಮುಗ್ಧರಾಗಿದ್ದೆವು!!! ಮುಂದಕ್ಕೆ ನಾವು ಏನಾಗಬೇಕು, ಏನಾಗುತ್ತೀವಿ ಎನ್ನುವ ಒಂದೂ ಯೋಚನೆಗಳೂ ನಮ್ಮ ಮನಸ್ಸಿನಲ್ಲಿ ಬರುತ್ತಿರಲಿಲ್ಲ, ಇದಿದ್ದನ್ನು ಸಂತೋಷದಿಂದ ಅನುಭವಿಸುತ್ತಿದ್ದೆವು🤗

ನೀವು ಏನು ಹೇಳುತ್ತೀರಾ? ನಿಮ್ಮ ಅನಿಸಿಕೆಗಳನ್ನು ಮತ್ತು ಅಭಿಪ್ರಾಯ ಗಳನ್ನು ತಪ್ಪದೆ ನಮ್ಮೊಂದಿಗೆ ಹಂಚಿಕೊಳ್ಳಿ. ನಮ್ಮ ಮುಂದಿನ ಸಂಚಿಕೆ ಯಲ್ಲಿ ಪ್ರಕಟಿಸುತ್ತೇವೆ.

ಧನ್ಯವಾದಗಳು.🙏🙏🙏

**ರಾಗಿಣಿ ದರ್ಶನ್**
ಸಾಹಿತ್ಯ ಬೃಂದಾವನ,
ಸಂಕಲ್ಪ ತಂಡ
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

# ಸಂಪಾದಕೀಯ ತಂಡ



**ಶ್ರೀವಿದ್ಯಾ ಪ್ರಶಾಂತ್**
ಪ್ರಧಾನ ಸಂಪಾದಕರು



**ರೋಹಿಣಿ ಮಹೇಶ್**
ಸಂಚಿಕೆ ವಿನ್ಯಾಸ



**ರಾಗಿಣಿ ದರ್ಶನ್**
ವಿಷಯ ನಿರ್ವಹಣೆ



**ಪಲ್ಲವಿ ಮಂಜುನಾಥ್**
ವಿಷಯ ನಿರ್ವಹಣೆ



**ವಾಣಿ ಗಿರೀಶ್**
ವಿಷಯ ನಿರ್ವಹಣೆ



**ಸೌಮ್ಯ ರವಿ**
ವಿಷಯ ನಿರ್ವಹಣೆ

ಮುಖಪುಟ ಚಿತ್ರ ಕೃಪೆ : ಪಲ್ಲವಿ ಮಂಜುನಾಥ್



# ಅಧ್ಯಕ್ಷರ ನುಡಿ

ವಸಂತ ಋತುವಿನ ಝೇಂಕಾರ ಬೃಂದಾವನ ಚೈತ್ರದ ಚಿತ್ತಾರದ ಮೂಲಕ ಪ್ರಾರಂಭವಾಯಿತು.
ಹೊಸ ನವೋಲ್ಲಾಸದಿಂದ ಕೂಡಿದ ಉತ್ಸಾಹಭರಿತ "ಸಂಕಲ್ಪ"ತಂಡ ನಿಮ್ಮೆಲ್ಲರ ಆಗಮನವನ್ನು ಕಾದು ನೋಡುತ್ತಿತ್ತು.

ಮೊಟ್ಟಮೊದಲ ಬಾರಿಗೆ ಅಮೇರಿಕಾ ಕನ್ನಡ ಕೂಟಗಳಲ್ಲೇ ವಿಶಿಷ್ಟವಾದ "ತಿಂಡಿ ಮೇಳದ ಜಾತ್ರೆ"ಯನ್ನು ಆಯೋಜಿಸಿದ್ದೆವು. ಚಳಿ - ಮಳೆಯ ಕಣ್ಣುಮುಚ್ಚಾಲೆಯೊಂದಿಗೆ ಹಲವಾರು ಸ್ಥಳೀಯ ನುರಿತ ನಿಪುಣ "ನಳ" ಮಹಾರಾಜರು ತಮ್ಮ ವೈಶಿಷ್ಟ್ಯವಾದ ಖಾದ್ಯ -ಪೇಯಗಳನ್ನು ನಮ್ಮ ಬೃಂದಾವನ ಕನ್ನಡಿಗರಿಗೆ ಉಣ ಬಡಿಸಿದರು. ಕರ್ನಾಟಕ ರಾಜ್ಯದ ವಿವಿಧ ರೀತಿಯ ಅಡುಗೆಯ ಸಮ್ಮಿಲನ ಕಾರ್ಯಕ್ರಮಕ್ಕೆ ಇಂಬು ಕೊಟ್ಟಿತ್ತು. ಹಳ್ಳಿ ಜಾತ್ರೆಯ ಮರೆಯದ ನೆನಪುಗಳು ಮತ್ತೊಮ್ಮೆ ಈ ಕಾರ್ಯಕ್ರಮ ನೆನಪಿಸಿತು. ಈ ಮೂಲಕ, ಸ್ಥಳೀಯರಿಗೆ ಬೃಂದಾವನ ಮಾರುಕಟ್ಟೆಯ ಕಿರು ಪರಿಚಯ ಹಾಗು ಸಂಘಟನೆಯ ಶಕ್ತಿಯ ಅನುಭವವಾಯಿತು.

ನಮ್ಮ ನಂತರದ ಕಾರ್ಯಕ್ರಮ ಸಾಂಪ್ರದಾಯಕವಾದ ವಸಂತೋತ್ಸವ, ವಸಂತ ಋತುವಿನ ಹೊಸತನ, ಹರ್ಷ, ಮತ್ತು ಜೀವಂತಿಕೆ ಎಲ್ಲವೂ ಕಾರ್ಯಕ್ರಮದಲ್ಲಿ ಮೇಳೈಸಿತ್ತು . ಕನ್ನಡ ಸಾಂಸ್ಕೃತಿಕ ಪರಂಪರೆಯ ಪ್ರತಿಬಿಂಬವಾಗಿ ಸಂಗೀತ, ಬೃಂದಾವನ ಕನ್ನಡ ಶಾಲೆಯ ಮಕ್ಕಳ "ನಾಯಿ ಮರಿ" ನಾಟಕ , ಮಲ್ಲಿ ಸಣ್ಣಪ್ಪನವರ್ ಅವರ "ಬೆಂಗಳೂರು ಅತ್ತೆ - ಜೆರ್ಸಿ ಸೊಸೆ" ನಾಟಕ ಹಾಸ್ಯದ ಹೊನಲನ್ನು ಹರಿಸಿತ್ತು. ಕಾರ್ಯಕ್ರಮದ ಮುಕುಟವಾಗಿ "ಶ್ರೀರಾಮ ಪಟ್ಟಾಭಿಷೇಕ" ನೃತ್ಯ ರೂಪಕವನ್ನು, ಬೆಂಗಳೂರಿನ ಪ್ರಸಿದ್ಧ ಕಲಾವಿದರಾದ, ಸಂಜಯ್ ಶಾಂತಾರಾಮ್ ಹಾಗೂ ಸ್ಥಳೀಯ ಯುವ ಪ್ರತಿಭೆಗಳು ತಮ್ಮ ಮನೋಜ್ಞವಾದ ಅಭಿನಯದ ಮೂಲಕ ಪ್ರೇಕ್ಷಕರ ಮನಸೂರೆಗೊಂಡರು. 700 ಕ್ಕೂ ಹೆಚ್ಚದಿಕ ಜನರು ಪಾಲ್ಗೊಂಡಿದ್ದು ಈ ಕಾರ್ಯಕ್ರಮದ ವಿಶೇಷ.

"ಶ್ರೀ ರಾಮನ ಪಟ್ಟಾಭಿಷೇಕ " ವಾದಾಗ ಊಟವೂ ಸಹ ಅದೇ ರೀತಿ ಭರ್ಜರಿ ಇರಬೇಕೆಂದು "ಸಂಕಲ್ಪ" ತಂಡ ಬೃಂದಾವನದಲ್ಲಿ ಪ್ರಪ್ರಥಮ ಬಾರಿಗೆ ಸಾಂಪ್ರದಾಯಿಕವಾದ "ಬಾಳೆ ಎಲೆ"ಯ ಹಬ್ಬದ ಊಟವನ್ನು ಏರ್ಪಡಿಸಿತ್ತು. ಜನ ಸಂದಣಿ ಮಾಡದೆ , ನಾಜೂಕಾಗಿ ನಡೆದ ಊಟದ ಕಾರ್ಯಕ್ರಮವನ್ನು ಎಲ್ಲರೂ ಶ್ಲಾಘಿಸಿದರು. ಊಟದೊಂದಿಗೆ ವೀಳ್ಯದೆಲೆ ಹಬ್ಬದ ವಾತಾವರಣವನ್ನುಂಟು ಮಾಡಿತ್ತು.

ನಮ್ಮ ಬಿಸಿಲುಗಾಲದ "ವನವಿಹಾರ" ಮತ್ತೊಂದು ಭರ್ಜರಿ ಕಾರ್ಯಕ್ರಮ. ಸುಮಾರು 350 ಕ್ಕೂ ಹೆಚ್ಚು ಜನ ಸೇರಿದ ಕಾರ್ಯಕ್ರಮ , ಹಲವಾರು ಕ್ರೀಡೆಗಳು ,ವಯಸ್ಸಿನ ಅಂತರವಿಲ್ಲದೆ ಯುವಕರು , ಮಕ್ಕಳು , ಮಹಿಳೆಯರು ಎಲ್ಲಾ ಸೇರಿ ಆಡಿದ್ದು ವಿಶೇಷ . ಕಲ್ಲಂಗಡಿ , ಮಾವಿನ ಹಣ್ಣು, ಭೇಲ್ ಪುರಿ ಎಲ್ಲಾ ಸವಿಯುತ್ತಾ ನಕ್ಕು ನಲಿದಿದ್ದು ಬಹಳ ಕಾಲ ನೆನಪಲ್ಲಿ ಉಳಿಯುವಂತದ್ದು.

ಈ ಬಾರಿಯ ನಮ್ಮ ಕಾರ್ಯಕ್ರಮದ ವಿಶೇಷದೊಂದಿಗೆ ಮೊಟ್ಟ ಮೊದಲ ಬಾರಿಗೆ ಐಪಿಎಲ್ ನಲ್ಲಿ RCB ಕಪ್ ಗೆದ್ದಿದ್ದು ಬಹಳ ಕಾಲದ ಕನಸು ನನಸಾದಂತಾಯಿತು. ಇದು ನಿಜಕ್ಕೂ ಅಭಿನಂದನೀಯ ಸಂದರ್ಭ. ಆದರೆ ಕಾರ್ಯಕ್ರಮದ ನಂತರದ ದಿನಗಳಲ್ಲಿ ಬೆಂಗಳೂರಿನಲ್ಲಿ ನಡೆದ ದುರ್ಘಟನೆಗಳು ಬಹಳ ವಿಷಾದಕರ. ಸಂತ್ರಸ್ತರಿಗೆಲ್ಲರಿಗೂ ಸಂತಾಪವನ್ನು ಸೂಚಿಸುತ್ತೇವೆ.

ಈ ಪ್ರಯಾಣದಲ್ಲಿ ನಿಮ್ಮ ಸಹಭಾಗಿತ್ವಕ್ಕೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ನಿಮ್ಮ
**ಸುನೀಲ್ ಹುಲಿಕೆರೆ,**
ಅಧ್ಯಕ್ಷರು,
"ಸಂಕಲ್ಪ ತಂಡ",
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ.



**ಶ್ರೀ ಯೋಗೀಂದ್ರ ಭಟ್ ಉಳಿ**
ಶ್ರೀ ಕೃಷ್ಣ ವೃಂದಾವನ, ನ್ಯೂ ಜೆರ್ಸಿ

# ಅಗೌರವ ಮತ್ತು ಅಸಹಕಾರ ಸಂಸಾರಕ್ಕೆ ಅಪಾಯಕರ

**ಜೀ**ವನದಲ್ಲಿ ಹೊರಗಿನ ಸವಾಲುಗಳನ್ನು ಹೇಗಾದರೂ ಎದುರಿಸಬಹುದು. ಆದರೆ ಈ ಅಸಮಾಧಾನ, ಅಸಹನೆ, ಅಸೂಯೆ, ದ್ವೇಷ ಮತ್ತು ವೈಷಮ್ಯಾದಿ ದೋಷಗಳು ಮನೆಯೊಳಗೆ ಸೇರಿಕೊಂಡರೆ ಮಾತ್ರ ಅತ್ಯಂತ ಅಪಾಯಕರ. ಆನೆಯ ಸೊಂಡಿನೊಳಗೆ ಸೇರಿಕೊಂಡ ಕಟ್ಟಿರುವೆಯಂತೆ. ಸುದೃಢ ದೇಹದೊಳಗೆ ಸೇರಿಕೊಂಡ ವೈರಾಣುಗಳಂತೆ. ಎಂತಹ ಸಾಮರ್ಥ್ಯವಂತ ವ್ಯಕ್ತಿಯಾದರೂ ಆಂತರಿಕವಾಗಿ ಸೊರಗಿ ಹೋಗುತ್ತಾನೆ. ಕರಗಿ ಹೋಗುತ್ತಾನೆ.

ಮನೆಯೊಳಗೆ ಸಿಗದ ಸಹಕಾರ ಮತ್ತು ಗೌರವಗಳು ಹೊರಗೆಷ್ಟು ದೊರಕಿದರೇನು? ಕೇವಲ ಬಾಹ್ಯಬೆಂಬಲದಿಂದ ಸಂಪೂರ್ಣವಾದ ಸಮಾಧಾನ ಮತ್ತು ನೆಮ್ಮದಿಯನ್ನೆಂದಿಗೂ ಪಡೆಯಲು ಸಾಧ್ಯವಿಲ್ಲ. ಬಿಸಿಲಿನ ಬೇಗೆಗೆ ಬಳಲಿ ಬಾಯಾರಿದವನ ತಲೆಗೆ ನೀರುಸುರಿದರೆ ತಂಪೆನಿಸಬಹುದು, ಆದರೆ ಸಮಾಧಾನವಾಗುವುದು ನೀರು ಹೊಟ್ಟೆಸೇರಿದಾಗ ಮಾತ್ರವಲ್ಲವೇ? ಹಾಗೆಯೇ ಸೊರಗಿದ ಗಿಡ ಮತ್ತೆ ತಲೆಯೆತ್ತಬೇಕೆಂದು ಸುರಿಯುವ ನೀರು ನೇರವಾಗಿ ಬುಡದ ಬೇರನ್ನೇ ತಲುಪಬೇಕಲ್ಲದೆ, ಎಲೆಗಳಿಗೆ ಮಾತ್ರ ಸಿಂಪಡಿಸಿದರೆ ಸಾಕೆ?

ಯಾವುದೇ ಸಾಧಕನ ಅವಿರತ ಪ್ರಯತ್ನಗಳ ಹಿನ್ನೆಲೆಯಲ್ಲಿರುವ ಮುಖ್ಯಧ್ಯೇಯ ಯಶಸ್ವಿಯಾಗಿ ತನ್ನ ಮನೆಗೆ ಮರಳುವುದೇ ಆಗಿರುತ್ತದೆ. ಸಂತಸದಿಂದ ತನ್ನವರನ್ನು ಸೇರಿಕೊಳ್ಳುವುದೇ ಆಗಿರುತ್ತದೆ. ಮತ್ತು ತನ್ನ ಮನೆಯವರ ನಗುಮೊಗದ ಸ್ವಾಗತವಷ್ಟೇ ಅವನು ಬಯಸುವ ಸ್ವರ್ಗಸುಖವಾಗಿರುತ್ತದೆ. ಆತ ತನ್ನ ಕಠಿಣ ಪರಿಶ್ರಮದ ಮತ್ತು ಸಾಧನೆಯ ಫಲವನ್ನು ತನ್ನವರ ಜೊತೆಗೆ ಅನುಭವಿಸಲು ಹಾತೊರೆಯುತ್ತಾನೆ ಹೊರತು ಸಾಧನಾಪಥದಲ್ಲಿ ತಾನು ಅನುಭವಿಸುತ್ತಿರುವ ವೇದನೆಯನ್ನು ತನ್ನವರೆದುರು ತೋರಿಸಿಕೊಳ್ಳುವುದಿಲ್ಲ.

ಪರಸ್ಪರ ಸಹಕಾರವೆನ್ನುವುದೇ ಸುಖಸಂಸಾರದ ಮೂಲಾಧಾರ. ಮನೆಯವರೆಲ್ಲರ ಸಂಪೂರ್ಣ ಸಹಕಾರವಿದ್ದರೆ ಮಾತ್ರ ಯಜಮಾನನ ಪ್ರಯತ್ನಗಳು ಸಫಲವಾಗುತ್ತವೆ. ಕೌಟುಂಬಿಕ ಅಭಿವೃದ್ಧಿಯ ಕನಸುಗಳು ನನಸಾಗುತ್ತವೆ. ಯೋಜನೆಗಳು ಯಶಸ್ವಿಯಾಗಿತ್ತವೆ. ಸಂಸಾರದೊಳಗಿನ ಸುಖ ಮತ್ತು ನೆಮ್ಮದಿ ಸಮೃದ್ಧವಾಗಿರುತ್ತದೆ. ಮತ್ತು ಸಮಾಜದಲ್ಲಿಯೂ ಸೂಕ್ತವಾದ ಗೌರವಾದರಗಳು ಪ್ರಾಪ್ತಿಯಾಗುತ್ತವೆ.

ಹುಲುಸಾಗಿ ಬೆಳೆದುನಿಂತು ಹಣ್ಣು, ನೆರಳುಕೊಡುವ ಸಮಾಜೋಪಯೋಗಿಯಾದ ಮಾವಿನ ಮರವನ್ನು ಎಲ್ಲರೂ ಗೌರವಿಸುತ್ತಾರೆ. ಆದರೆ ಆ ಯಶಸ್ಸಿನ ಹಿನ್ನೆಯಲ್ಲಿರುವ ಆಂತರಿಕ ವ್ಯವಸ್ಥೆಯ ಸಾಮರಸ್ಯವನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು. ಮಣ್ಣಿನೊಳಗಿನ ಬೇರು ಗೃಹಿಣಿಯಂತೆ. ಎತ್ತರಕ್ಕೇರಿ ಬೆಳೆದು ನಿಂತ ಮರ ಯಜಮಾನನಂತೆ. ಮನೆಯೊಡತಿಯ ಪರಿಶ್ರಮ ಯಜಮಾನನಿಗೆ ಕಾಣುವುದಿಲ್ಲ. ಬಿಸಿಲಿನ ಬೇಗೆ, ಗಾಳಿಯ ಒತ್ತಡ, ಆಕ್ರಮಣಕಾರರ ಹಾವಳಿ ಇತ್ಯಾದಿ ಮರದ ಸವಾಲುಗಳು ಗೃಹಿಣಿಯಂತಿರುವ ಬೇರಿಗೆ ಗೋಚರಿಸುವುದಿಲ್ಲ. ಹೊರಜಗತ್ತಿಗೆ ಕಾಣುವ ಭವ್ಯ ನೋಟ ಮತ್ತು ಹೆಸರು ತಲೆಯೆತ್ತಿ ನಿಂತ ಯಜಮಾನನದ್ದು ಮಾತ್ರ.

ನಿರಂತರ ನೀರು ಮತ್ತು ಪೌಷ್ಟಿಕಾಂಶಗಳನ್ನು ಪೂರೈಸುವ ಮೂಲಾಧಾರವಾದ ಬೇರಿನ ತ್ಯಾಗ ಮತ್ತು ಪರಿಶ್ರಮ ಮಾತ್ರ ಬಾಹ್ಯಪ್ರಪಂಚಕ್ಕೆ ಅದೃಶ್ಯವಾಗಿಯೇ ಇರುತ್ತದೆ. ಆದರೂ ಬೇರಿಗೆ ತಾನು ಕಾಣಿಸುತ್ತಿಲ್ಲವೆಂಬ ಅಸಮಾಧಾನವಿಲ್ಲ. ಹೆಸರಿನ ಅಪೇಕ್ಷೆಯಿಲ್ಲ. ಹೊಟ್ಟೆಕಿಚ್ಚೂ ಇಲ್ಲ. ಏಕೆಂದರೆ ಅದು ಸ್ಪರ್ಧೆಯಲ್ಲ. ಪ್ರಕೃತಿ ನಿಯಮ. ಮರ ಮತ್ತು ಬೇರಿನ ಪರಸ್ಪರ ಸಾಮರಸ್ಯ ಸಮರ್ಪಕವಾಗಿದ್ದರೆ ಮಾತ್ರ ಸಮೃದ್ಧ ಫಲಪ್ರಾಪ್ತಿ! ಇಲ್ಲವಾದರೆ ಇಡೀ ಮರದ ಅಸ್ತಿತ್ವಕ್ಕೇ ಅಪಾಯ!

ಮರವೊಂದು ಆರೋಗ್ಯಕರವಾಗಿ ಬದುಕಬೇಕಾದರೆ ಆಳದಲ್ಲಿರುವ ಬೇರಿನ ಜೊತೆಗಿನ ನಿತ್ಯ ಸಂಪರ್ಕ ತುತ್ತತುದಿಯ ಚಿಗುರೆಲೆಯವರೆಗೂ ಇರಬೇಕಾಗುತ್ತದೆ. ಹಾಗೆಯೇ ಸಂಸಾರದ ನೆಮ್ಮದಿಗೆ ಪರಸ್ಪರ ಗೌರವ ಮತ್ತು ಸಹಕಾರದ ಜೊತೆಗೆ ಇನ್ನೂ ಮುಖ್ಯವಾಗಿ ಬೇಕಾದದ್ದು ನಿರಂತರವಾದ ಸಂಪರ್ಕ. ನಮ್ಮ ಮನೆಯೊಳಗೆ ಎಲ್ಲರೊಡನೆ ನಡೆಸುವ ನೇರವಾದ ಮಾತುಕತೆ, ಸಂಭಾಷಣೆಗಳು ನಮ್ಮೊಳಗಿನ ಸಾಮರಸ್ಯವನ್ನು, ಬಾಂಧವ್ಯವನ್ನು ಹೆಚ್ಚಿಸುತ್ತವೆ. ಅಪನಂಬಿಕೆ ಮತ್ತು ತಪ್ಪುಕಲ್ಪನೆಗಳನ್ನು ದೂರ ಮಾಡುತ್ತವೆ. ಅದಕ್ಕೋಸ್ಕರ ಮನೆಯವರು ಪರಸ್ಪರ ಮನಸ್ಸು ಬಿಚ್ಚಿ ಮಾತನಾಡಲೇಬೇಕು.

ನಮ್ಮವರ ಸಾಮರ್ಥ್ಯವನ್ನು ಕಡೆಗಳಿಸಿ, ಗುಣ ಕೌಶಲಗಳನ್ನು ನಿರ್ಲಕ್ಷಿಸಿ ಪರರನ್ನು ಗೌರವಿಸುವುದು, ನಂಬುವುದು ಇತ್ಯಾದಿಗಳನ್ನು ಮಾಡುವವರ ಕುಟುಂಬವೇ ಮುಂದೆ ಕಷ್ಟಪಡಬೇಕಾಗುತ್ತದೆ. ನಮ್ಮ ಆಶ್ರಯ ಮತ್ತು ಸಹಕಾರ ಪರರ ಪಾಲಾದರೆ ನಮ್ಮ ಮನೆಯ ಅಭಿವೃದ್ಧಿಯೇ ಕುಂಠಿತವಾಗುತ್ತದೆ. ಅದರಿಂದ ನಮ್ಮ ಮಕ್ಕಳಿಗೆ ಅನ್ಯಾಯವಾಗುತ್ತದೆ. ಮರವನ್ನು ಆಶ್ರಯಿಸಿ ಬೆಳೆಯುವ ಬಳ್ಳಿಯಂತೆ. ಮೊದಲಿಗೆ ಮರವನ್ನು ವೈಯ್ಯಾರದಿಂದ ಬಳಸಿ ಸುಂದರವಾಗಿ ಕಂಡುಬಂದರೂ, ಮುಂದೆ ಹೆಬ್ಬಾವಿನಂತೆ ಬಲಿಷ್ಠವಾಗಿ ಬೆಳೆದು ಅದೇ ರೆಂಬೆಕೊಂಬೆಗಳನ್ನು ಗಟ್ಟಿಯಾಗಿ ಸುತ್ತಿ ಉಸಿರುಕಟ್ಟಿಸಿ ಕೊಂದೇ ಬಿಡುತ್ತದೆ! ತಾನು ಮಾತ್ರ ಮೆರೆಯುತ್ತದೆ!



**ನಾರಾಯಣ ಕುಮಾರ್**
ನ್ಯೂ ಜೆರ್ಸಿ

**ಚೈ**ತ್ರ ಮಾಸ ಅಂದ್ರೆನೇ ಮನಸ್ಸಿಗೆ ಏನೋ ಉಲ್ಲಾಸ. ಛಳಿ ಕಳೆದು, ಹುಲ್ಲು ಹಸಿರಾಗಿ, ಗಿಡ ಮರಗಳು ಚಿಗುರೊಡೆದು ಚಿಗುರಿಗು ಮುಂಚೆ ಹೂ ಬಿರಿದು.... ಅಬ್ಬಬ್ಬ!! ಏನೀ ಮಹಾನಂದವೇ ಓ ಭಾಮಿನಿ ಏನೀ ಸಂಭ್ರಮದಂದವೇ...
ಈ ಚೈತ್ರಾನಂದವ ನ್ಯೂ ಜೆರ್ಸಿಯ ಕನ್ನಡಿಗರಿಗೆ ಉಣಬಡಿಸಲು ವೇದಿಕೆ ಮಾಡಿಕೊಟ್ಟಿದ್ದು ಬೃಂದಾವನ ಕನ್ನಡ ಕೂಟದ ಸಂಕಲ್ಪ ತಂಡ. April, 5 2025 ರಂದು Mercer County Park Eastನಲ್ಲಿ ನಡೆದ ಈ ಸಾಂಸ್ಕೃತಿಕ ಹಬ್ಬ ನಮ್ಮೂರಿನ ಜಾತ್ರೆ ನೆನಪಿಸಿತ್ತು. ಇದು ಸಂಕಲ್ಪ ತಂಡದ ಚೊಚ್ಚಲ ಕಾರ್ಯಕ್ರಮ.

ಚೈತ್ರದ ಚಿತ್ತಾರವನ್ನು ಜಾತ್ರೆ ರೂಪದಲ್ಲಿ, “ನಮ್ಮ ಜಾತ್ರೆ ನಮ್ಮ ಊಟ” ಧ್ಯೇಯದಡಿ ಆಯೋಜಿಸಲಾಗಿತ್ತು. ಜಾತ್ರೆ ಅಂದಮೇಲೆ ನಾನಾಬಗೆಯ ತಿಂಡಿ ತಿನಿಸು, ಪಾನೀಯಗಳು, ಆಟ, ಮೋಜು ಮಸ್ತಿಯ ನಿರಿಕ್ಷೆಯಿಂದ ಈ ಹೊರಾಂಗಣ ಕಾರ್ಯಕ್ರಮಕ್ಕೆ ಮನೆಯಿಂದ ಹೊರಟಾಗ ಮಾರ್ಗ ಮದ್ಯದಲ್ಲಿ ಮುಸಲಧಾರೆ! ಬಹುದಿನಗಳಿಂದ ಜಾತ್ರೆ miss ಮಾಡಿಕೊಂಡ ನಮಗೆ ಎಲ್ಲಿ ಮಳೆರಾಯ ಜಾತ್ರೆ ಜಪಾನ್ ಮಾಡುವನೋ ಅನ್ನುವ ಆತಂಕ. ಕನ್ನಡಾಂಬೆ ಕೃಪೆಯೋ, ಬೃಂದಾವನಿಗರ ಸಂಕಲ್ಪವೊ ಅಥವಾ ಕನ್ನಡ ನಾಡಿನ ವೈವಿದ್ಯ ತಿನಿಸುಗಳ ಸವಿದ ಮಳೆರಾಯ ನಿದ್ದೆಗೆ ಜಾರಿದನೊ, ಒಟ್ಟಿನಲ್ಲಿ ವರಪಾಯಿತು.
ವಾಹನ ನಿಲ್ದಾಣದಿಂದ ಜಾತ್ರ ಪ್ರದೇಶಕ್ಕೆ ಹೋಗುವ ಮಾರ್ಗದಲ್ಲಿ ಅಲಂಕೃತ ಮರಗಳು, ಎಡಕ್ಕೊಂದು ಡೇರೆ, ಬಲಕ್ಕೊಂದು ಡೇರೆ, ಮುಂದುವರೆದರೆ ದೊಡ್ಡ ಮೊಗಸಾಲೆ(Gazebo). ಮೊಗಸಾಲೆಯ ಬಲಕ್ಕೆ ಬೃಂದಾವನ ಕನ್ನಡ ಶಾಲೆ ಮಕ್ಕಳ ಸಂತೆ, karaoke ವೇದಿಕೆ, ಆಟದ ಡೇರೆ ಮುಂತಾದವುಗಳಿದ್ದವು.
ಜಾತ್ರೆ ದಿನದಂದೇ ಶ್ರೀ ರಾಮ ನವಮಿ ಇದ್ದದು ಮತ್ತೊಂದು ವಿಶೇಷ. ಪ್ರವೇಶದ ಎಡ ಡೇರೆಯಲ್ಲಿ ಶ್ರೀರಾಮನಿಗೆ ನಮಿಸಿ, ಕೋಸಂಬರಿ ಪಾನಕ ಸೇವಿಸಿದಾಗ ಅನಿಸಿದ್ದು ಇದು ರಾಮನವಮಿ ಜಾತ್ರೆಯೆಂದು. ಬಲ ಡೇರೆಯಲ್ಲಿ ಮಾಹಿತಿ ಮತ್ತು token ಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಒಂದು ಡಾಲರಿಗೆ ಒಂದು token. ಮಾರಾಟ ಮಳಿಗೆಗಳಲ್ಲಿ Token ಕೊಟ್ಟು ಕೊಳ್ಳಬೇಕಾಗಿತ್ತು. ಗ್ರಾಹಕರಿಗೂ ಮಾರಾಟಗಾರರಿಗೂ ಎದುರಾಗಬಹುದಿದ್ದ ಚಿಲ್ಲರೆ ಸಮಸ್ಯೆಯನ್ನು ನಿವಾರಿಸಲು ಮಾಡಿದ್ದ ಒಂದು ಅದ್ಬುತ ವ್ಯವಸ್ತೆ.
ಮೊಗಸಾಲೆಯಲ್ಲಿ ಅನೇಕ ತಿಂಡಿ ತಿನಿಸು, ಪಾನೀಯ ಮಳಿಗೆಗಳು ಇದ್ದವು. ಮೈಸೂರು ಪಾಕ್, ಶೇಂಗಾ ಹೊಳಿಗೆ, ಪಡ್ಡು, ಬಾದಾಮಿ ಹಾಲು, ಗೊಜ್ಜು ಅವಲಕ್ಕಿ, ಮಂಗಳೂರು ಬಜ್ಜಿ, ನಿಪ್ಪಟ್ಟು ಹೀಗೆ ಕರ್ನಾಟಕದ ಉದ್ದಗಲಕ್ಕೂ ಸಿಗುವ ಎಲ್ಲಾ ತಿನಿಸುಗಳು ಲಭ್ಯವಿದ್ದವು. ಜೋಳದ ರೊಟ್ಟಿ ಮಳಿಗೆಯಲ್ಲಿ ಹೆಸರೆ ಹೇಳುವಂತೆ ಜೋಳದ ರೊಟ್ಟಿ, ಬದನೇಕಾಯಿ ಪಲ್ಯ, ಗೋದಿ ಹುಗ್ಗಿ, ಶೇಂಗಾಪುಡಿ ಮತ್ತು ಮೊಸರಿನ combination ಲಭ್ಯವಿತ್ತು. ಮೈಸೂರು kitchenನಲ್ಲಿ ಬಿಸಿಬೇಳೆ ಬಾತ್, ಮದ್ದೂರು ವಡೆ, ಚುರುಮುರಿ, ಟೊಮೇಟೊ slush, ಕಾಟನ್ ಕ್ಯಾಂಡಿ
ಬ್ರಾಹ್ಮಣ್ ಕ್ಯಾಂಟೀನ್ನಲ್ಲಿ ಇಡ್ಲಿ, ಚಟ್ನಿ, ವಾಂಗೀಬಾತ್, ಆಂಬೊಡೆ.
ವಿವಿಧ ಮಳಿಗೆಗಳಲ್ಲಿ. ಫ್ರೆಂಚ್ ಫ್ರೈಸ್, ಸುಟ್ಟಿರೊ ಜೋಳ, ಪಾನಿ ಪುರಿ, ಮಸಾಲಾ ಪುರಿ, ಮಾವಿನ ಲಸ್ಸಿ, ಹುರಿದ ಅವಲಕ್ಕಿ, ಹೆಸರಿಟ್ಟಿನ ಉಂಡೆ, ಗೋದಿ ಉಂಡೆ, ಬೇಸನ್ ಉಂಡೆ, ರವೆ ಉಂಡೆ, ವಿವಿಧ ಸ್ವಾದದ ಮೊಟ್ಟೆ ರಹಿತ ಕಪ್ ಕೇಕುಗಳು, ಬ್ರೆಡ್ ಟೋಸ್ಟ್ ಮತ್ತು ಸ್ಯಾಂಡ್ವಿಚ್, ಶೇಂಗಾ ಕೋಸಂಬರಿ. ಅಷ್ಟೇ ಅಲ್ಲದೆ, ಛಳಿಯಲ್ಲಿ ಬಿಸಿಬಿಸಿಯಾದ ಪಶ್ಚಿಮ ಘಟ್ಟದ ತಮ್ಮದೆ ತೋಟದಲ್ಲಿ ಬೆಳೆದು ತಯಾರಿಸಿದ ಕಾಫಿಯನ್ನು ಉಚಿತವಾಗಿ western ghat coffeeಯವರು ನೀಡುತಿದ್ದರು.
ನೈಲ್ ಆರ್ಟ್ ಮಳಿಗೆಯಲ್ಲಿ ಉಗುರುಗಳಿಗೆ ನವ ನವೀನ ವಿನ್ಯಾಸ ಮಾಡುತ್ತಿದ್ದರು.
ಮಕ್ಕಳ ಸಂತೆಯಲ್ಲಿ ಬೃಂದಾವನ ಕನ್ನಡ ಶಾಲೆ ಮಕ್ಕಳು ಮಸಾಲಾ ಸೋಡಾ, ವಿವಿಧ ಸ್ವಾದದ ಗೋಡಂಬಿ, popcorn ಮುಂತಾದ ತಿಂಡಿ ಪಾನೀಯಗಳ ಮಳಿಗೆಗಳ ಜೊತೆಗೆ rock art, ವಿವಿಧ ಮಣಿಗಳಿಂದ ಮಾಡಿದ ಸರಗಳು, ಕಂಕಣ, ಬಳೆ, ಮೆಹಂದಿ ಮಳಿಗೆಗಳು ಇದ್ದವು. ಇವೆಲ್ಲವನ್ನು ಮಕ್ಕಳೆ ತಯಾರಿಸಿ ಮಾರಾಟ ಮಾಡುತಿದ್ದರು. ಮಕ್ಕಳಲ್ಲಿ sales & marketing ಮತ್ತು ವಾಣಿಜ್ಯೋದಮದ ಬಗ್ಗೆ ಅರಿವು ಮೂಡಿಸಲು ಸಂಕಲ್ಪ ತಂಡದ ವಿನೂತನ ಪ್ರಯತ್ನ ಶ್ಲಾಘನೀಯ.
ಹಿರಿಯರು karaoke ಹಾಡು ಮತ್ತು ನೃತ್ಯಗಳಲ್ಲಿ ತಲ್ಲೀನರಾದರೆ, ಆಟದ ಡೇರೆಯಲ್ಲಿ ಮಕ್ಕಳು ಬೌಲಿಂಗ್, ಬಲೂನ್ ಶೂಟಿಂಗ್, ಮೆಮೊರಿ ಗೇಮ್ ಇನ್ನು ಅನೇಕ ಆಟಗಳನ್ನು ಆಡಿ ಆನಂದಿಸಿದರು.
ತಿಂಡಿ ತಿನಿಸು, ಆಟ, ಹಾಡು, ನೃತ್ಯಗಳ ನಂತರ ಎಲ್ಲರು ಗಾಳಿಪಟ ಹಾರಿಸಿದರು. ಬಣ್ಣ ಬಣ್ಣದ ಬಹಳಷ್ಟು ಗಗನ ಚುಂಬಿ ಪತಂಗಗಳು ಹಾರುವುದ ಕಂಡು ಎಷ್ಟು ದಿನವಾಗಿತ್ತೊ. ಮಕ್ಕಳ ಜೊತೆ ಗಾಳಿಪಟ ಹಾರಿಸುತ್ತ ಅಪ್ಪ ಅಮ್ಮಂದಿರು ಸಹ ಮಕ್ಕಳಾಗಿ ಎತ್ತರಕ್ಕೆ ಹಾರಿಸುತ್ತ ಆನಂದಿಸಿದರು.
ನಂತರ ಬಣ್ಣಗಳಿಂದ ಪ್ರೀತಿಯನ್ನು ಹರಡುವ ಹಬ್ಬ ಹೋಳಿಯನ್ನು ಆಚರಿಸಲಾಯಿತು. ಎಲ್ಲರು ಬಣ್ಣ ಹಚ್ಚುತ್ತಾ, ಹಬ್ಬದ ಶುಭ ಕೋರುತ್ತಾ ಸಂಭ್ರಮಿಸಿದರು. ವಿಶೇಷವಾಗಿ ಮಕ್ಕಳು ಬಣ್ಣಗಳಲ್ಲಿ ಮಿಂದೆದ್ದು ಆನಂದಿಸಿದರು
ಒಟ್ಟಿನಲ್ಲಿ ಇದು ರಾಮನವಮಿ ಜಾತ್ರೆ, ಹೋಳಿ ಜಾತ್ರೆ, ಕನ್ನಡಿಗರ ಜಾತ್ರೆಯಾಗಿತ್ತು ಹಾಗು ಅದ್ಭುತವಾಗಿ ಯೋಜಿಸಿ ಕಾರ್ಯಗತಗೊಳಿಸಲಾದ ಕಾರ್ಯಕ್ರಮ ಆಗಿತ್ತು.

# ಚೈತ್ರದ ಚಿತ್ತಾರ


























**ವಾಣಿ ಗಿರೀಶ್**
ನ್ಯೂ ಜೆರ್ಸಿ



**ನ**ಮಸ್ಕಾರ ಎಲ್ಲರಿಗೂ,
ಇಂದು ನಾನು ನಿಮ್ಮೆಲ್ಲರನ್ನು ಅದೇನೋ ಟೈಮ್ ಟ್ರಾವೆಲ್ ಅಂತಾರಲ್ಲ ಆಥರ ಮೊನ್ನೆ ಮೇ ೩ರಂದು ನಮ್ಮ ಬೃಂದಾವನ ಸಂಕಲ್ಪ ತಂಡ ಅಧ್ದೂರಿಯಾಗಿ ನಡಿಸಿಕೊಟ್ಟ ವಸಂತೋತ್ಸವಕ್ಕೆ ಕರೆದುಕೊಂಡು ಹೋಗುವೆನು, ನೀವೆಲ್ಲರೂ ನನ್ ಜೊತೆ ಬರೋದಕ್ಕೆ ಸಿದ್ದರಾಗಿದ್ದೀರಾ ಅಲ್ವಾ? ನಡೀರಿಮತ್ತೆ ಹೊರಡೋಣ...

ಸರಿಯಾಗಿ ೧೧ ಗಂಟೆಗೆ ನಾನು ಮತ್ತು ನಮ್ಮಮನೆಯವರು ಕಾರ್ಯಕ್ರಮ ನಡೆಯುತ್ತಿರುವ ಈಸ್ಟ್ ವಿಂಡ್ಸರಿನ ಮಿಡ್ಲ್ ಸ್ಕೂಲ್ ನ್ನು ತಲುಪಿದೆವು, ವಸಂತೋತ್ಸವದ ಸೌಂದರ್ಯ ನಮ್ಮನ್ನು ಆಕರ್ಷಿಸಿತು. ಆಹಾ! ವಸಂತೋತ್ಸವದ ಸಭಾಂಗಣ ನಿಜಕ್ಕೂ ಒಲವಿನ ಓಲೆಯಂತೆ ಶೃಂಗರಿಸಿದಂತಿತ್ತು . ಎಲ್ಲೆಡೆಗೂ ಹೂವಿನ ತೋರಣಗಳು, ಅಂದವಾಗಿ ಬಿಡಿಸಿದ ರಂಗು ರಂಗಿನ ಚಿತ್ತಾರಗಳು,ಬಣ್ಣ ಬಣ್ಣದ ರೇಷ್ಮೆ ಬಟ್ಟೆಗಳನ್ನು ಧರಿಸಿದ ಹೆಂಗಸರು, ಗಂಡಸರು ಮತ್ತು ಮಕ್ಕಳ ಓಡಾಟ ಮದುವೆಯ ಮನೆ ಸಂಭ್ರಮವನ್ನೇ ಸೃಷ್ಟಿಸಿತ್ತು . ನಾವು ಸ್ವಲ್ಪಾನು ತಡ ಮಾಡದೇ ರಿಜಿಸ್ಟ್ರೇಷನ್ ಬೂತ್ ಗೆ ಹೋಗಿ ನಮ್ಮ ಟಿಕೆಟ್ಸನ್ನು ನೊಂದಾಯಿಸಿಕೊಂಡು, ಗುಲಾಬಿ ಬಣ್ಣದ ಬ್ಯಾಂಡ್ಸ್ ನ್ನು ಧರಿಸಿಕೊಂಡು ಮುಂದೆ ನಡೆದೆವು. ಅಲ್ಲಿ ಬಂದಂಥ ನಮ್ಮ ಕೆಲವು ಸ್ನೇಹಿತರೊಂದಿಗೆ ಕುಶಲೋಪರಿಯನ್ನು ಹಂಚಿಕೊಂಡೆವು.

ಅಷ್ಟರಲ್ಲಿ ನಮ್ಮ ಬೃಂದಾವನ ಸಂಕಲ್ಪ ತಂಡದ ಸ್ವಯಂ ಸೇವಕರು ನಮ್ಮೆಲ್ಲರಿಗೂ ಮೊದಲು ಊಟ ಮುಗಿಸಿಕೊಳ್ಳಿ ಎಂದು ಆಹ್ವಾನಿಸಿದರು. ಈಬಾರಿಯ ವಸಂತೋತ್ಸವದ ವಿಶೇಷತೆಗಳಲ್ಲಿ ಒಂದಾದ, ಮೊಟ್ಟ ಮೊದಲಬಾರಿಗೆ, ಬಾಳೆ ಎಲೆಯ ಔತಣ - 'ಸಾಂಪ್ರದಾಯಿಕ ವೈಭವದ ಪ್ರತೀಕ' ಅಲ್ಲಿ ನಮಗಾಗಿ ಕಾಯುತ್ತಿತ್ತು. ಆಹಾ ಅದೆಷ್ಟು ಅಚ್ಚುಕಟ್ಟಾದ ವ್ಯವಸ್ಥೆ, ಯಾವದೇ ರೀತಿಯ ಗದ್ದಲು ಇಲ್ಲದೆ ಎಲ್ಲರು ಸಾಲು ಸಾಲಾಗಿ ಊಟಕ್ಕೆ ಕುಳಿತುಕೊಂಡೆವು, ಸ್ವಯಂಸೇವಕರು ಸುಗಂಧ ಭರಿತದ ಬಕೇಟನ್ನು ಹಿಡಿದುಕೊಂಡು ಬಂದು ಪ್ರೀತಿ ಹಾಗೂ ಆತಿಥ್ಯದೊಂದಿಗೆ ಬಾಳೆ ಎಲೆಗೆ ಭೋಜನ ಬಡಿಸಿದರು. ಹಬ್ಬದ ರಸದೌತಣ, ಪೇಣಿ, ಪಾಯಸ, ಹಪ್ಪಳ ಎಲ್ಲವೂ ಮನತಣಿಸಿದವು. ಶುದ್ಧ ಕನ್ನಡ ಸಂಸ್ಕೃತಿಯ ಸುವಾಸನೆಯ ಅನುಭವವಾಯಿತು. ಊಟದ ನಂತರ ಚಿಗುರೆಲೆ ಸವಿಯುತ್ತ ಸಂತೋಷದಿಂದ ಹೊರಬಂದೆವು.



ಇನ್ನು ವಸಂತೋತ್ಸವದ ಮುಂದಿನ ವಿಶೇಷತೆಯಾದ ಸಂಸ್ಕೃತಿಕ ಕಾರ್ಯಕ್ರಮಕ್ಕಾಗಿ ನಾವು ಸಭಾಂಗಣದತ್ತ ಧಾವಿಸಿದೆವು. ಅಬ್ಬಾ ಆಗಲೇ ೬೦೦ ಕ್ಕೂ ಹೆಚ್ಚುಜನ ಸೇರಿದ್ದರು. ಅರಂಭದ ವಾದ್ಯ ಗೋಷ್ಠಿ ಮಕ್ಕಳ ಲೈವ್ ಮ್ಯೂಸಿಕ್ ಬ್ಯಾಂಡ್ ನ ಪ್ರದರ್ಶನ ಅವಿಸ್ಮರಣೀಯ, ನಮ್ಮ ಬೃಂದಾವನ ಕನ್ನಡ ಶಾಲೆಯ ಪ್ರಸ್ತುತಿಯಾದ 'ನಾಯಿಮರಿ' ನಾಟಕ ತುಂಬಾ ಚೆನ್ನಾಗಿ ಮೂಡಿಬಂತು. ಮಲ್ಲಿಸಣ್ಣಪ್ಪನವರ್, 'ಬೆಂಗಳೂರು ಅತ್ತೆ ನ್ಯೂಜರ್ಸಿ ಸೊಸೆಯ' ಹಾಸ್ಯದ ಸೊಬಗು ನಗುವಿನ ಹೊನಲನ್ನು ಹರಿಸಿತು. ಕೋನೆಯದಾಗಿ ಎಲ್ಲರೂ ಕಾತುರದಿಂದ ಕಾಯುತ್ತಿದ್ದ ಡಾ. ಸಂಜಯ್ ಶಾಂತಾರಾಮ ಅವರ 'ಶ್ರೀ ರಾಮ್ ಪಟ್ಟಾಭಿಷೇಕ ನೃತ್ಯ ನಾಟಕ', ಅದರಲ್ಲಿ ರಾಮ ಮತ್ತು ಹನುಮನ ಭೇಟಿಯ ಸನ್ನಿವೇಶ, ನಮ್ಮೆಲ್ಲರನ್ನೂ ತ್ರೇತಾಯುಗಕ್ಕೆ ಕರೆದೊಯ್ದಂತಿತ್ತು, ನಂತರ ಹನುಮನ ಲಂಕಾದಹನ, ರಾವಣೇಶ್ವರನ ವೈಭವ ಕಣ್ಣುಗಳಿಗೆ ಹಬ್ಬವೋ ಹಬ್ಬ.
ಈ ಅದ್ಭುತ ಕಾರ್ಯಕ್ರಮದ ನೈಜ ಶಿಲ್ಪಿಗಳು – ಬೃಂದಾವನ ಸಂಕಲ್ಪ್ ತಂಡದ ಅಧ್ಯಕ್ಷರಾದ ಸುನೇಲ್ ಹುಲಿಕೇರೆ ಹಾಗೂ ಎಲ್ಲಾ ಪದಾಧಿಕಾರಿಗಳು, ಸ್ವಯಂಸೇವಕರು ಮತ್ತು ಕಲಾವಿದರು – ನಿಮ್ಮೆಲ್ಲರ ನಿಷ್ಠೆ, ಶ್ರಮ ಮತ್ತು ಪ್ರೀತಿ ಇಲ್ಲದೆ ಈ ಉತ್ಸವ ಈ ಮಟ್ಟಕ್ಕೆ ಮೂಡಿಬರಲು ಸಾಧ್ಯವಾಗುತ್ತಿರಲಿಲ್ಲ.
ಇದು ಒಮ್ಮೆ ಕಾಣುವ ಕಲೆಯ ಹಬ್ಬವಲ್ಲ – ಇದು ನಮ್ಮ ಸಂಸ್ಕೃತಿಯ ಜೀವಾಳ.
ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

# ವಸಂತೋತ್ಸವ











**ವಿದ್ಯಾ ಪ್ರಸನ್ನ ಮಾಗಡಿ**
ನ್ಯೂ ಜೆರ್ಸಿ


# ಶ್ರೀರಾಮನವಮಿ ಮಹೋತ್ಸವ – ಎಡಿಸನ್ ಶ್ರೀಕೃಷ್ಣ ವೃಂದಾವನದಲ್ಲಿ ಸೀತಾರಾಮ ಕಲ್ಯಾಣೋತ್ಸವದ ಭಕ್ತಿಪೂರ್ಣ ಆಚರಣೆ

**ರಾ**ಮಾಯ ರಾಮ ಭದ್ರಾಯ, ರಾಮಚಂದ್ರಾಯ ವೇಧಸೇ ರಘು ನಾಥಾಯ ನಾಥಾಯ ಸೀತಾಯ ಪತಯೇ ನಮಃ

ಭಾನುವಾರ, ಏಪ್ರಿಲ್ 6, 2025ರಂದು ಎಡಿಸನ್‌ನ ಶ್ರೀಕೃಷ್ಣ ವೃಂದಾವನದಲ್ಲಿ ಶ್ರೀರಾಮನವಮಿಯ ಮಹತ್ವದ ದಿನದಂದು, ಭಕ್ತಿಮಯ ಹಾಗೂ ವೈದಿಕ ಆಚರಣೆಗಳೊಂದಿಗೆ ಶ್ರೀ ಸೀತಾರಾಮ ಕಲ್ಯಾಣೋತ್ಸವ ಸಂಪನ್ನವಾಯಿತು.

ಈ ದಿನ, ಭಕ್ತರು ಶ್ರೀ ರಾಮಚಂದ್ರ ಮತ್ತು ಸೀತಾದೇವಿಯ ದಿವ್ಯ ವೈವಾಹಿಕ ಸನ್ನಿವೇಶವನ್ನು ನಿಜವಾಗಿ ಕಣ್ತುಂಬಿಕೊಂಡಂತಹ ಅನುಭವವನ್ನು ಪಡೆದರು. ಶುದ್ಧತೆ, ಶಿಸ್ತಿನೊಂದಿಗೆ ಮತ್ತು ಭಾವಪೂರ್ಣ ಭಕ್ತಿಯ ಶೋಭೆಯೊಂದಿಗೆ, ಕಲ್ಯಾಣೋತ್ಸವದ ವಿಧಾನಗಳು ವೇದಮಂತ್ರಘೋಷ ಮತ್ತು ನಾದಬ್ರಹ್ಮ ಸಂಗೀತದ ಸಂಗತಿಯಲ್ಲಿ ಮುನ್ನುಗ್ಗಿದವು.

ಶ್ರೀ ಯೋಗೀಂದ್ರ ಭಟ್ ಅವರು, ಈ ಶಾಸ್ತ್ರೋಕ್ತ ಕಲ್ಯಾಣೋತ್ಸವದ ಪ್ರತಿಯೊಂದು ಹಂತದ ಪಾರದರ್ಶಕ ವಿವರಣೆಯೊಂದಿಗೆ, ವಿಧಿವಿಧಾನಗಳ ಪೌರಾಣಿಕ ಹಿನ್ನೆಲೆ ಹಾಗೂ ಆಧ್ಯಾತ್ಮಿಕ ಮಹತ್ವವನ್ನು ತಿಳಿಸಿದರು. ಇವರ ವಿವರಣೆಗಳು ಭಕ್ತರಲ್ಲಿ ಸಂಪ್ರದಾಯದ ನಂಬಿಕೆಯನ್ನು ಮತ್ತಷ್ಟು ಗಾಢಗೊಳಿಸಿತು.

ಅಷ್ಟಾವಧಾನ ಸೇವೆಯ ಭಾಗವಾಗಿ: ವೇದಪಾರಾಯಣದಿಂದ ಶುಭಾರಂಭವಾಗಿ, ಮಕ್ಕಳಿಂದ ನೃತ್ಯ ಸೇವೆ (ನಿರೂಪಣೆಯಲ್ಲಿ ರಾಮಾಯಣದ ದೃಶ್ಯಗಳು), ಭಗವದ್ಗೀತೆಯ 7ನೇ ಅಧ್ಯಾಯದ ಪಾರಾಯಣ, ಹಾಗು ಸಂಗೀತ ಸೇವೆ ಇತ್ಯಾದಿ ಭಕ್ತಿಯ ಕಿರಣವನ್ನೇ ಹರಡಿದವು.

ಈ ಎಲ್ಲ ಧಾರ್ಮಿಕ ಕಾರ್ಯಕ್ರಮಗಳ ನಡುವೆ, ವೇದಿಕೆಯು ವಿಶೇಷವಾಗಿ ಆಕರ್ಷಣೆಯ ಕೇಂದ್ರವಾಗಿತ್ತು. ಬದರಿಕಾಶ್ರಮದ ದೇವಸ್ಥಾನದ ರೂಪದಲ್ಲಿ ಅಲಂಕೃತವಾಗಿದ್ದ ವೇದಿಕೆ, ಭಕ್ತರ ಕಲ್ಪನೆಗೆ ಹೊಸ ಆಯಾಮ ನೀಡಿತು.

ಆರು ನೂರಕ್ಕಿಂತ ಹೆಚ್ಚು ಭಕ್ತರು, ಕುಟುಂಬ ಸಮೇತ ಭಾಗವಹಿಸಿದ್ದು, ಎಲ್ಲರೂ ಶ್ರೀ ಸೀತಾರಾಮರ ಕೃಪೆಗೆ ಪಾತ್ರರಾದರು. ಮಕ್ಕಳು, ಹಿರಿಯರು, ಯುವಜನತೆ ಎಲ್ಲರೂ ನಿಜವಾದ ಭಕ್ತಿಗೆ ತೊಡಗಿದ ಸನ್ನಿವೇಶ ಅದೊಂದು.



ಕಲ್ಯಾಣೋತ್ಸವದ ನಂತರ ಮಧ್ಯಾಹ್ನದ ಮಂಗಳಾರತಿ ಶ್ರೀಕೃಷ್ಣರಿಗೆ ಸಮರ್ಪಿಸಲ್ಪಟ್ಟಿತು. ಆ ಬಳಿಕ ಭಕ್ತರಿಗೆ ವಿನ್ಯಾಸಗೊಳಿಸಲಾದ ಮಹಾಪ್ರಸಾದ—ಪಾಯಸ, ಹುಳಿ, ರಸಂ ಚಕ್ಕಲಿ, ಹಲವಾರು ಸಿಹಿತಿಂಡಿಗಳೊಂದಿಗೆ—ಅದು ಶ್ರದ್ಧೆ ಮತ್ತು ಆತಿಥ್ಯದ ನಿಜವಾದ ರೂಪವನ್ನು ತೋರಿಸಿತು.

ಸಂಜೆ ವೇಳೆಗೆ ಪ್ರಖ್ಯಾತ ಸಂಗೀತಗಾರರಾದ ಶ್ರೀ ವಿದ್ಯಾಭೂಷಣರು ನಡೆಸಿದ ದಾಸವಾಣಿ ಕಾರ್ಯಕ್ರಮ ಭಕ್ತರನ್ನು ಪ್ರಭುನಾಮದ ಸಂಗೀತ ರಸದಲ್ಲಿ ನೆನೆಸಿತು. ಅವರ ಗಾಯನಕ್ಕೆ ತಾಳವಾಗಿ ಹಲವರು ಲಯಬದ್ಧವಾಗಿ ಕೈತಟ್ಟುತ್ತಾ, ನಗುವಿನಿಂದ ಮನಸ್ಸನ್ನು ಮುಕ್ತಗೊಳಿಸುತ್ತಾ ಭಜನೆ ಯಾನದಲ್ಲಿ ತೊಡಿಕೊಂಡರು.

ಈ ದಿನದ ಪಾವನ ಸ್ಮರಣೆ:

ಈ ರೀತಿಯ ಧಾರ್ಮಿಕ ಸಂಯೋಜನೆಗಳು ವಿದೇಶದಲ್ಲಿ ನಮ್ಮ ಸಂಸ್ಕೃತಿಯ ಪ್ರತಿ ಕಿರಣವನ್ನು ಕಾಪಾಡಲು ಮತ್ತು ಮುಂದಿನ ತಲೆಮಾರಿಗೆ ಪಾಠವಾಗಲು ಪ್ರಮುಖ ಪಾತ್ರವಹಿಸುತ್ತವೆ. ಶ್ರೀಕೃಷ್ಣ ವೃಂದಾವನದ ಪದಾಧಿಕಾರಿಗಳು, ಪಂಡಿತರು ಮತ್ತು ಸೇವಾ ಸದುದ್ದೇಶದಿಂದ ತೊಡಗಿದ್ದ ಎಲ್ಲ ಸ್ವಯಂಸೇವಕರ ಈ ಶ್ರಮದ ಫಲವೇ, ಈ ಅದ್ಭುತ ಭಕ್ತಿ ಸಂಭ್ರಮ.

ಜೈ ಶ್ರೀರಾಮ!
ಸೀತಾರಾಮಚಂದ್ರರ ಕೃಪೆ ಎಲ್ಲರ ಮೇಲು ಸದಾ ಇರಲಿ.



**ಶುಭ ಶ್ರೀಧರ**
ನ್ಯೂ ಜೆರ್ಸಿ

# ಬೃಂದಾವನ ವನ ವಿಹಾರ

ಪ್ರಿಯ ಕನ್ನಡಿಗರೇ!

"ಬೇಸಿಗೆ" ಎಂದು ಕೇಳಿದಾಗ ನಿಮ್ಮ ಮನಸ್ಸಿಗೆ ಏನು ಬರುತ್ತದೆ? ರಜೆ, ಬಿಸಿಲು, ಪ್ರವಾಸಗಳು, ಉದ್ಯಾನವನಗಳು, ಐತಿಹಾಸಿಕ ತಾಣಗಳು, ಪಾದಯಾತ್ರೆ, ಬೈಕಿಂಗ್, ಆಟ, ಐಸ್ ಕ್ರೀಮ್, ನಿಂಬೆ ಪಾನಕ ಮತ್ತು ಕಲ್ಲಂಗಡಿ? ನಾನು ಇನ್ನೇನಾದರೂ ಮರೆತಿದ್ದೇನೆಯೇ? ಹೇಳಿ.

ಖಂಡಿತ! ಪಿಕ್ನಿಕ್!

ನಮ್ಮ ಬೃಂದಾವನ ಸಮುದಾಯವು ಇವೆಲ್ಲವನ್ನೂ ಒಂದರಲ್ಲಿ ಸೇರಿಸಿ ಈ ವರ್ಷದ ಬೇಸಿಗೆಯನ್ನು ಭವ್ಯವಾದ ಪಿಕ್ನಿಕ್‌ನೊಂದಿಗೆ ಪ್ರಾರಂಭಿಸಿತು! ನೀವು ಅಲ್ಲಿದ್ದ ಕ್ಷಣಗಳನ್ನು ಮತ್ತೆ ಮೆಲುಕು ಹಾಕಲು ಇಷ್ಟಪಟ್ಟರೆ ಅಥವಾ ನೀವು ಪಿಕ್ನಿಕ್ಕಿಗೆ ಬರಲು ಸಾಧ್ಯವಾಗದಿದ್ದರೆ ಅದು ಹೇಗಿತ್ತು ಎಂದು ತಿಳಿಯಲು ಮುಂದೆ ಓದಿ!

ನಮ್ಮ ಪಿಕ್ನಿಕನ್ನು ಕಳೆದ ಭಾನುವಾರ, ಜೂನ್ 22 ರಂದು ಎಡಿಸನ್‌ನ ರೂಸ್‌ವೆಲ್ಟ್ ಪಾರ್ಕ್‌ನಲ್ಲಿ ನಡೆಸಲಾಯಿತು. ಒಳ್ಳೆ ಉರಿಬಿಸಿಲಿನಿಂದ ನಮಗೆ ಸ್ವಲ್ಪವಾದರೂ ಪರಿಹಾರ ಸಿಗಲೆಂದೋಯೇನೋ ವರುಣ ದೇವನು ಕೃಪೆ ತೋರಿಸಿ ಕೆಲವು ಮಳೆ ಹನಿಗಳನ್ನು ಪ್ರೋಕ್ಷಿಸಿ ಪಿಕ್ನಿಕ್ಕಿಗೆ ಶುಭಾರಂಭವನ್ನು ನೀಡಿದನು. ಬಿಸಿಲೆಯಿರಲಿ.. ಮಳೆಯೇಬರಲಿ..ಅಂತ ಬೆಟ್ಟದ ಹೂವಿನ ಹಾಡನ್ನು ಜ್ಞಾಪಿಸಿಕೊಂಡು ನಮ್ಮ ಬೃಂದಾವನದ ಸಧಸ್ಯರು ಕ್ಯಾನೊಪಿಗಳನ್ನು ನೆಟ್ಟೆ, ಊಟ, ತಿಂಡಿ, ಆಟದ ವ್ಯವಸ್ಥೆ ಮಾಡಲು ತೊಡಗಿದರು.

ಬೇಸಿಗೆಯಲ್ಲಿ ನಮ್ಮ ಕೋಲ್ಡ್ ಬಾದಾಮ್ ಹಾಲಿಗೆ ಸರಿಸಾಟಿ ಡ್ರಿಂಕ್ ಬೇರೆಯಾವುದಾದ್ರು ಇದೆಯೇ? ಅದು ನಮ್ಮ ಪಿಕ್ನಿಕ್ಕಿಗೆ ವೆಲ್ಕಮ್ ಡ್ರಿಂಕ್!

ಅಂಥಾ ಬಿಸಿಲಲ್ಲು ಅದೆಷ್ಟು ಜನ! ಚಿಕ್ಕ ಮಕ್ಕಳಿಂದ ಹಿಡಿದು ಅಜ್ಜಿ ತಾತರವರೆಗೆ ಎಲ್ಲರಿಗೂ ಪಿಕ್ನಿಕ್ಕಿನ ಸಡಗರ! ಒಂದು ಕಡೆ ಕೂಗಾಡಿಕೊಂಡು ಓಡಾಡುತ್ತಾಇರೋ ಮಕ್ಕಳಾದರೆ ಇನ್ನೊಂದುಕಡೆ ಊಟಕ್ಕೆ ಆಟಕ್ಕೆ ಎಲ್ಲಾ ತಯಾರಿ ಮಾಡುತ್ತಾಇರೋ ಅಪ್ಪ ಅಮ್ಮಂದಿರು. ಊಟಕ್ಕೇನು ಅನ್ನುತೀರಾ? ಚೆನ್ನಾಗಿ ಬೆಣ್ಣೆ ಹಚ್ಚಿದ ಪಾವ್ ಮತ್ತು ರುಚಿಕರವಾದ ತರಕಾರಿ ಭಾಜಿಯಿಂದ ಶುರು. ಘಮ ಘಮ ಅನ್ತಿರೋ ನಮ್ಮ ಕರ್ನಾಟಕದ ವಿಶೇಷ ಹೋಂ ಮೇಡ್ ವಾಂಗಿಬಾತ್. ಬೇಸಿಗೆಯಾದರೇನು ಚಳಿಯಾದರೇನು, ಎಲ್ಲಾ ಕಾಲಗಳಿಗೂ ಹೀರೋ - ಮೊಸರನ್ನ ವಿಥ್ ಮಾವಿನಕಾಯಿ ಉಪ್ಪಿನಕಾಯಿ. ಮಕ್ಕಳಿಗೆ ಇಷ್ಟ ಅಂತ ಮಾಡಿಸಿದ್ದ ಪಾಸ್ತಾಗೆ ಮಕ್ಕಳ ಅಪ್ಪ ಅಮ್ಮಂದಿರೂ ಲೈನು. ಸ್ವೀಟು ಅಂದ ತಕ್ಷಣ ಕಣ್ಣುಮುಂದೆ ಬರುವ ಸ್ವೀಟಿನ ರಾಜ ಗುಲಾಬ್ ಜಾಮೂನ್! ಎಷ್ಟು ಜಾಮೂನ್ ತಿಂದೆ ಅಂತ ಲೆಕ್ಕನೆ ತಪ್ಪಹೋಯಿತು. ಮಠ ಮಠ ಮಧ್ಯಾಹ್ನದಲ್ಲಿ ನಮ್ಮನ್ನು ತಂಪಾಗಿಡಲು, ಅನ್ಲಿಮಿಟೆಡ್ ಆಮ್ ಪನ್ನಾ ಮತ್ತು ಮಸಾಲೆಮಜ್ಜಿಗೆ! ಒಂದು ಕಡೆ ಬೆವರು ಸುರಿತಾಇದ್ದರೆ ಇನ್ನೊಂದು ಕಡೆ ಲೋಟದ ಮೇಲೆ ಲೋಟ ಮಜ್ಜಿಗೆ ಖಾಲಿ. ಆಟಗಳಿಲ್ಲದೆ ಪಿಕ್ನಿಕ್ ಇಮ್ಯಾಜಿನ್ ಮಾಡಿಕೊಳ್ಳಕ್ಕೆ ಆಗುತ್ತಾ? ನೀವು ನಿಂಬೆ ಮತ್ತು ಚಮಚ, ಬಕೆಟ್‌ನಲ್ಲಿ ಚೆಂಡು ಮತ್ತು ಫೈರ್‌ಬಾಲ್ ಆಟಗಳನ್ನ ಲಾಸ್ಟ ಯಾವಾಗ ಆಡಿದ್ದು ಜ್ಞಾಪಿಸಿಕೊಳ್ಳಿ? ಮೆನ್ಸ್ ಕ್ರಿಕೆಟ್‌ಗೆ ಎಷ್ಟು ಜನ ಸೈನ್‌ಅಪ್ ಮಾಡಿದ್ದರು ಅಂದರೆ 4 ತಂಡಗಳನ್ನು ಮಾಡಬೇಕಾಯಿತು. ನಮ್ಮ ಲೇಡೀಸ್ ಟೀಮ್ ನಲ್ಲಿ ಎಲ್ಲರೂ ಥ್ರೋಬಾಲ್ ಚಾಂಪಿಯನ್ಸ್! ಅಷ್ಟೇಯಲ್ಲ ಚೌಕಾ-ಬಾರಾ ಇನ್ನೂ ಮರೆತಿಲ್ಲ ಅಂದರೆ, ಅದರದೂ ಚಾಂಪಿಯನ್ಶಿಪ್! ಓಲ್ಡ್ ಟೈಮೆರ್ಸ್ ಮಾತನಾಡುತ್ತಾ ಸಂತೋಷವಾಗಿ ಚೌಕಾ-ಬಾರಾ ಆಡುತ್ತಾಇದ್ರೆ ಕೆಲವು ಮಕ್ಕಳಿಗೆ ಅವರಿಂದ ಸ್ವಲ್ಪ ಆಟದ ಟಿಪ್ಸ್ ತೊಗೊಳ ಚಾನ್ಸ್ ಕೂಡ ಸಿಕ್ತು.

ಶಖೆಯಲ್ಲಿ ಚೆನ್ನಾಗಿ ಆಟಾಡಿ ಹಸಿವಿಕೊಂಡು ಬಂದಾಗ ರುಚಿ ರುಚಿಯಾದ ಉಪ್ಪಿಟ್ಟು, ಚುರುಮುರಿ, ಮೆಣಸಿನ ಪುಡಿ ಉದುರಿಸಿದ ಹಸಿ ಮಾವಿನಕಾಯಿ, ಕಲ್ಲಂಗಡಿ, ಐಸ್ ಪಾಪ್ಸ್ ಮತ್ತು ಐಸ್ ಕ್ರೀಮ್, ನಮ್ಮೂರಿನ ಲೈಫ್ ನೆನಪು ಮಾಡಿತು.

ನಮ್ಮ ಪಿಕ್ನಿಕ್ಕಿನ ಒಂದು ಹೈಲೈಟ್ ಇವೆಂಟ್ ಅಂದರೆ ಅಪ್ಪಂದಿರು ಮತ್ತು ಮಕ್ಕಳೊಂದಿಗೆ ಮೂರು ಕಾಲಿನ ಓಟ! ಅಪ್ಪಂದಿರು ಮಕ್ಕಳ ಜೊತೆಗೆ ಪ್ರಾಕ್ಟೀಸ್ ಮಾಡಿದ್ದೇನು, ಸ್ಟ್ರಾಟೆಜಿ ಮಾಡಿದ್ದೇನು, ಕೊನೆಗೆ ಸುಮಾರುಸಲ ಬಿದ್ದಿದ್ದೇನು? ಆ ನೆನಪುಗಳನ್ನ ಮಕ್ಕಳೂ ಮರೆಯೋಲ್ಲ, ಅಪ್ಪಂದಿರೂ ಮರೆಯೋಲ್ಲ, ಹಾಗೆ ಅದನ್ನ ನೋಡುತಿದ್ದ ನಾವೂ ಮರೆಯೋಲ್ಲ! ಚೆನ್ನಾಗಿ ಕಾಂಪೀಟ್ ಮಾಡೋ ಅಥವಾ ಲಕ್ ಇಂದಾನೋ ಹೇಗೋ ಗೆದ್ದ ಮಕ್ಕಳು ತಮ್ಮ ಬಹುಮಾನ ಪದಕಗಳನ್ನ ಪ್ರದರ್ಶಿಸಿಕೊಂಡು ಓಡಾಡುತಿದ್ದಿದ್ದೂ ಒಂದು ನೋಟ. ಮಕ್ಕಳಿಗಿಂತ ಹೆಚ್ಚಾಗಿ, ಮೆನ್ಸ್ ಕ್ರಿಕೆಟ್ ಟೂರ್ನಮೆಂಟ್ ಗೆದ್ದ ಟೀಮ್ ಅಂತೂ ತಮ್ಮ ಟ್ರೋಫಿಯೊಂದಿಗೆ ಫೋಟೋಗಳಿಗೆ ಪೋಸ್ ಮಾಡಿದ್ದೇ ಮಾಡಿದ್ದು!

ಕೊನೆಯದಾಗಿ ಇಡೀ ಬೃಂದಾವನ ಸಮೂದಾಯವು ಸೇರಿ ಫಾದೇರ್ಸ್ ಡೇ ಆಚರಿಸಿತು. ಇಂಥ ಸಂತೋಷದ ದಿನಕ್ಕೆ ಸೂಕ್ತವಾದ ತೆರೆ ಹಾಕಲು ಅಪ್ಪಂದಿರು ಕೇಕ್ ಕತ್ತರಿಸಿ ಎಲ್ಲರ ಬಾಯಿಗೆ ಹಾಗು ಮನಸ್ಸಿಗೆ ಸವಿ ನೆನಪುಗಳನ್ನು ತುಂಬಿದರು.

ಅಂತಹ ಅದ್ಭುತ ಸಮಯವನ್ನು ಕಳೆದ ನಂತರ ನಮ್ಮ ಸ್ನೇಹಿತರಿಗೆ ವಿದಾಯ ಹೇಳುವುದು ಕಷ್ಟಕರವಾಗಿತ್ತು! ಅದರ ಬದಲು, ನಾವು ಮತ್ತೆ ಭೇಟಿಯಾಗೋಣ ಎಂದು ಹೇಳಿದೆವು!

ನಿಮ್ಮ ರಜೆಯನ್ನು ಆನಂದಿಸಿ!






Brindavan
Celebrations




Brindavana Kannada Kalisona
ಬೃಂದಾವನ ಕನ್ನಡ ಕಲಿಸೋಣ





ಶಿವಲೀಲಾ ಕೌಜಲಗಿ
ನ್ಯೂ ಜೆರ್ಸಿ

# ಸಂತೃಪ್ತಿಯಲ್ಲಿ ಸಮನ್ವಿತಾ

**ನ**ಮ್ಮ ಬೃಂದಾವನದ ಸಂಸ್ಥಾಪಕರು ಮತ್ತು ಟ್ರಸ್ಟಿಗಳಾದ ಶ್ರೀಯುತ ಪ್ರಸನ್ನಕುಮಾರ ಅವರಿಂದ ಬಂದ ಆಮಂತ್ರಣ ನೋಡಿ ನನಗೆ ತುಂಬಾ ಸಂತೋಷ ಆಯ್ತು. ಅದರಲ್ಲೂ ಸಮನ್ವಿತಾ ಶರ್ಮಾ ಅವರು ಸಂತೃಪ್ತಿಗೆ ಬಂದು ನಮ್ಮೆಲ್ಲರನ್ನು ತಮ್ಮ ಸುಮಧುರ ಸಂಗೀತದಲ್ಲಿ ತೇಲಿಸಲಿದ್ದಾರೆ ಅಂತ ಕೇಳಿ ತಡೆಯಲಾರದ ಉತ್ಸಾಹ ಆಯ್ತು. ಸಂಗೀತ ಅಂದ್ರೆ, ನನಗೆ ಮತ್ತು ನಮ್ಮ ಯಜಮಾನ್ರಿಗೆ ತುಂಬಾ ಪ್ರೀತಿ. ನಾವಿಬ್ರು ಸಮನ್ವಿತಾ ಶರ್ಮಾ ಅವರ ಬಗ್ಗೆ ತುಂಬಾ ಕೇಳಿದ್ವಿ, ಅವರನ್ನು ನೋಡಿ, ಮಾತನಾಡಿಸಿ ಮತ್ತು ಅವರ ಸಂಗೀತ ಕೇಳೋ ಅವಕಾಶ ಬರುತ್ತೆ ಅಂತ ಯೋಚಿಸಿರಲಿಲ್ಲ. ಬೇರೆ ಏನೂ ಯೋಚನೆ ಮಾಡದೆ ಥಟ್ಟನೆ ಅವರ ಆಮಂತ್ರಣಕ್ಕೆ ನಾವು ಒಪ್ಪಿಗೆ ಸೂಚಿಸಿದ್ದೆವು.

ಸಮನ್ವಿತ ಅವರು ತಮ್ಮ ಹೆಸರಿಗೆ ತಕ್ಕಂತೆ ಬಹುಮುಖ ಪ್ರತಿಭೆ. ಇವರು ವಿಭಿನ್ನ ಕಲೆಗಳನ್ನು ಕರಗತ ಮಾಡಿಕೊಂಡಿದ್ದಾರೆ. ಚಿಕ್ಕಂದಿನಿಂದಲೇ ಸಂಗೀತದಲ್ಲಿ ವಿಶೇಶವಾಗಿ ಕೀರ್ತನೆಯಲ್ಲಿ ಅದ್ಭುತ ಕಲೆ ಪ್ರದರ್ಶಿಸಿದ್ದಾರೆ. ಹೆಸರಾಂತ ನಿರ್ದೇಶಕರಾದ ಟಿ.ಸ್. ನಾಗಾಭರಣರವರ ಪ್ರಶಸ್ತಿ ವಿಜೇತ ಚಿತ್ರ "ಚಿನ್ನಾರಿ ಮುತ್ತ" ದಲ್ಲಿ ಬಾಲಕಲಾವಿದೆಯಾಗಿಯೂ ಹಾಡಿದ್ದಾರೆ. ಇವರ ಕಲೆ ಬರೀ ಸಂಗೀತಕ್ಕೆ ಮಾತ್ರ ಸೀಮಿತವಾಗಿಲ್ಲ. ಇವರು ಭಾರತನಾಟ್ಯಮ್ ಮತ್ತು ಕಥಕ್ ನರ್ತಕಿ ಕೂಡಾ . ಅದಷ್ಟೇ ಅಲ್ಲ ನಿರೂಪಣೆ, ಸಂಗೀತ ಮೇಲ್ವಿಚಾರಣೆ, ಸಂಗೀತ ಸಂಯೋಜನೆ ಮತ್ತು ಸಮಾರಂಭಗಳ ನಿರ್ಮಾಪಣೆ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ . ಇವರು ದೂರದರ್ಶನದ "ನಾದ ಭೇದ" ಎನ್ನುವ Reality Show ನಿರೂಪಣೆ ಮಾಡಿದ್ದಾರೆ.

**"Beauty with Brains"** ಅನ್ನೋ ಹಾಗೆ ಸಮನ್ವಿತಾ ತಮ್ಮ ಶಿಕ್ಷಣ Electronics & Communication Engineering ನಲ್ಲಿ Gold Medal ಪಡೆದಿದ್ದಾರೆ . ಅಷ್ಟೇ ಅಲ್ಲ ತಮ್ಮ ಶಾಸ್ತ್ರೀಯ ಸಂಗೀತದಲ್ಲೂ ಉನ್ನತ ಶ್ರೇಣಿ ಇವರದು. TEDX ನಲ್ಲಿ Youth Speaker ಆಗಿಯೂ ಮಾತನಾಡಿದ್ದಾರೆ.

ಇನ್ನು ಇವರ ಪ್ರಶಸ್ತಿಗಳ ಒಂದು ದೊಡ್ಡ ಪಟ್ಟಿಯೇ ಇದೆ.

- ಇವರಿಗೆ ಉತ್ತರ ಬೆಂಗಳೂರಿನ Lions Club ನಿಂದ Professional Excellence Award ದೊರೆತಿದೆ.
- Rotary Club International ನಿಂದ International Golden Clef ಪ್ರಶಸ್ತಿ ಗಳಿಸಿದ ಮೊದಲ ಭಾರತೀಯ ಮಹಿಳೆ ಇವರು.
- ಇವರ ಅತ್ಯುತ್ತಮ ಹಿನ್ನೆಲೆ ಗಾಯನಕ್ಕಾಗಿ KIMA Award ಕೂಡಾ ದೊರೆತಿದೆ.
- ಇವರ ನಾಯಕತ್ವ ಮತ್ತು ವೃತ್ತಿಪರ ಶ್ರೇಷ್ಠತೆಗೆ Rotary Cubbon Park ನಿಂದ Agratha Award ದೊರೆತಿದೆ.





ಸಮನ್ವಿತಾ “ Samaa Online Music Academy" ಸಂಸ್ಥೆಯ ಸಂಸ್ಥಾಪಕಿ ಕೂಡಾ ಅಗಿದ್ದಾರೆ.
ನಾನೂ ಮೊದಲೇ ಹೇಳಿದ ಹಾಗೆ ಸಮನ್ವಿತಾ ಬಹುಮುಖ ಪ್ರತಿಭೆ!



ಸಮನ್ವಿತಾ ಅವರು ಹೊರ ರಾಷ್ಟ್ರಗಳಲ್ಲಿ (America, Canada, Switzerland, Middle East, South east Asia & others) ಸುಮಾರು ೩೦೦೦ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಪ್ರಸಿದ್ಧ ಗಾಯಕಿಯಾದ ಆಶಾ ಭೋಂಸ್ಲೆ, ಪ್ರಖ್ಯಾತ ನಟಿಯರಾದ ವಹೀದಾ ರೆಹಮಾನ್, ಹೆಲೆನ್, ಶರ್ಮಿಳಾ ಟ್ಯಾಗೋರ್, ಹೇಮಾ ಮಾಲಿನಿ, ತನುಜಾ ಹಾಗೂ ಇನ್ನೂ ಹಲವಾರು ಸಂಗೀತ ನಿರ್ದೇಶಕರು ಮತ್ತು ಗಾಯಕರ ಜೊತೆ ಬೇರೆ ಬೇರೆ ಸಮಾರಂಭಗಳಲ್ಲಿ ವೇದಿಕೆಯನ್ನು ಹಂಚಿಕೊಂಡಿದ್ದಾರೆ.
ಸಮನ್ವಿತಾ ಅವರ ಸುಂದರವಾದ ಧ್ವನಿ ಮತ್ತು ಸುಮಧುರವಾದ ಹಾಡು ಎಲ್ಲರನ್ನೂ ಬೆರಗುಗೊಳಿಸಿತ್ತು. ತದನಂತರ ತಮ್ಮ ಕೋಗಿಲೆ ಕಂಠದಲ್ಲಿ ವಿಭಿನ್ನ ಪ್ರಕಾರದ ಹಳೆಯ ಮತ್ತು ಹೊಸ ಚಿತ್ರಗೀತೆಗಳು, ದಾಸರ ಪದಗಳನ್ನು ಹಾಡಿದರು. ಕನ್ನಡ ಚಿತ್ರಗಳಿಂದ ‘ಪೂಜಿಸಲೆಂದೇ’, ‘ಗಗನವು ಎಲ್ಲೋ’, ‘ಜೋಕೇ.... ನಾನು ಬಳ್ಳಿಯ ಮಿಂಚು’, ಅಷ್ಟೇ ಅಲ್ಲ ಹಿಂದಿ, ತಮಿಳ ಮತ್ತು ತೆಲಗುನಲ್ಲೂ ಕೂಡ ಕೆಲವೊಂದು ಹಾಡುಗಳನ್ನು ಹಾಡಿದರು.




ಅವರು ತಮ್ಮ ಹಾಡುಗಾರಿಕೆಯ ಜೊತೆಗೆ ಪ್ರೇಕ್ಷಕರನ್ನು ಸೆಳೆದುಕೊಂಡು ರಂಜಿಸುವ ರೀತಿ ಅಮೋಘವಾಗಿತ್ತು. ಮಧ್ಯದಲ್ಲಿ ಪ್ರೇಕ್ಷಕರ ಕೋರಿಕೆಯ ಹಾಡುಗಳನ್ನೂ ಕೂಡ ಹಾಡಿದರು. ಅಷ್ಟೇ ಅಲ್ಲ ಅವರ ಜೊತೆಗೆ ನಾವೆಲ್ಲಾ ಪ್ರೇಕ್ಷಕರು ಧ್ವನಿಗೂಡಿಸಿದೆವು. ಕಾರ್ಯಕ್ರಮದ ಕೊನೆಯ ೧೫-೨೦ ನಿಮಿಷಗಳಲ್ಲಿ ಎಲ್ಲರೂ ಸಮನ್ವಿತಾ ಅವರ ಹಾಡಿಗೆ ನರ್ತಿಸಿ ಆನಂದಿಸಿದೆವು. ಸುಮಾರು ೨ ಗಂಟೆಗಳ ಕಾಲ ತಡೆರಹಿತವಾಗಿ ನಮ್ಮನ್ನೆಲ್ಲಾ ಮನರಂಜಿಸಿ ಮಂತ್ರಮುಗ್ದಗೊಳಿಸಿದರು. ಇಷ್ಟು ಒಳ್ಳೆಯ ಗಾಯಕಿ ಮತ್ತು ಬಹುಮುಖ ಪ್ರತಿಭೆ ನಮ್ಮ ಕನ್ನಡತಿ ಎಂದು ಹೇಳಿಕೊಳ್ಳಲು ನಮಗೆಲ್ಲಾ ತುಂಬಾ ಹೆಮ್ಮೆ.
Sur Se Entertainment ಸಂಸ್ಥೆ ಸಮನ್ವಿತಾ ಅವರಿಗೆ , ಅಮೆರಿಕಾದ ಸುಮಾರು ೧೩ ನಗರಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಮನ್ವಿತಾ ಅವರಿಗೆ ತುಂಬು ಹೃದಯದಿಂದ ಅಭಿನಂದನೆ ನೀಡಿ, ಅವರ USA ಪ್ರವಾಸ ಯಶಸ್ವಿಯಾಗಲಿ ಅಂತ ಬೃಂದಾವನ ಕನ್ನಡ ಕೂಟದ ವತಿಯಿಂದ ಶುಭ ಹಾರೈಸುವೆ .



**ಸತೀಶ್ ಹೊಸನಗರ**
ನ್ಯೂ ಜೆರ್ಸಿ

# ವೆಂಕಟೇಶ ಮೂರ್ತಿ ಅವರನ್ನು ನೆನೆದು...

**ನಾ**ವು, ಹಿರಿಯ ಕವಿ, ಹಾಗೂ ಚಿಂತಕರಾದ ಎಚ್. ಎಸ್. ವೆಂಕಟೇಶ ಮೂರ್ತಿ (1944-2025) ಅವರನ್ನ ಕಳೆದುಕೊಂಡಿದ್ದೇವೆ. ಒಬ್ಬ ಬರಹಗಾರರಾಗಿ, ವೆಂಕಟೇಶ್ ಮೂರ್ತಿ ಅವರು, ನವ್ಯಕ್ಕೂ ಮೊದಲ ಸಾಹಿತ್ಯ ಪ್ರಕಾರಗಳಲ್ಲಿ ಗುರುತಿಸಲ್ಪಡುತ್ತಿದ್ದರು. ಇವರು, 1980 ರ ಹೊತ್ತಿಗೆಲ್ಲ, "ಉದಯೋನ್ಮುಖ ಕವಿ" ಎಂಬ ಪದವಿಯನ್ನು ಹೊತ್ತು ದಿಗ್ಗಜರ ನಡುವೆ ಪುರಸ್ಕೃತಗೊಳ್ಳುತ್ತಿದ್ದುದು ನಮ್ಮ ನೆನಪಿನಲ್ಲಿ ಅಚ್ಚಳಿಯದೆ ನಿಂತಿದೆ.


ಕನ್ನಡ ಸಾಹಿತ್ಯದ ಎಲ್ಲ ಮಜಲುಗಳಲ್ಲೂ ಕೃಷಿ ಮಾಡಿರುವ ವೆಂಕಟೇಶ್ ಮೂರ್ತಿ ಅವರು, ಸಿನಿಮಾ ಮತ್ತು ಕಿರುತೆರೆಯಲ್ಲೂ ಕೂಡ ತಮ್ಮ ಛಾಪನ್ನ ಮೂಡಿಸಿದ್ದಾರೆ.

ಚಿನ್ನಾರಿ ಮುತ್ತದ, "ರೆಕ್ಕೆ ಇದ್ದರೆ ಸಾಕೆ, ಹಕ್ಕಿಗೆ ಬೇಕು ಬಾನು, ಬಯಲಲಿ ತೇಲುತ ತಾನು, ಮ್ಯಾಲೆ ಹಾರೋಕೆ|?" ಎಂದು ಒಂದೇ ಸಾಲಿನಲ್ಲಿ, ಗ್ರಾಮೀಣ ಪ್ರತಿಭೆಯ ಪರವಾಗಿ ಸ್ಪಂದಿಸಿದ್ದರು. ಇತ್ತೀಚಿನ ಸಪ್ತ ಸಾಗರದಾಚೆ ಎಲ್ಲೋ ಚಿತ್ರದಲ್ಲಿ ಬಳಸಿದ ಅವರ ಭಾವಗೀತೆಯ ಮೂಲಕ, "ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ, ಮಳೆ ಸುರಿಸಿ ಹಗುರಾದ ಮುಗಿಲಿನಂತೆ" ಎಂಬ ಧೀಮಂತವಾದ ಸಂದೇಶವನ್ನು ಸಾರಿದ್ದರು.

2010 ರಲ್ಲಿ ನ್ಯೂ ಜೆರ್ಸಿಯಲ್ಲಿ ನಡೆದ ಅಕ್ಕ ಸಮೇಳನದಲ್ಲಿ ಭಾಗವಹಿಸಿದ ವೆಂಕಟೇಶ್ ಮೂರ್ತಿ ಅವರು ನಮ್ಮೊಡನೆ ಕಳೆದ ಕಾಲವನ್ನು ನಾವು ಎಂದೂ ಮರೆಯಲಾರೆವು. ಆದರೆ, ಮತ್ತೆ 2016 ರಲ್ಲಿ ನಡೆದ ಅಕ್ಕ ಸಮ್ಮೇಳನಕ್ಕೆ ಅವರು ಅನಾರೋಗ್ಯದ ಕಾರಣದಿಂದ ಬರಲಾಗಲಿಲ್ಲ. ಇಂಥ ಒಬ್ಬ ಹಿರಿಯ ಚಿಂತಕರನ್ನೊಬ್ಬರನ್ನು ಕಳೆದುಕೊಂಡು ನಾವು ಬಡವಾಗಿದ್ದೇವೆ. ಅವರ ಆದರ್ಶ ಜೀವನ ಮತ್ತು ಕೃತಿಗಳು ನಮಗೆಂದೂ ದಾರಿ ದೀಪವಾಗಿ ಉಳಿಯುತ್ತವೆ.

***

ಎಚ್.ಎಸ್. ವೆಂಕಟೇಶ ಮೂರ್ತಿ ಅವರನ್ನ ನಾವು ಬಹಳ ಹತ್ತಿರದಿಂದ ಬಲ್ಲೆವು. ಒಂದು ಕಾಲದಲ್ಲಿ ಕವಿ-ಲೇಖಕ ದಿಗ್ಗಜರ ನಡುವೆ, "ಉದಯೋನ್ಮುಖ" ಪ್ರತಿಭೆಯಾಗಿ ಗುರುತಿಸಲಟ್ಟವರು. ಹಾಗೂ ತಮ್ಮ ಗುರು ಪರಂಪರೆಯನ್ನು ಅಚ್ಚುಕಟ್ಟಾಗಿ ಮುಂದುವರೆಸಿಕೊಂಡು ಬಂದವರು. ಕುವೆಂಪು ಅವರ ಶಿಷ್ಯರಾಗಿ ಜಿ.ಎಸ್. ಶಿವರುದ್ರಪ್ಪನವರು ಅಪಾರವಾದ ಪ್ರೇರಣೆಯನ್ನು ಪಡೆದಂತೆ, ಜಿ.ಎಸ್. ಶಿವರುದ್ರಪ್ಪನವರ ಶಿಷ್ಯನಾಗಿ ಎಚ್. ಎಸ್. ವೆಂಕಟೇಶ ಮೂರ್ತಿಯವರು ಆ ಪರಂಪರೆಯ ಮುಂದಿನ ಕೊಂಡಿಯಾಗಿದ್ದರು.



ಚಿತ್ರ ಕೃಪೆ : ಅಂತರ್ಜಾಲ

ಮೊದಮೊದಲು, ವೃತ್ತಿಪರ ಶಿಕ್ಷಣದಲ್ಲಿ ಪಾಲಿಟೆಕ್ನಿಕ್ (ಮೆಕ್ಯಾನಿಕಲ್) ನಲ್ಲಿ ಡಿಪ್ಲೋಮಾ ಪಡೆದು ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರಾದರೂ, ಕನ್ನಡ ಸಾಹಿತ್ಯ ಪರಿಚಾರಿಕೆಯಿಂದ ಅವರು ಬಹಳ ಕಾಲ ದೂರ ಉಳಿಯಲಿಲ್ಲ. ಈ ಒಂದು ಸ್ಫೂರ್ತಿ ಅವರನ್ನು ಮುಂದೆ ಕನ್ನಡದಲ್ಲಿ ಬಿ.ಎ., ಎಮ್.ಎ. ಹಾಗೂ ಪಿ.ಎಚ್.ಡಿ ಮಾಡುವಲ್ಲಿಯವರೆಗೂ ಕೊಂಡೊಯ್ಯಿತು.

ಒಬ್ಬ ಲೇಖಕನ ಕೊಡುಗೆ ಜನಸಾಮಾನ್ಯರಲ್ಲಿ ಜನಪದದಂತೆ ಬೆರೆಯುವ ಭಾಗ್ಯವಿದೆಯಲ್ಲ, ಅದಕ್ಕಿಂತ ಜನಪ್ರಿಯತೆ ಏನಾದರೂ ಬೇಕೆ? ಕನ್ನಡ ಪದ್ಯ, ಜನಪ್ರಿಯ ಗೀತೆಗಳನ್ನು ತೆಗೆದುಕೊಂಡಾಗ, ಕೆಲವೇ ಕೆಲವು ಲೇಖಕರು ಆ ಮಟ್ಟಿನ ಒಂದು ಮಣ್ಣಿನ ನೆಲದ ಸೊಗಡಿಗೆ ತಕ್ಕ ಪ್ರತಿಭಾಶೀಲರಾಗಿ, ಅವರವರ ಕೃತಿಗಳ ಮೂಲಕ ಸರ್ವಕಾಲಕ್ಕೂ ಚಿರಸ್ಥಾಯಿಯಾಗಿರುತ್ತಾರೆ. ಕುವೆಂಪು, ಬೇಂದ್ರೆ, ಪು.ತಿ.ನ, ನರಸಿಂಹಸ್ವಾಮಿ, ಶಿವರುದ್ರಪ್ಪ, ಲಕ್ಷ್ಮೀನಾರಾಯಣ ಭಟ್ಟರು, ಲಂಕೇಶ್, ದೊಡ್ಡ ರಂಗೇಗೌಡ, ಹೀಗೆ ಅನೇಕರು ಮತ್ತು ಅವರ ಕಾವ್ಯ ಸಂಪತ್ತು ನಮ್ಮ ಜನಮಾನಸದಲ್ಲಿ ಎಂದಿಗೂ ಮಾಸದೇ ಉಳಿದು, ಜನಪದವಾಗಿ ಬಿಟ್ಟಿದೆ. ಈ ನಿಟ್ಟಿನಲ್ಲಿ, ಮತ್ತೊಂದು ಹೆಸರನ್ನು ಸೇರಿಸಬಹುದಾದರೆ, ಅದು ಎಚ್. ಎಸ್. ವೆಂಕಟೇಶ ಮೂರ್ತಿ ಅವರದು ಎಂದು ನಿಸ್ಸಂಶಯವಾಗಿ ಹೇಳಬಹುದು.

"ಮೋಡ ಇದ್ದರೆ ಸಾಕೆ, ಬ್ಯಾಡವೇ ಭೂಮಿ, ಹೇಳಿ ಸ್ವಾಮಿ, ಮಳೆಯ ಸುರಿಯೋಕೆ?!" ಎಂದು ಯಾರು ಹೇಳಿದ್ದು/ಬರೆದಿದ್ದು ಎಂದು ಕೇಳಿದರೆ, ಜನರು ನೆನಪಿನಲ್ಲಿಟ್ಟುಕೊಂಡಿರಲಾರರು... ಆದರೆ, ಅದು "ಚಿನ್ನಾರಿ ಮುತ್ತ"ನ ಹಾಡು ಎಂದು ಎಲ್ಲರೂ ಬಲ್ಲರು.

ಒಬ್ಬ ಕವಿ, ತನ್ನ ಪಾಂಡಿತ್ಯದ ಬರವಣಿಗೆಗಳ ಚೌಕಟ್ಟಿನ ಹೊರಗೆ, ಸಾಮಾನ್ಯ ಜನರಿಗೆ ಹತ್ತಿರವಾಗುವಂತೆ ಬರೆದು, ಆ ಹಾಡಿನ ದನಿಯಾಗುವ ಮೂಲಕ ಪಡೆಯುವ ಧನ್ಯತೆ ಬಹಳ ದೊಡ್ಡದು. ಹೀಗೆ, ವೆಂಕಟೇಶ ಮೂರ್ತಿ ಅವರ ಅನೇಕ ಹಾಡುಗಳನ್ನ ಹೆಸರಿಸಬಹುದು.

***

ಒಬ್ಬ ಕವಿ, ಬರಹಗಾರನಿಗೆ ಸಲ್ಲುವ ನಾಡಿನ ಗೌರವಗಳಲ್ಲಿ, ಕನ್ನಡ ಸಾಹಿತ್ಯದ ಅಧ್ಯಕ್ಷತೆಯೂ ಒಂದು. 2020 ರಲ್ಲಿ ಕಲಬುರ್ಗಿಯಲ್ಲಿ ನಡೆದ 85 ನೇ ಅಖಿಲ ಭಾರತ ಕನ್ನಡ ಸಾಹಿತ್ಯದ ಸಮ್ಮೇಳನದ ಅಧ್ಯಕ್ಷತೆಯನ್ನು ವೆಂಕಟೇಶ ಮೂರ್ತಿಯವರು ವಹಿಸಿಕೊಂಡು, ಯಶಸ್ವಿಯಾಗಿ ಸಮ್ಮೇಳನವನ್ನು ನಡೆಸಿಕೊಟ್ಟಿದ್ದರು. ಈ ಸಂದರ್ಭದಲ್ಲಿ, ಅವರು ತಮ್ಮ ಭಾಷಣದಲ್ಲಿ ಪ್ರತಿನಿಧಿಸಿದ ಕನ್ನಡ ಪರ ಕಳಕಳಿ ಮತ್ತು ಕಾಳಜಿಯ ಮಾತುಗಳು ಇಂದಿಗೂ ನಮ್ಮ ಮನದಲ್ಲಿ ಅನುರಣಿಸುತ್ತವೆ.

HSV Publications:

'ಪರಿವೃತ್ತ', 'ಬಾಗಿಲು ಬಡಿವ ಜನಗಳು', 'ಮೊಖ್ತಾ', 'ಸಿಂದಬಾದನ ಆತ್ಮಕಥೆ', 'ಒಣ ಮರದ ಗಿಳಿಗಳು', 'ಮರೆತ ಸಾಲುಗಳು', 'ಸೌಗಂಧಿಕ', 'ಇಂದುಮುಖಿ', 'ಹರಿಗೋಲು', 'ವಿಸರ್ಗ', 'ಎಲೆಗಳು ನೂರಾರು', 'ಅಗ್ನಿಸ್ತಂಭ', 'ಎಷ್ಟೊಂದು ಮುಖ', 'ಅಮೇರಿಕದಲ್ಲಿ ಬಿಲ್ಲುಹಬ್ಬ', 'ವಿಮುಕ್ತಿ', 'ಭೂಮಿಯೂ ಒಂದು ಆಕಾಶ', 'ಮೂವತ್ತು ಮಳೆಗಾಲ' ಮುಂತಾದವು ಎಚ್‌ಎಸ್‌ವಿ ಅವರ ಕವನ ಸಂಕಲನಗಳು.

'ತಾಪಿ', 'ಅಮಾನುಷರು', 'ಕದಿರನ ಕೋಟೆ', 'ಅಗ್ನಿಮುಖಿ' ಕಾದಂಬರಿಗಳು. 'ಬಾನಸವಾಡಿಯ ಬೆಂಕಿ", 'ಪುಟ್ಟಾರಿಯ ಮತಾಂತರ' ಕಥಾ ಸಂಕಲನಗಳು.

ಬುದ್ಧಚರಣ ಅವರ ಇತ್ತೀಚಿನ ಮಹಾಕಾವ್ಯ.

ಎಚ್‌ಎಸ್‌ವಿ ಅವರ ನಾಟಕಗಳೆಂದರೆ 'ಹೆಜ್ಜೆಗಳು', 'ಒಂದು ಸೈನಿಕ ವೃತ್ತಾಂತ', 'ಕತ್ತಲೆಗೆ ಎಷ್ಟು ಮುಖ', 'ಚಿತ್ರಪಟ', 'ಉರಿಯ ಉಯ್ಯಾಲೆ', 'ಅಗ್ನಿವರ್ಣ', 'ಸ್ವಯಂವರ' ಮುಂತಾದವು.

ಸಾಹಿತ್ಯ ಚರಿತ್ರೆಯಲ್ಲಿ ಎಚ್‌ಎಸ್‌ವಿ ಅವರ 'ಕೀರ್ತನಕಾರರು' ಕನ್ನಡ ಸಾಹಿತ್ಯದ ಮಹತ್ವದ ಕೃತಿ. ಎಚ್‌ಎಸ್‌ವಿ ಅವರ ವಿಮರ್ಶಾ ಕೃತಿಗಳಲ್ಲಿ 'ನೂರು ಮರ, ನೂರು ಸ್ವರ', 'ಮೇಘದೂತ', 'ಕಥನ ಕವನ', 'ಆಕಾಶದ ಹಕ್ಕು' ಪ್ರಧಾನವಾಗಿವೆ. 'ಕ್ರಿಸ್ಮಸ್ ಮರ' ಅನುಭವ ಕಥನ. 'ಶತಮಾನದ ಕಾವ್ಯ' ಅವರ ಸಂಪಾದನೆ. ಕಾಳಿದಾಸನ 'ಋತುಸಂಹಾರ'ದ ಅನುವಾದ 'ಋತುವಿಲಾಸ'. 'ಸಿ.ವಿ.ರಾಮನ್', 'ಹೋಮಿ ಜಹಾಂಗೀರ ಭಾಭಾ', 'ಸೋದರಿ ನಿವೇದಿತಾ', 'ಬಾಹುಬಲಿ' ಮುಂತಾದವು ವ್ಯಕ್ತಿಚಿತ್ರಗಳ ಬರವಣಿಗೆಗಳಾಗಿವೆ.

'ಚಿನ್ನಾರಿ ಮುತ್ತ', 'ಕ್ರೌರ್ಯ', 'ಮತದಾನ', 'ಒಂದೂರಲ್ಲಿ' ಮುಂತಾದ ಚಿತ್ರಗಳಿಗೆ ಸಾಹಿತ್ಯ ಒದಗಿಸಿರುವುದಲ್ಲದೆ ಕಿರುತೆರೆ ಧಾರಾವಾಹಿಗಳಿಗೂ ಗೀತೆಗಳನ್ನು ರಚಿಸಿದ್ದರು.

'ಹಸಿರು ರಿಬ್ಬನ್' ಎಂಬ ಚಲನಚಿತ್ರವನ್ನೂ ನಿರ್ದೇಶಿಸಿದ್ದರು. ಇವರ ಹಲವಾರು ಭಾವಗೀತೆಗಳು ಧ್ವನಿಸುರುಳಿಗಳಾಗಿ ಕನ್ನಡಿಗರ ಮನ ಸೂರೆಗೊಂಡಿವೆ.

******

ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ
ಮಳೆ ಸುರಿಸಿ ಹಗುರಾದ ಮುಗಿಲಿನಂತೆ|

ತನ್ನೊಡಲ ತಾರೆಗಳ ಗುಡಿಸಿ ರಾಶಿಯ ಮಾಡಿ
ಬೆಳಕಿನುಂಡೆಯ ಬಾನಿಗುರುಳು ಬಿಟ್ಟು
ತನ್ನೊಡಲ ತಾರೆಗಳ ಗುಡಿಸಿ ರಾಶಿಯ ಮಾಡಿ
ಬೆಳಕಿನುಂಡೆಯ ಬಾನಿಗುರುಳು ಬಿಟ್ಟು
ಹೇಗೆ ಮರೆಯಾಗುವುದೊ ನಿರ್ಧನಿಕ ನಟ್ಟಿರುಳು
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು|

ತಾನು ಬಿಸಿಲಲಿ ನಿಂತು ತನ್ನ ಬಳಿ ಬರುವವಗೆ
ತಣ್ಣಗಿನ ಆಸರೆಯ ನೆರಳ ಕೊಟ್ಟು
ತಾನು ಬಿಸಿಲಲಿ ನಿಂತು ತನ್ನ ಬಳಿ ಬರುವವಗೆ
ತಣ್ಣಗಿನ ಆಸರೆಯ ನೆರಳ ಕೊಟ್ಟು
ಹೇಗೆ ಗೆಲುವಾಗುವುದೋ ಹಸಿರೆಲೆಯ ಹೊಂಗೆ ಮರ
ಹಾಗೆ ಬಾಳಿಸು ಗುರುವೆ ಪ್ರೀತಿಯಿಟ್ಟು|

ತಾನು ಕೆಸರಲಿ ಕುಸಿಯುತ್ತಿದ್ದರೂ ತಾವರೆಯು
ಮರಿದುಂಬಿಗಳ ಪೊರೆವ ತೊಟ್ಟಿಲಾಗಿ
ತಾನು ಕೆಸರಲಿ ಕುಸಿಯುತ್ತಿದ್ದರೂ ತಾವರೆಯು
ಮರಿದುಂಬಿಗಳ ಪೊರೆವ ತೊಟ್ಟಿಲಾಗಿ
ಹೇಗೆ ತಾಯ್ತನವನ್ನು ಪ್ರೀತಿಯಲಿ ಮೆರೆಯುವುದೋ
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು|

ದಾರಿಯುದ್ದಕೂ ಪೈರು ನಗುವಂತೆ ನೀರುಣಿಸಿ
ಹಾಲುತೆನೆಯಲಿ ಅಮೃತ ತುಂಬಿ ನದಿಯು
ದಾರಿಯುದ್ದಕೂ ಪೈರು ನಗುವಂತೆ ನೀರುಣಿಸಿ
ಹಾಲುತೆನೆಯಲಿ ಅಮೃತ ತುಂಬಿ ನದಿಯು
ಹೇಗೆ ದೂರದ ನೀಲಿಯಲ್ಲಿ ಕೊನೆಗೊಳ್ಳುವುದೋ
ಹೇಗೆ ದೂರದ ನೀಲಿಯಲ್ಲಿ ಕೊನೆಗೊಳ್ಳುವುದೋ
ಹಾಗೆ ಕೊನೆಗಾಣಿಸು ಕೃಪೆಯನಿಟ್ಟು|

******

ಚಿತ್ರ: ಚಿನ್ನಾರಿ ಮುತ್ತ (1993)
ಸಂಗೀತ: ಸಿ. ಅಶ್ವತ್
ಸಾಹಿತ್ಯ: H S ವೆಂಕಟೇಶಮೂರ್ತಿ

ರೆಕ್ಕೆ ಇದ್ದರೆ ಸಾಕೆ
ಹಕ್ಕಿಗೆ ಬೇಕು ಬಾನು
ಬಯಲಲಿ ತೇಲುತ ತಾನು
ಮ್ಯಾಲೆ ಹಾರೋಕೆ|

ಕಾಲೊಂದಿದ್ದರೆ ಸಾಕೆ
ಚಿಗರೆಗೆ ಬೇಕು ಕಾನು
ಗಾಳಿಯ ಮೇಲೆ ತಾನು
ಜಿಗಿದು ಆಡೋಕೆ|

ಹೂವೊಂದಿದ್ದರೆ ಸಾಕೆ
ಬ್ಯಾಡವೇ ಗಾಳಿ
ನೀವೇ ಹೇಳಿ
ಕಂಪ ಬೀರೋಕೆ
ಮುಖವೊಂದಿದ್ದರೆ ಸಾಕೆ
ದುಂಬಿಯ ತಾವ
ಬ್ಯಾಡವೇ ಹೂವ
ಜೇನ ಹೀರೋಕೆ|


ನೀರೊಂದಿದ್ದರೆ ಸಾಕೆ
ಬ್ಯಾಡವೇ ಹಳ್ಳ
ಬಲ್ಲವ ಬಲ್ಲ
ತೊರೆಯು ಹರಿಯೋಕೆ|

ಮೋಡ ಇದ್ದರೆ ಸಾಕೆ
ಬ್ಯಾಡವೇ ಭೂಮಿ
ಹೇಳಿ ಸ್ವಾಮಿ
ಮಳೆಯ ಸುರಿಯೋಕೆ|

ಕಣ್ಣೊಂದ್ದಿದ್ದರೆ ಸಾಕೆ
ಬ್ಯಾಡವೇ ಮಂದೆ
ಕಣ್ಣಿನ ಮುಂದೆ
ನಿಮಗೆ ಕಾಣೋಕೆ|
ಕೊರಳೊಂದಿದ್ದರೆ ಸಾಕೆ
ಬ್ಯಾಡವೇ ಹಾಡು
ಎಲ್ಲರ ಜೋಡಿ
ಕೂಡಿ ಹಾಡೋಕೆ|
***


************************************************************

## ಅಗಲಿದ ಲೇಖಕಿಗೆ ಬೃಂದಾವನದ ಅಶ್ರುತರ್ಪಣ



**ಶಾರದಾ ಮೂರ್ತಿ**
ಬೆಂಗಳೂರು

**ಶಾ**ರದಾ ಮೂರ್ತಿ ಅವರು ಹವ್ಯಾಸಿ ಲೇಖಕಿ. ರಾಜ್ಯ ಮಟ್ಟದ ದಿನಪತ್ರಿಕೆ, ವಾರಪತ್ರಿಕೆಗಳಲ್ಲಿ ಇವರ ಕಥೆ, ಕವನ, ಲೇಖನಗಳು ಪ್ರಕಟವಾಗಿವೆ. ಅಮೆರಿಕಾದ ಶಿಕಾಗೋ ನಗರದ ವಿದ್ಯಾರಣ್ಯ ಕನ್ನಡ ಸಂಘದ ಸಾಹಿತ್ಯೋತ್ಸವದಲ್ಲಿ ಭಾಗವಹಿಸಿ ಹಾಸ್ಯಲೇಖನ, ಕವನ ವಾಚನ ಮಾಡಿದ್ದಾರೆ. ಅಲ್ಲಿಯ 'ಸಂಗಮ' ಎನ್ನುವ ವಿಶೇಷಾಂಕದಲ್ಲಿ ಹಲವಾರು ವರ್ಷಗಳಿಂದ ಲೇಖನಗಳು ಪ್ರಕಟವಾಗುತ್ತಿವೆ. ಶಿವಮೊಗ್ಗ ಜಿಲ್ಲೆಯಲ್ಲಿ ಹುಟ್ಟಿದ ಇವರಿಗೆ ಮೊದಲಿನಿಂದಲೂ ಕನ್ನಡ ಭಾಷೆಯ ಮೇಲೆ ಅದಮ್ಯ ಪ್ರೀತಿ. ಹಾಗಾಗಿ ತಮ್ಮ 50ನೇ ವಯಸ್ಸಿನಲ್ಲಿ ಕನ್ನಡದಲ್ಲಿ ಎಂ. ಎ. ಪದವಿಯನ್ನು ಪಡೆದಿದ್ದಾರೆ. ಬ್ಯಾಂಕ್ ಅಧಿಕಾರಿ ಆಗಿದ್ದ ಪತಿಯ ಜೊತೆ ದೇಶಾದ್ಯಂತ ತಿರುಗಾಟ. ಬೇರೆಬೇರೆ ತರಹದ ಜನಜೀವನದ ಕುರಿತು ಕುತೂಹಲ ಹಾಗೂ ಕಾತುರ ಇವರದು. ದೆಹಲಿ ಹಾಗೂ ಕೊಲ್ಕತ್ತಾ ಕನ್ನಡ ಸಂಘಗಳಲ್ಲಿ ಸಕ್ರಿಯ ಕಾರ್ಯಕರ್ತೆಯಾಗಿ ಇವರು ಸೇವೆ ಸಲ್ಲಿಸಿದ್ದಾರೆ. ಹೀಗೆ, ಪ್ರವಾಸ, ಓದು, ಕಸೂತಿ, ಕಥೆ ಕವನ ಬರೆಯುವುದು, ನಾಟಕ ಆಡುವುದು ಶಾರದಾ ಮೂರ್ತಿ ಅವರ ಹವ್ಯಾಸಗಳು. ಇವರ ಪ್ರಥಮ ಕೃತಿ 'ಪಲಾಯನ ಮತ್ತು ಇತರ ಕತೆಗಳು'.




ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದ ಶ್ರೀಮತಿ ಶಾರದಾ ಮೂರ್ತಿಯವರು ಬೃಂದಾವನ ಕನ್ನಡ ಕೂಟದ ಯುಗಾದಿ ಸಂಭ್ರಮಕ್ಕೆಂದು ಒಂದು ಲೇಖನವನ್ನು ಮುಂಚಿತವಾಗಿಯೇ ಕಳುಹಿಸಿಕೊಟ್ಟಿದ್ದರು. "ಬೃಂದಾವನ ವಾಣಿ" ಯುಗಾದಿ ಸಂಚಿಕೆ ಬಿಡುಗಡೆಯಾಗುವ ಮುನ್ನವೇ ಶ್ರೀಮತಿ ಶಾರದಾ ಮೂರ್ತಿಯವರು ಆಕಸ್ಮಿಕವಾಗಿ ನಮ್ಮನ್ನು ಅಗಲಿದ್ದು ತೀರಾ ವಿಷಾದದ ಸಂಗತಿ. ಬೃಂದಾವನ ಕನ್ನಡ ಕೂಟ ಮತ್ತು ಅಮೆರಿಕದಲ್ಲಿರುವ ಸಮಸ್ತ ಕನ್ನಡಿಗರು ಅವರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ ಅವರ ಕುಟುಂಬಕ್ಕೆ ಸಂತಾಪವನ್ನು ಸೂಚಿಸುತ್ತಾರೆ.



**ನಳಿನಿ ನಾಗರಾಜ್**
ಕೆ ಜಿ ಎಫ್

# ಸ್ವಾಮಿನಾರಾಯಣ ಮಂದಿರ

**ಸ್ವಾಮಿನಾರಾಯಣ ಮಂದಿರ - 1**

**ನಾ**ನು ಅಮೇರಿಕಾಗೆ ಬಂದ ಆರನೆಯದಿನ ಶುಕ್ರವಾರ ಮಧ್ಯಾಹ್ನ ಮನೆಯ ಸಮೀಪದಲ್ಲೇ ಇರುವ ಸ್ವಾಮಿನಾರಾಯಣನ ದೇವಸ್ಥಾನಕ್ಕೆ ಮಗಳು ಮೊಮ್ಮಗಳೊಡನೆ ಭೇಟಿ ಕೊಟ್ಟೆ.

ಪ್ರವೇಶಮಾಡುವಾಗಲೇ 49ಅಡಿ ಎತ್ತರದ ಯೋಗಾಸನದ ಭಂಗಿಯಲ್ಲಿರುವ ಯುವ ಸ್ವಾಮಿನಾರಾಯಣನ ಬಂಗಾರದ ಮೂರ್ತಿಯು ಇದು ಆಧ್ಯಾತ್ಮಿಕ ಕಡೆ ನಮ್ಮನ್ನು ಕೊಂಡೊಯ್ಯುವುದನ್ನು ಸೂಚಿಸುತ್ತದೆ. 300ಎಕರೆಗೂ ಹೆಚ್ಚು ಪ್ರದೇಶವನ್ನು ಆವರಿಸಿರುವ ಭವ್ಯ ದೇಗುಲವನ್ನು ದೂರದಿಂದ ನೋಡಿದಾಗಲೇ ಮನಸ್ಸಿಗೆ ಮುದವಾಗುತ್ತದೆ.

ನಂತರ ಪ್ರಪಂಚದ 300 ನದಿಗಳನೀರಿನಿಂದ ಪವಿತ್ರವಾದ ಬ್ರಹ್ಮಕುಂಡ (ಭಾರತದ108ನದಿಗಳೂಸೇರಿ) ನೀರಿನ ಚಿಲುಮೆಗಳಿಂದ ಮನೋಲ್ಲಾಸವನ್ನುಂಟು ಮಾಡುವುದೇ ಅಲ್ಲದೆ ನೀರೇ ಜೀವನ ಎನ್ನುವ ತತ್ತ್ವವನ್ನು ಸಾರುತ್ತಿದೆ. ಇದರ ನಂತರ ಸ್ವಾಗತಕೇಂದ್ರ ಜಾತಿ,ಮತ,ದೇಶ,ಲಿಂಗಭೇದವಿಲ್ಲದೆ ಎಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ.

ಈ ಸ್ಥಳದಲ್ಲಿ ಅತ್ಯಂತ ಸುಂದರ ಉಡುಗೆ ಧರಿಸಿದ ವೈಭವೋಪೇತವಾಗಿ ಅಲಂಕೃತಗೊಂಡ ಸ್ವಾಮಿನಾರಾಯಣ ಹಾಗೂ ಅವರ ಕೆಲವು ಶಿಷ್ಯರಮೂರ್ತಿಗಳಲ್ಲದೆ;

ರಾಧಾಕೃಷ್ಣ, ಸೀತಾ ಲಕ್ಷ್ಮಣ ಆಂಜನೇಯ ಸಹಿತನಾದ ಶ್ರೀರಾಮ, ಪಾರ್ವತೀ ಕುಮಾರಸ್ವಾಮಿ ಗಣೇಶ ಇವರೊಡನಿರುವ ಶಿವ ಇವರುಗಳ ಮನಮೋಹಕ ಮೂರ್ತಿಗಳು ಚಿನ್ನದ ಲೇಪನದ ಚೌಕಟ್ಟಿನೊಳಗಡೆ ರಾರಾಜಿಸುತ್ತಿವೆ.

ಇನ್ನು ಈಸ್ಥಳದ ಶಿಲ್ಪಕಲಾವೈಭವವನ್ನು ವರ್ಣಿಸಲು ಪದಗಳು ಸಾಲವು. ಭಿತ್ತಿಗಳು (ಗೋಡೆಗಳು),ಸ್ತಂಭಗಳು ಅಮೃತಶಿಲೆಯಿಂದ ನಿರ್ಮಿಸಲ್ಪಟ್ಟ ಸೂಕ್ಷ್ಮ ಕೆತ್ತನೆಗಳಿಂದ ನೋಡುಗರನ್ನು ಮೂಕವಿಸ್ಮಿತರನ್ನಾಗಿಸುತ್ತವೆ. ಶಿಲ್ಪಗಳಲ್ಲಿ ಎಷ್ಟೊಂದು ಬಗೆಯ ಪ್ರಾಣಿಪಕ್ಷಿಗಳು, ತಾಯಿ ತನ್ನ ಮಗುವಿನೊಡನೆ ಆಡುತ್ತಿರುವ ವಿವಿಧ ಭಂಗಿಗಳು, ವಿವಿಧ ಸಂಗೀತ ವಾದ್ಯಗಳನ್ನು ನುಡಿಸುತ್ತಿರುವ ಶಿಲ್ಪಗಳು.ಅತ್ಯಂತ ಸೂಕ್ಷ್ಮ ಕುಸುರಿ ಕಲೆಯಿಂದ ಅಲಂಕೃತವಾದ ಮೇಲ್ ಛಾವಣಿಗಳು. ಅಬ್ಬಬ್ಬ ಸ್ವರ್ಗವೇ ಧರೆಗಿಳಿದಂತಿದೆ.

ಎಲ್ಲವನ್ನೂ ಭಾರತದಲ್ಲಿ ಕೆತ್ತಿಸಿ ಹಡಗುಗಳ ಮೂಲಕ ತರಿಸಲಾಗಿದೆ. ಇದು ಭಾರತದ ಉತ್ಕೃಷ್ಟ ಶಿಲ್ಪಕಲೆ, ಶ್ರೇಷ್ಠ ವಾಸ್ತುಶಿಲ್ಪ ಆಳವಾದ ಆಧ್ಯಾತ್ಮಿಕ ಜ್ಞಾನ ಇವೆಲ್ಲವನ್ನೂ ಬಿಂಬಿಸುತ್ತಿದೆ. ಮೂಲ ದೇವ ಸ್ಥಾನಕ್ಕೆ ಇನ್ನೊಮ್ಮೆ ನಿಮ್ಮನ್ನು ಕರೆದೊಯ್ಯುತ್ತೇನೆ.



**ಸ್ವಾಮಿನಾರಾಯಣ ಮಂದಿರ - 2**

ವಿಶಾಲವಾದ ದೇವಸ್ಥಾನದ ಹೃದಯಭಾಗದಲ್ಲಿರುವುದೇ ಸ್ವಾಮಿನಾರಾಯಣನ ಮಂದಿರ. ಇದನ್ನು ಅಕ್ಷರಧಾಮವೆಂದೂ ಹೆಸರಿಸುತ್ತಾರೆ. ಪ್ರಪಂಚದ ಎಲ್ಲಾ ಚೇತನಾಚೇತಗಳೂ ಕ್ಷರವಾದದ್ದು ನಾಶಹೊಂದುವಂತಹುದು. ಅಕ್ಷರ ಅಥವಾ ಅವಿನಾಶಿ ಒಂದೇ. ಅದೇ ಪುರುಷೋತ್ತಮ. ಭಗವಾನ್ ಕೃಷ್ಣನೇ ಗೀತೆಯಲ್ಲಿ ಹೇಳಿದ್ದಾನೆ.

"ಯಸ್ಮಾತ್ಕ್ಷರಮತೀತೋಹಮ್
ಅಕ್ಷರಾದಪಿ ಚೋತ್ತಮಃ।
ಅತೋಸ್ಮಿ ಲೋಕೇ ವೇದೇ ಚ
ಪ್ರಥಿತಃ ಪುರುಷೋತ್ತಮಃ" ॥

ಮೊದಲು ನಾವು ಹೋಗುವುದು ಜಾಗತಿ ಪೀಠದ ಮೂಲಕ. ಇದರ ಮೇಲೇ ಮಹಾಮಂದಿರ ನಿಂತಿರುವುದು. ಇದು ವಿವೇಕಸ್ಥಳ. ಇದರ ಭಿತ್ತಿಗಳ ಮೇಲೆ ಪ್ರಪಂಚದ ಬೇರೆ ಬೇರೆ ದಾರ್ಶನಿಕರ ಚಿಂತನೆಯ ವಾಕ್ಯಗಳು ಹಾಗೂ ವೇದೋಪನಿಷತ್ತುಗಳ ತತ್ತ್ವಗಳೂ, ಭಗವಾನ್ ಸ್ವಾಮಿನಾರಾಯಣರವರ ವಿಚಾರವಾಕ್ಯಗಳೂ ಒಡಮೂಡಿವೆ.

ಪ್ರತಿ ಕಲ್ಲಿನಮೇಲೂ ಸೂಕ್ಷ್ಮಾತಿಸೂಕ್ಷ್ಮ ಕೆತ್ತನೆಗಳಿವೆ. ಮುಂದಿನದು ಮಂಡೋವರ್. ಇದು ಹಿಂದೂ ಕಲೆಸಂಸ್ಕೃತಿಗಳನ್ನು ಬಿಂಬಿಸುತ್ತವೆ. ಇಲ್ಲಿನಸ್ತಂಭಗಳಮೇಲೆ ಭರತನಾಟ್ಯದ ವಿವಿಧ ಭಂಗಿಗಳು ಕೆತ್ತಲ್ಪಟ್ಟಿವೆ. ಜಾನಪದ ಹಾಗೂ ಶಾಸ್ತ್ರೀಯ ಗಾಯನಗಳಲ್ಲಿ ಬಳಸುವ ವಾದ್ಯ ವಿಶೇಷಗಳನ್ನು ಕೆತ್ತಲಾಗಿದೆ.

ಈ ಸ್ಥಳದಲ್ಲಿ ನಮಗೆ ಜ್ಞಾನವನ್ನು ವಿತರಿಸಿರುವ ನಮ್ಮಸನಾತನ ಋಷಿಮುನಿಗಳ ಶಿಲ್ಪಗಳನ್ನೂ ಕಾಣಬಹುದು.ಇನ್ನು ತೀರ್ಥಮಂಟಪಕ್ಕೆ ಹೋದರೆ ನಮ್ಮ ತೀರ್ಥಸ್ಥಳಗಳ ಹಾಗೂ ಪವಿತ್ರ ನದಿಗಳ ಶಿಲ್ಪಗಳನ್ನು ಛಾವಣಿಯಲ್ಲಿ ನೋಡಬಹುದು. ಇಲ್ಲಿ ಗಣೇಶನಮೂರ್ತಿಯೂ ಕಾಣಸಿಗುತ್ತದೆ. ಮುಕ್ತಮಂಟಪದಲ್ಲಿ ಮುಕ್ತಾತ್ಮರ ಸುಂದರವಿಗ್ರಹಗಳಿವೆ.

ಪರಮಹಂಸಮಂಟಪದಲ್ಲಿ ಸ್ವಾಮಿನಾರಾಯಣರ ಸಹಾಯದಿಂದ ಮೇಧಾವಿಗಳೂ ಜ್ಞಾನಿಗಳೂ ಆದ 500 ಸಾಧುಗಳು ಅತ್ಯುನ್ನತ ಪದವಿಯಾದ ಪರಮಹಂಸಪಟ್ಟಕ್ಕೇರಿದ ಸಂತರ ಮನೋಹರ ವಿಗ್ರಹಗಳು ಇಲ್ಲಿವೆ. ಈ ಸಂತರಕಂಠದಲ್ಲಿ ತೂಗುತ್ತಿರುವ ಹೂವಿನಹಾರಗಳು ಭಿನ್ನ ಭಿನ್ನ ವೂ ಅತ್ಯಂತ ಸುಂದರವೂ ಆಗಿವೆ.

ಮುಂದಿನ ಗರ್ಭಗೃಹದಲ್ಲಿ ಸ್ವಾಮಿನಾರಾಯಣರ ಪರಂಪರೆಗೆ ಸೇರಿದ ಹನ್ನೆರಡು ಶಿಷ್ಯರ ವಿಗ್ರಹಗಳಿವೆ. ಗರ್ಭಗೃಹ ಮಧ್ಯಭಾಗದಲ್ಲಿ ಭಗವಂತನಸಾಕಾರವೆನಿಸುವ ಸ್ವಾಮಿನಾರಾಯಣರ ಹಾಗೂ ಅವರ ಪ್ರಥಮಶಿಷ್ಯರ ದೈವೀಕ ಪ್ರತಿಮೆಗಳಿವೆ. ಈ ಪ್ರತಿಮೆಗಳು ದಿವ್ಯಶಕ್ತಿಯ ಪ್ರೇಮಾನುಭವ ಜೀವನಮೌಲ್ಯಗಳ ಅರಿವನ್ನುಂಟುಮಾಡುತ್ತವೆ.

ಈ ಮಂದಿರದಲ್ಲೂ ಸಾಲಂಕೃತ ಶ್ರೀಸೀತಾರಾಮ, ಶ್ರೀರಾಧಾಕೃಷ್ಣ, ಶ್ರೀ ಉಮಾಮಹೇಶ್ವರ, ತಿರುಪತಿ ವೆಂಕಟೇಶ್ವರ ಪದ್ಮಾವತೀ (ಇದು ಮಾತ್ರ ಕಪ್ಪು ಶಿಲೆಯದು), ನಮ್ಮ ಕಣ್ಣಿಗೆ ಹಬ್ಬವನ್ನೂ ಮನಕ್ಕೆ ಮುದವನ್ನೂ ನೀಡುತ್ತವೆ.

ಈ ಕಲಾವೈಭವವು ' ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು' ಎಂಬ ವಾಕ್ಯವನ್ನು ಸ್ಮರಣೆಗೆ ತರುತ್ತದೆ.

ಮಂದಿರದ ಹೊರಬರುವಾಗ ಆನಂದದ ಅನುಭೂತಿಯಾಗುತ್ತದೆ.

'ಸತ್ಯಂ ಶಿವಂ ಸುಂದರಂ ' ಈ ವಾಕ್ಯದ ಸಾಕಾರ ರೂಪ ಈ ಮಂದಿರ.





**ವಾಣಿ ಗಿರೀಶ್**
ನ್ಯೂ ಜೆರ್ಸಿ

# ನಾನು ಕಂಡ ಪೂರ್ಣ ಮಹಾಕುಂಭ!

**ಜ**ನವರಿ ೧೧, ೨೦೨೫, ನಾನು ಲ್ಯಾಪ್‌ಟಾಪ್ ಮುಚ್ಚಿ ಮೊಬೈಲ್ ತೆಗೆದುಕೊಂಡಾಗ ಎಲ್ಲೆಲ್ಲೂ ಒಂದೇ ಸುದ್ದಿ ಹರಡಿತ್ತು – ಪೂರ್ಣ ಮಹಾಕುಂಭ. ೧೨ ವರ್ಷಕ್ಕೊಮ್ಮೆ ಬರುವ ಕುಂಭಮೇಳ, ಆದರೆ ಈ ಬಾರಿಯದು ವಿಶೇಷ: ೧೪೪ ವರ್ಷಗಳಲ್ಲಿ ಒಂದೇ ಬಾರಿಗೆ ಬರುವ ಪೂರ್ಣ ಮಹಾಕುಂಭ ಎಂಬುದು ತಿಳಿಯುತ್ತಿದ್ದಂತೆಯೇ, ನನ್ನ ಕುತೂಹಲ ಹೆಚ್ಚಾಯಿತು. ಗ್ರಹಗತಿಯ ವಿಶಿಷ್ಟ ಸಮಾಗಮ, ತ್ರಿವೇಣಿ ಸಂಗಮದ ಪವಿತ್ರತೆಯ ಅಂತರಾಳ – ನಾನು ಕುಂಭಕ್ಕೆ ಹೋಗಲೇಬೇಕು ಎನ್ನುವ ತೀವ್ರ ಇಚ್ಛೆ ಹುಟ್ಟಿಕೊಂಡಿತು.

ಜನವರಿ ೧೩ರಿಂದ ಆರಂಭವಾದ ಮಹಾಕುಂಭ, ಜನವರಿ ೧೪ರಂದು ಮೊದಲ ಶಾಹಿ ಸ್ನಾನ – ಇದನ್ನು ನೋಡಿ ನನ್ನ ಮನಸ್ಸು ತಡಕಾಡಿತು. ನಾನಿರುವುದು ಅಮೆರಿಕದಲ್ಲಿ, ಧೀಡಿರಂತ ಹೇಗೆ ಎಲ್ಲಾ ಪ್ಲಾನ್ ಮಾಡೋದು ಅಂತ ಯೋಚಿಸತೊಡಗಿದೆ. ಪ್ರತಿದಿನ ಮಹಾಕುಂಭದ ಕುರಿತ ಅಧ್ಯಯನ ಮತ್ತು ತೀವ್ರ ಅನುಭವದ ಸಂಕಲನ ನನ್ನ ದಿನಚರಿಯಾಯಿತು.

ಸೋಶಿಯಲ್ ಮೀಡಿಯಾದ ರೀಲ್ಸ್‌ಗಳಲ್ಲಿರುವ "ಪ್ರಥಮ್ ಯಜ್ಞ ಭೂಖಂಡಧರಾ ಸೇ" ಮತ್ತು "ಚಲೋ ಕುಂಭ ಚಲೋ" ಹಾಡುಗಳು ಮಹಾಕುಂಭದ ಭಕ್ತಿಗೀತೆಗಳಾಗಿ, ನನ್ನನ್ನು ಆಗಲೇ ಪರೋಕ್ಷವಾಗಿ ಪ್ರಯಾಗರಾಜವನ್ನು ತಲುಪಿಸಿದ್ದವು. ಕೊನೆಗೂ ನಮ್ಮ ಮನೆಯವರನ್ನು ಒಪ್ಪಿಸಿ, ಜನವರಿ ೧೫ರಂದು ನಾವು ಎಲ್ಲಾ ಟಿಕೆಟ್‌ಗಳನ್ನು ಬುಕ್ ಮಾಡಿದ್ದೆವು. ಆ ಕ್ಷಣ ನನ್ನ ಸಂತೋಷಕ್ಕೆ ಪಾರವೇ ಇಲ್ಲದಾಯಿತು! ಅಪ್ಪ, ಅಮ್ಮ ಮತ್ತು ತಂಗಿಯರಿಗೆ ವಿಷಯ ತಿಳಿಸಿದಾಗ ಅವರಿಗೆ ಆಶ್ಚರ್ಯದ ಜೊತೆಗೆ ಸಂತೋಷವೂ ಆಗಿತ್ತು. ಮೊದಲಿನಿಂದಲೇ ಕುಂಭದ ಬಗ್ಗೆ ಕೆಲವು ಆತಂಕಗಳು ಇದ್ದರೂ ಈ ಬಾರಿಗೆ ಸರಕಾರದಿಂದ ಉತ್ತಮ ವ್ಯವಸ್ಥೆಗಳಿವೆ ಎಂಬ ಸುದ್ದಿ ನಮ್ಮಲ್ಲೊಂದು ನಂಬಿಕೆಯನ್ನು ನೀಡಿತು.

ಅಂದಹಾಗೆ, ‘ನಾವು ಮನಃಪೂರ್ವಕವಾಗಿ ಇಷ್ಟಪಟ್ಟಿದ್ದನ್ನು ನಮಗೆ ನೀಡಲು ಸಂಪೂರ್ಣ ಬ್ರಹ್ಮಾಂಡ ಸಹಕರಿಸುತ್ತದೆ’ ಅಂತಾರಲ್ಲ ಹಾಗೆ, ಫೆಬ್ರವರಿ ೨೧ರ ಸಾಯಂಕಾಲ, ನ್ಯೂಜೆರ್ಸಿಯಿಂದ ವಿಮಾನ ಹತ್ತಿ ನೇರವಾಗಿ ಭಾರತದ ರಾಜಧಾನಿ ದೆಹಲಿಗೆ ಫೆಬ್ರವರಿ ೨೨ರ ರಾತ್ರಿ ತಲುಪಿದ್ದೆವು. ಮಾರನೇ ದಿನ ಪ್ರಯಾಗರಾಜನಲ್ಲಿ ವಿಮಾನ ಸ್ವಲ್ಪ ತಡವಾಗಿ ನಡೆದರೂ, “ಕುಂಭ ಚಲೋ” ಎಂಬ ಉತ್ಸಾಹ ಮಾತ್ರ ಇನ್ನು ಹೆಚ್ಚುತ್ತಲೇ ಇತ್ತು. ಅಂದು ಇಂಡಿಗೋ ವಿಮಾನದಲ್ಲಿ ಎಲ್ಲ ಯಾತ್ರಿಗಳು ಒಟ್ಟಾಗಿ “ಜೈ ಶ್ರೀ ರಾಮ್!”, “ಹರ್ ಹರ್ ಗಂಗೆ!”, “ಜೈ ಪೂರ್ಣ ಮಹಾಕುಂಭ!” ಎಂದು ಸಂಭ್ರಮದಿಂದ ಜಯಘೋಷ ಹಾಕಿದಾಗ, ಮೈ ನವಿರೇಳಿತು – ಆಹಾ, ಅದೆಂಥ ಸುಂದರ ಅನುಭವ!

ಸುಮಾರು ಬೆಳಿಗ್ಗೆ ೧೧:೩೦ ಕ್ಕೆ, ಪೂರ್ಣ ಮಹಾಕುಂಭದ ಆ ಪುಣ್ಯಘಳಿಗೆಯಲ್ಲಿ ಆ ಪುಣ್ಯಭೂಮಿ ಪ್ರಯಾಗರಾಜಲ್ಲಿ ನಾನು ಮತ್ತು ನನ್ನ ಯಜಮಾನರು ಪಾದಾರ್ಪಣೆ ಮಾಡಿದೆವು. ಅಲ್ಲಿಯ ವಾತಾವರಣ ನಮ್ಮ ದೇಹದಲ್ಲಿ ಒಂದು ತರಹದ ಸಕಾರಾತ್ಮಕ ಶಕ್ತಿಯನ್ನು ತಂದುಕೊಟ್ಟಿತು. ಅಲ್ಲಿಂದ ನೇರವಾಗಿ ನಾವು ಬುಕ್ ಮಾಡಿದ ಹೋಟೆಲ್‌ನವರು ಕಳುಹಿಸಿದ ಟ್ಯಾಕ್ಸಿಯಿಂದ ಹೋಟೆಲಿಗೆ ತಲುಪಿದೆವು.

ಅಂದು ಸಾಯಂಕಾಲ ಲೇಟೇಹುವೇ ಹನುಮಾನ್ ಮಂದಿರ ಅಂತ ಕರೆಯುವ ಆಂಜನೇಯ ದೇವಸ್ಥಾನಕ್ಕೆ ಹೋದೆವು. ಆಂಜನೇಯನು ಶ್ರೀರಾಮನಿಗೆ ಸೀತಾಮಾತೆಯನ್ನ ಕರೆದೊಯ್ಯಲು ಸಹಾಯ ಮಾಡಿದ ನಂತರ ಸುಸ್ತಾಗಿ ಇಲ್ಲಿ ಬಂದು ಮಲಗಿದನೆಂದು ಈ ದೇವಸ್ಥಾನ ಪ್ರಸಿದ್ಧವಾಗಿದೆ. ಹೋಗುವಾಗ ತುಂಬಾ ಸುಲಭವಾಗಿ ನಮ್ಮ ಹೋಟೆಲ್ ಮುಂದೆನೇ ಈ-ರಿಕ್ಷಾ ಸಿಕ್ಕಿತು. ಈ-ರಿಕ್ಷಾಯಿಂದ ದೇವಸ್ಥಾನದ ಎದುರುಗಡೆ ಇಳಿದೆವು. ಆಗ ನಮಗೆ ಈ ಪೂರ್ಣ ಮಹಾಕುಂಭದ ಜನಸಾಗರದ ನಿಜವಾದ ಅನುಭವವಾಯಿತು – ಅಬ್ಬಾ, ಕಾಲು ಇಡಲು ಜಾಗವಿಲ್ಲ, ಜನಜಾತ್ರೆ ಎಲ್ಲೆಲ್ಲೂ ಜನಜಂಗುಳಿ. ದೇವಾಲಯದ ಮಹಾದ್ವಾರ ಯಾವುದು, ಎಲ್ಲಿಂದ ಒಳಗೆ ಹೋಗುವುದು ಎಂಬುದು ಒಂದೂ ಗೊತ್ತಾಗುತ್ತಿರಲಿಲ್ಲ.

ನಾವು ಒಬ್ಬರ ಕೈ ಒಬ್ಬರು ಹಿಡಿದುಕೊಂಡು, ಜನಪ್ರವಾಹದೊಂದಿಗೆ ಮುನ್ನುಗ್ಗುತ್ತ ಹೊರಟೆವು. ಕೈ ಬಿಟ್ಟರೆ ಕಳೆದುಹೋಗುವುದು ಖಂಡಿತ. ನೀವು ಒಂದು ಕ್ಷಣ ಮೈಮರೆತರೆ ಜನಸಾಗರ ನಿಮ್ಮನ್ನು ಎಲ್ಲೋ ತಳ್ಳಿಕೊಂಡು ಹೋಗುವ ಸ್ಥಿತಿ. ಸ್ವಲ್ಪ ದೂರ ಸಾಗಿದ ಬಳಿಕ, ಭದ್ರತೆಗಾಗಿ ಪೋಲಿಸರು ಜನರನ್ನು ಗುಂಪು ಗುಂಪಾಗಿ ದೇವಾಲಯದೊಳಗೆ ಬಿಡುತ್ತಿದ್ದರು. ನಮಗೂ ಸುಮಾರು ಹೊತ್ತು ಕಾದ ನಂತರ ದೇವರ ದರ್ಶನ ಮತ್ತು ಪ್ರಸಾದ ಲಭ್ಯವಾಯಿತು. ಅಲ್ಲಿಂದ ಮುಂದೆ ದಾರಿಯಲ್ಲಿ ಇದ್ದ ಶ್ರೀ ಆದಿ ಶಂಕರಾಚಾರ್ಯರ ವಿಮಾನ ಮಂಟಪವನ್ನು ನೋಡಿ ಕೈಮುಗಿದು, ಕೆಲವು ಫೋಟೋಗಳನ್ನೂ ತೆಗೆದುಕೊಂಡೆವು.

ಅದಾದ ನಂತರ “ಮಹಾಕುಂಭ ಡಿಜಿಟಲ್ ಅನುಭವ ಕೇಂದ್ರ”ಕ್ಕೆ ಹೋದೆವು. ಇಲ್ಲಿ ಸಮುದ್ರಮಂಥನದ ಕಥೆ, ಮಹಾಕುಂಭದ ಇತಿಹಾಸ, ಕುಂಭಮೇಳ ನಡೆಯುವ ನಾಲ್ಕು ಪುಣ್ಯಕ್ಷೇತ್ರಗಳ ಮಹತ್ವ, ಯೋಗಚಕ್ರಗಳ ವಿವರಣೆ – ಎಲ್ಲವೂ ಅವಿಸ್ಮರಣೀಯ ಅನುಭವವಾಗಿತ್ತು. ಅಷ್ಟರಲ್ಲಿ ರಾತ್ರಿ ೯:೩೦. ಕೋಕೋ-ಕೋಲಾ ಪೆಂಡಾಲ್‌ನಲ್ಲಿ ಚೋಲೆ-ಪೂರಿ, ಹಲ್ವಾ ತಿಂದು, ಟೀ ಕುಡಿದು ಹೋಟೆಲ್ ಕಡೆ ಹೊರಟೆವು. ನಾವು ಈ-ರಿಕ್ಷಾವನ್ನು ಹುಡುಕಿಕೊಂಡು ೨–೩ ಕಿಲೋಮೀಟರ್ ನಡೆಬೇಕಾಯಿತು. ಹೇಗೋ ಒಂದು ಈ-ರಿಕ್ಷಾ ಸಿಕ್ಕಿತು, ಮಧ್ಯರಾತ್ರಿ ೧೨:೩೦ ಕ್ಕೆ ಹೋಟೆಲಿಗೆ ತಲುಪಿದೆವು.

# ಪ್ರವಾಸ ಕಥನ

‘ಪ್ರ’ ಎಂದರೆ ಪ್ರಥಮ, ‘ಯಾಗ’ ಎಂದರೆ ಯಜ್ಞ. ಬ್ರಹ್ಮದೇವನು ಈ ಬ್ರಹ್ಮಾಂಡವನ್ನು ಸೃಷ್ಟಿಸಿದ ಬಳಿಕ ಮೊದಲ ಯಜ್ಞವನ್ನು ಮಾಡಿದ ಸ್ಥಳವೆಂದರೆ ಪ್ರಯಾಗರಾಜ್. ಆದ್ದರಿಂದಲೇ ಈ ಕ್ಷೇತ್ರಕ್ಕೆ ‘ಪ್ರಯಾಗ’ ಎಂಬ ಹೆಸರು ಬಂದಿದೆ ಎಂಬ ನಂಬಿಕೆ ಇದೆ. ಪ್ರಯಾಗರಾಜ್‌ನಲ್ಲಿದ್ದ ನಮ್ಮ ಎರಡನೇ ದಿನವೇ ಈ ಯಾತ್ರೆಯ ಡೀ ಡೇ ಆಗಿತ್ತು – ತ್ರಿವೇಣಿ ಸಂಗಮದಲ್ಲಿ ದಿವ್ಯ ತೀರ್ಥಸ್ನಾನ ಮಾಡುವ ಪವಿತ್ರ ಕ್ಷಣ! ವಿಶೇಷವೇನೆಂದರೆ, ನಮ್ಮ ಟ್ರಿಪ್‌ಗೆ ‘ಜೆಟ್ ಲ್ಯಾಗ್’ ಸಹಾಯಕರವಾಯಿತೆಂದರೆ ನೀವು ನಂಬುತ್ತೀರಾ? ಪ್ರತಿದಿನವೂ ಬೆಳಗಿನ ಜಾವ ೩:೩೦ ಕ್ಕೆ ಎಚ್ಚರವಾಗುತ್ತಿತ್ತು. ಎಲ್ಲೆಡೆ ಸರಿಯಾದ ಸಮಯಕ್ಕೆ ಹೋಗಲು ಅನುಕೂಲವಾಯಿತು. ಜೊತೆಗೆ ಅಮೆರಿಕದಲ್ಲಿದ್ದ ನಮ್ಮ ಮಕ್ಕಳೊಂದಿಗೆ ಮಾತನಾಡಲು ಸಹ ಸರಿಯಾದ ಸಮಯ ಸಿಗುತ್ತಿತ್ತು!

ಗಿರೀಶ್ ಅವರು ಆನ್‌ಲೈನ್ ಮೂಲಕ ಸಂಗಮಕ್ಕೆ ಬೋಟ್ ಬುಕ್ ಮಾಡಿದ್ದರು, ಆದರೆ ಅಲ್ಲಿಗೆ ಕಾರುಗಳು ಹೋಗಲಾರದಷ್ಟು ಟ್ರಾಫಿಕ್‌ನ ನಿಯಂತ್ರಣವಿತ್ತು. ಹೋಟೆಲ್ ಸಿಬ್ಬಂದಿಯ ಸಲಹೆಯಂತೆ ಬೈಕ್ ಮೂಲಕ ಹೋಗಬೇಕಾಗಿ ಬಂತು. ಬೈಕು ಸವಾರರು ನಮ್ಮನ್ನು ಕಷ್ಟದ ರಸ್ತೆಗಳು, ಜನಸಾಗರ ದಾಟಿಸಿ ಸುರಕ್ಷಿತವಾಗಿ ಬೋಟ್ ಕ್ಲಬ್‌ಗೆ ತಲುಪಿಸಿದರು. ಅಲ್ಲಿ ಅಷ್ಟು ಜನ ಸೇರಿರಲಿಲ್ಲ. ನಾವು ಮುಂಚಿತವಾಗಿ ಬುಕ್ ಮಾಡಿದ್ದರಿಂದ ಸಹಾಯವಾಯಿತು. ನಂತರ ನಾವು ಯಮುನಾ ನದಿಯ ತಟದಲ್ಲಿ ನಿಂತು, ನೀರನ್ನು ಮುಟ್ಟಿ ನಮಸ್ಕರಿಸಿದೆವು. ಅಬ್ಬಬ್ಬಾ! ಎಲ್ಲೆಡೆ ಜನರಸಾಗರ. ಪ್ರತಿಯೊಬ್ಬರ ಮುಖದಲ್ಲೂ ಅದೇ ನಿರೀಕ್ಷೆ: ಮಹಾಕುಂಭದಲ್ಲಿ ಮಿಂದು ಪುನೀತರಾಗುವ ಬಯಕೆ.

ಅಷ್ಟರಲ್ಲಿ ಬೋಟ್ ಸಿಬ್ಬಂದಿ ನಮ್ಮ ಹೆಸರನ್ನು ಕೂಗಿದರು. ನಾವು ಹೋಗಿ ಆ ಮೊಟಾರ್ ಬೋಟ್‌ನಲ್ಲಿ ಲೈಫ್ ಜಾಕೆಟ್ ಧರಿಸಿ ಕುಳಿತೆವು. “ಹರ್ ಹರ್ ಗಂಗೆ!” ಎಂಬ ಘೋಷಣೆಯೊಂದಿಗೆ, ಬೋಟ್ ನದಿಗೆ ಹಾರಿ ಹೊರಟಿತು. ಸುಮಾರು ೧೦ ನಿಮಿಷದ ನಂತರ, ಬೋಟ್ ಚಾಲಕ ನಮ್ಮ ಬಲಭಾಗದಲ್ಲಿ ಯಮುನಾ ನದಿ ಮತ್ತು ಎಡಭಾಗದಲ್ಲಿ ಗಂಗಾ ನದಿ ಹರಿಯುತ್ತಿರುವುದನ್ನು ತೋರಿಸಿದರು. ಗಂಗೆಯ ನೀರು ಯಮುನಾನದಿಗಿಂತ ಸ್ವಲ್ಪ ಹೆಚ್ಚು ತಿಳಿಯಾಗಿದ್ದು, ನದಿಗಳ ಸೇರುವಿಕೆ ಸ್ಪಷ್ಟವಾಗಿ ಕಾಣುತ್ತಿತ್ತು. ನಮ್ಮೆಲ್ಲರ ನಂಬಿಕೆಯಂತೆ, ಸರಸ್ವತಿ ನದಿಯೂ ಸೇರಿಕೊಂಡು ಈ ತ್ರಿವೇಣಿ ಸಂಗಮದ ನಿರ್ಮಾಣವಾಗಿದೆ, ಆದರೆ ಅದು ಅಂತರ್ಮುಖಿಯಾಗಿರುವರಿಂದ ಕಣ್ಣಿಗೆ ಕಾಣುವುದಿಲ್ಲ.

ಬೋಟ್ ತ್ರಿವೇಣಿ ಸಂಗಮ ಪಾಯಿಂಟ್‌ನಲ್ಲಿ ನಿಂತಿತು. ಕೊನೆಗೂ ನಾವು ಅಷ್ಟು ದಿನಗಳಿಂದ ಕಾತುರದಿಂದ ಕಾಯುತ್ತಿದ್ದ ಘಳಿಗೆ ಬಂದುಬಿಟ್ಟಿತು. ಬೋಟಿನಿಂದ ತ್ರಿವೇಣಿ ಸಂಗಮದ ನೀರಿಗೆ ಕಾಲಿಡುವ ಮೊದಲು ಬಗ್ಗಿ ನೀರನ್ನು ನಮಸ್ಕರಿಸಿ ತಲೆಯ ಮೇಲೆ ಪ್ರೋಕ್ಷಣೆ ಮಾಡಿಕೊಂಡು ಕೆಳಗೆ ಇಳಿದೆವು. ನಾವಿಬ್ಬರೂ ಒಟ್ಟಿಗೆ ತ್ರಿವೇಣಿ ಸಂಗಮದ ನೀರಿನಲ್ಲಿ ಕೈ ಮುಗಿದು ಇಳಿದೆವು – ಆಹಾ! ಪರಮಾನಂದ! ಅದೆಂಥ ಹೇಳಲಾಗದ ಪರಿಪೂರ್ಣ ಆತ್ಮಾನುಭವ, ನಮ್ಮ ತನುಮನವನ್ನು ಆವರಿಸಿದಂತಿತ್ತು. ತ್ರಿವೇಣಿ ಸಂಗಮದಲ್ಲಿ ಮೂರು ಬಾರಿ ಮಿಂದು, ಅಮೃತ ಸ್ನಾನ ಮಾಡಿ ಪುನೀತರಾದೆವು.ನಮ್ಮ ವಿಡಿಯೋ ಮತ್ತು ಫೋಟೋಗಳನ್ನು ತೆಗೆದುಕೊಂಡೆವು. ನನಗಂತೂ ನೀರನ್ನು ಬಿಟ್ಟು ಹೊರಗೆ ಬರುವ ಮನಸ್ಸೇ ಆಗುತ್ತಿಲ್ಲ.

ನಾನು ನನ್ನ ಅಪ್ಪ-ಅಮ್ಮನಿಗೆ ವಿಡಿಯೋ ಕಾಲ್ ಮಾಡಿ, “ನಿಮ್ಮ ಪರವಾಗಿ ನಾನು ಸ್ನಾನ ಮಾಡುತ್ತಿದ್ದೇನೆ” ಎಂದು ತಿಳಿಸಿದೆ. ತಕ್ಷಣ ಅಮ್ಮ ಹೇಳಿದರು: ಅದು ಏಕಾದಶಿಯ ದಿನ! ಅದೆಂಥ ಪವಿತ್ರ ಸಂಯೋಗ! ದೇವರ ಕೃಪೆಯಿಂದ, ಮಹಾಕುಂಭದ ಮಹಾ ಕ್ಷಣದಲ್ಲಿ ತ್ರಿವೇಣಿಯಲ್ಲಿ ಸ್ನಾನ ಮಾಡುವ ಅವಕಾಶ ಲಭಿಸಿತು. ನಂತರ ಅಮ್ಮನ ಮಾತು ಅನುಸರಿಸಿ ಸ್ವಲ್ಪ ಹೊತ್ತು ಧ್ಯಾನ ಮಾಡಿ, ನೀರಿನಿಂದ ಹೊರಗೆ ಬಂದೆನು.

ನಾವಿಬ್ಬರೂ, ತ್ರಿವೇಣಿ ಸಂಗಮದ ಪವಿತ್ರ ತಟದಲ್ಲಿ ಸ್ವಲ್ಪ ಹೊತ್ತು ಕಾಲ ಕಳೆಯುತ್ತಾ ಅಲ್ಲಿನ ಶಾಂತತೆಯಲ್ಲಿ ಮುಳುಗಿದೆವು. ಆ ಸಂದರ್ಭದಲ್ಲಿ, ಈ ಸಂಗಮ ಪಾಯಿಂಟ್‌ಗೆ ನೇರ ಎದುರುಗಡೆ, ನೀರಿನ ಆಚೆ ದಡದಲ್ಲಿರುವ ಸಂಗಮ ಘಾಟ್ ಸ್ಪಷ್ಟವಾಗಿ ಕಾಣಿಸುತ್ತಿತ್ತು – ಅಲ್ಲಿಗೆ ಜನರು ನಡೆದುಕೊಂಡು ನೇರವಾಗಿ ಬರುವುದು ಸಾಧ್ಯವಾಗುತ್ತಿತ್ತು. ಆ ದಡದಲ್ಲಿ ಮಹಾಸಾಗರದಂತೆ ಜನಸಮೂಹ ಕಂಗೊಳಿಸುತ್ತಿತ್ತು.

ನಂತರ ನಾನು ಮತ್ತು ಗಿರೀಶ್, ಮಹಾಕುಂಭದ ಪರಂಪರೆಯಂತೆ ನದಿತೀರದ ಬೋಟಿನಲ್ಲಿ ಕುಳಿತಿದ್ದ ಸಾಧುಸಂತರಿಂದ “ಓಂ” ಎಂಬ ಕುಂಕುಮದ ಮುದ್ರೆ ಹಣೆಯಲ್ಲಿ ಹಾಕಿಸಿಕೊಂಡೆವು. ನಂತರ ಬೋಟ್ ಕ್ಲಬ್‌ಗೆ ಹಿಂತಿರುಗಲು ಬೋಟ್ ಹತ್ತಿದಾಗ, ಮನಸ್ಸಿನಲ್ಲಿ ದೊಡ್ಡ ಸಮಾಧಾನವಿತ್ತು. ೧೪೪ ವರ್ಷಗಳಿಗೊಮ್ಮೆ ನಡೆಯುವ ಈ ಅಪರೂಪದ ಮಹಾಕುಂಭವನ್ನು ಅನುಭವಿಸಿರುವ ಅದೃಷ್ಟ! ‘ನ ಭೂತೋ ನ ಭವಿಷ್ಯತಿ’ ಅಂತಾರಲ್ಲ – ಅಂತಹ ಅಪರೂಪದ, ಅದ್ಭುತ ಕ್ಷಣ!

ಮಧ್ಯದಲ್ಲಿ ಬೋಟ್ ಚಾಲಕನು ತ್ರಿವೇಣಿ ಸಂಗಮದ ನೀರನ್ನು ಬಾಟಲಿಗಳಲ್ಲಿ ತುಂಬಿಸಿಕೊಳ್ಳಲು ಅವಕಾಶ ನೀಡಿದರು. ನಂತರ ಬೋಟ್ ಶಾಂತವಾಗಿ ಮುಂದೆ ಸಾಗಿತು.

ಅಲ್ಲಿಂದ ನೇರವಾಗಿ ‘ಶಿವಾಲಯ ಪಾರ್ಕ್’ಗೆ ಹೋದೆವು. ಅಲ್ಲಿ ೧೨ ಜ್ಯೋತಿರ್ಲಿಂಗಗಳ ಸುಂದರ ಪ್ರತಿಕೃತಿಗಳ ದರ್ಶನ ಮಾಡಿದೆವು. ದಾರಿಯುದ್ದಕ್ಕೂ ಇನ್ನು ಹೆಚ್ಚು ಹೆಚ್ಚು ಜನ ಬರುತ್ತಿರುವುದನ್ನೇ ನೋಡುತ್ತಾ ಇದ್ದೆವು – ಈ ಬಾರಿ ಪೂರ್ಣ ಮಹಾಕುಂಭಕ್ಕಾಗಿ ವಿಶ್ವದ ಮೂಲೆಮೂಲೆಯಿಂದ ಸಾವಿರಾರು ಜನರು ಆಗಮಿಸುತ್ತಿದ್ದರು. ಎಲ್ಲೆಲ್ಲೂ ಭಕ್ತರ ಅಲೆ, ಹರಿದುಬರುತ್ತಿದ್ದ ವಿಶಾಲ ಜನಸಾಗರ ಒಟ್ಟಾರೆ, ಈ ಮಹಾಕುಂಭದಲ್ಲಿ ಸುಮಾರು ೬೬ ಕೋಟಿ ಮಂದಿ ತೀರ್ಥಸ್ನಾನ ಮಾಡಿ ಪುನೀತರಾದರು ಎಂಬ ಮಾಹಿತಿಯು ತಿಳಿದುಬಂತು. ಮತ್ತೊಮ್ಮೆ ಇಬ್ಬರು ಬೈಕ್ ಸವಾರರ ಸಹಾಯದಿಂದ ಹೋಟೆಲಿಗೆ ಹಿಂದಿರುಗಿದೆವು. ‘Curry Leaf’ ಹೋಟೆಲ್‌ನಲ್ಲಿ ರುಚಿಕರ ಊಟ ಮಾಡಿ ವಿಶ್ರಾಂತಿ ಪಡೆದೆವು.

ನಂತರ ಮಹಾಶಿವರಾತ್ರಿಯಂದು ಪ್ರಯಾಗರಾಜ್‌ನಿಂದ ಕಾಶಿಗೆ ಹೋಗಿ ಶ್ರೀ ಕಾಶಿ ವಿಶ್ವನಾಥನ ದರ್ಶನ ಪಡೆದೆವು. ಬಳಿಕ ಅಯೋಧ್ಯೆಗೆ ತೆರಳಿ, ನವ್ಯವಾಗಿ ಪ್ರತಿಷ್ಠಾಪಿಸಲ್ಪಟ್ಟ ಶ್ರೀ ರಾಮ್ ಲಲ್ಲಾರ ದರ್ಶನ ಪಡೆದು ಧನ್ಯರಾದೆವು. ಆಮೇಲೆ ಬೆಂಗಳೂರಿಗೆ ಹಿಂದಿರುಗಿ ಬಂಧುಮಿತ್ರರಿಗೆ ಮಹಾಕುಂಭದ “ಪವಿತ್ರ ತೀರ್ಥ” ವಿತರಣೆ ಮಾಡಿದೆವು. ಬಳಿಕ, ನ್ಯೂ ಜರ್ಸಿಗೆ ಮರಳಿದೆವು – ಹೃದಯ ತುಂಬಿದ ಪವಿತ್ರ ನೆನಪುಗಳೊಂದಿಗೆ.




भारतीय विमानपत्तन प्राधिकरण
आस्था, संस्कृति और परंपरा के भव्य संगम
प्रयागराज महाकुम्भ 2025 में
आने वाले सभी श्रद्धालुओं का
हार्दिक स्वागत करता है









**ಗೀತಾ ಭಟ್**
ಬೆಂಗಳೂರು

# ನಾಳೆಯ ನಾವು!

**ಮ**ಗಳಿಗೆ ಹುಷಾರಿಲ್ಲ ಅಂತ ಕ್ಲಿನಿಕ್ ಗೆ ಕರೆದುಕೊಂಡು ಹೋಗಿದ್ದೆ. ನಾವು ಹೋದಾಗ ಕ್ಲಿನಿಕ್ ಇನ್ನೂ ಓಪನ್ ಆಗಿರ್ಲಿಲ್ಲ. ಸೋ, ಅಲ್ಲೇ ಹೊರಗಡೆ ನಿಂತುಕೊಂಡಿದ್ದಾಗ ವಯಸ್ಸಾಗಿದ್ದ ಇಬ್ಬರು ಅಜ್ಜ ಮತ್ತು ಅಜ್ಜಿ ಆಟೋದಲ್ಲಿ ಬಂದರು. ಅಜ್ಜ, ಜ್ವರದಿಂದ ಬಳಲ್ತಾ ಇರೋ ಅಜ್ಜಿನ ಆಟೋದಿಂದ ಇಳಿಸಿಕೊಳ್ಳೋಕೆ ಕಷ್ಟ ಪಡೋದನ್ನ ನೋಡಿ ನಾನು ಹೆಲ್ಪ್ ಮಾಡಿದೆ. ಅಜ್ಜಿಗೆ ಜ್ವರ ಎಷ್ಟಿತ್ತು ಅಂದ್ರೆ ಸರಿಯಾಗಿ ನಿಲ್ಲೋಕೂ ಆಗ್ತಾ ಇರಲಿಲ್ಲ. ಪಾಪ, ಮೈನ್ ರೋಡ್ಗೆ ಹೊಂದಿಕೊಂಡಂತಿದ್ದ ಕ್ಲಿನಿಕ್ ನ ಕಟ್ಟೆ ಮೆಲೇನೇ ಅಜ್ಜನ ತೊಡೆ ಮೇಲೆ ಹಾಗೇ ಮಲಗಿಕೊಂಡು ಬಿಟ್ರು. ಅಜ್ಜ ಹೆಂಡತಿಯ ತಲೆ ಸವರುತ್ತಾ ತಮಿಳಿನಲ್ಲಿ ಏನೋ ಹೇಳ್ತಾ ಇದ್ದರು. ಸ್ವಲ್ಪ ಹೊತ್ತಿನ ನಂತರ ಡಾಕ್ಟರ್ ಬಂದ ಮೇಲೆ ಅಜ್ಜಿನ ಎತ್ತಿ ನಿಲ್ಲಿಸಿ ಒಳಗಡೆ ಕರೆದುಕೊಂಡು ಹೋಗೋಕೆ ನಾನೇ ಹೆಲ್ಪ್ ಮಾಡಿದೆ. ನಮ್ಮ ಅಪ್ಪೋಯಿಂಟ್ಮೆಂಟ್ ನಂಬರ್ ಮೊದಲೇ ಇದ್ದರೂ, ಅವರನ್ನೇ ಮೊದಲು ಒಳಗಡೆ ಕಳುಹಿಸಿ ನಾವು ಆಮೇಲೆ ಹೋದ್ವಿ. ನಾವು ಡಾಕ್ಟರ್ ನ ಭೆಟ್ಟಿ ಮಾಡಿ ಹೊರಗಡೆ ಬರೋ ಅಷ್ಟೊತ್ತಿಗೆ ಆ ಅಜ್ಜ, ಕೈನಲ್ಲಿ ಒಂದು ಹತ್ತರಿಂದ ಹನ್ನೆರಡು ORS ಪ್ಯಾಕೆಟ್ಸ್, ಜೊತೆಗೆ ಮೆಡಿಸಿನ್ಸ್ ಇರೋ ಒಂದು ದೊಡ್ಡ ಕವರ್ ನ ಹಿಡಿದುಕೊಂಡು ಅಜ್ಜಿಯ ಚಿಕ್ಕ ಹ್ಯಾಂಡ್ ಬ್ಯಾಗನ್ನ ತೋಳಿಗೆ ತಗಲಾಕ್ಕೊಂಡು ಹೇಗೋ ಕಷ್ಟ ಪಟ್ಟು ಆಟೋ ಬುಕ್ ಮಾಡಿ ಕಾಯ್ತಾ ಇದ್ರು. ಆಟೋದವನು ಎಕ್ಸಾಕ್ಟ್ ಲೊಕೇಶನ್ ಕೇಳೋಕೆ ಅಜ್ಜನಿಗೆ ಫೋನ್ ಮಾಡಿದಾಗ ಸರಿಯಾಗಿ ಕನ್ನಡ ಬಾರದ ಅಜ್ಜ ನನ್ನ ಕೈನಲ್ಲಿ ಫೋನ್ ಕೊಟ್ಟು ಆಟೋದವನಿಗೆ ಗೈಡ್ ಮಾಡೋಕೆ ಹೇಳಿದ್ರು. ಆಮೇಲೆ ನಾನು ಅವರ ಭಾರವಿದ್ದ ಕವರನ್ನ ಹಿಡ್ಕೊಂಡು ಆಟೋ ಬರೋವರೆಗೂ ಅವರ ಜೊತೆನಲ್ಲೇ ಇದ್ದು ಅಜ್ಜಿನ ಆಟೋದಲ್ಲಿ ಆರಾಮಾಗಿ ಕೂಡಿಸಿ ಹುಷಾರು ಅಂತ ಹೇಳಿ ಬರ್ತಾ ಇದ್ರೆ..... ಎಜುಕೇಟೆಡ್ ಅಜ್ಜ ಎಮೋಷನಲ್ ಆಗಿ ನನ್ನ ಕೈ ಹಿಡ್ಕೊಂಡು, This is what humanity is! This is why I love and respect Kannada people. This shows where you truly stand. You have no idea what you've done for us today! ಅಂತ ಕಣ್ಣಲ್ಲಿ ನೀರು ತುಂಬಿಕೊಂಡ್ರು. ನನಗೆ ಇಬ್ಬರು ಹೆಣ್ಣುಮಕ್ಕಳು, ಇಬ್ಬರೂ ಮದುವೆಯಾಗಿ ಹೊರಗಡೆ ಇರೋದು. ಇವತ್ತು ನೀನು ನನ್ನ ಮೂರನೇಯ ಮಗಳಾಗಿ ಸಿಕ್ಕಿದಿಯಾ ಅಂತ ಭಾವುಕರಗಿ ಹೇಳಿದ್ರು ... ಆ ಅಜ್ಜಿ ಜ್ವರದ ನರಳಾಟದಲ್ಲೂ ಅದೇಷ್ಟು ಸಲ ನನಗೆ ಥ್ಯಾಂಕ್ಸ್ ಅಂದರೋ.. 🙏🏻

ನಾನು ಅವರಿಗೆ ಮಾಡಿದ್ದು ಏನಂದ್ರೆ ಏನೂ ದೊಡ್ಡ ಸಹಾಯ ಅಲ್ಲ... ಆದರೂ ಅವರು ನನಗೆ ಮಗಳ ಸ್ಥಾನ ಕೊಟ್ಬಿಟ್ರು ಅಂತ ಮಗಳ ಹತ್ರ ಹೇಳಿ ನಗ್ತಾ ಇದ್ರೆ, ನನ್ನ ಮಗಳು ಹೇಳಿದ್ಲು... ಅಮ್ಮ, ನಾನು ನಿನ್ನ ಮತ್ತೆ ಅಪ್ಪನ್ನ ಈ ಸ್ಥಿತಿನಲ್ಲಿ ನೆನಸಿಕೊಳ್ಳೋಕೂ ಇಷ್ಟ ಪಡೋಲ್ಲ... ನಿಮಗೆ ವಯಸ್ಸಾದ ಮೇಲೆ ಕ್ಲಿನಿಕ್ ಗೆಲ್ಲ ಹೋಗ್ತಾ ನಾನೇ ಕರ್ಕೊಂಡು ಹೋಗ್ತೀನಿ... ಇಲ್ಲಾ, ನಿಮ್ಮ ಜೊತೆಗೇ ಇದ್ದು ನಿಮ್ಮನ್ನ ನೋಡ್ಕೊಳ್ಳೋ ತರ ಯಾರನಾದ್ರು ಜೊತೆಗೆ ಕಳಿಸ್ತೀನಿ ಅಂತ ನನ್ನ ಕೈ ಹಿಡ್ಕೊಂಡ್ಲು. ಆಗಲೇ ಅನಿಸಿದ್ದು... ಸಹಾಯ ದೊಡ್ಡದೋ ಸಣ್ಣದೋ ಅನ್ನೋದು ಆ ಹೊತ್ತಿನ ಅಸಹಾಯಕತೆ ಮತ್ತೆ ಅನಿವಾರ್ಯತೆ ಮೇಲೆ ನಿರ್ಧಾರವಾಗಿರುತ್ತೆ ಅಂತ. ಮುಂದೇನಾಗುತ್ತೋ ನಾ ಕಾಣೆ ... ಆದರೆ, ಅದ್ಯಾರೋ ಪರಿಚಯವಿಲ್ಲದ ಅಜ್ಜ ಅಜ್ಜಿಯ ಅಸಹಾಯಕತೆಯನ್ನ ನೋಡಿ ನನ್ನ ಮಗಳಿಗೆ ನಮ್ಮ ಮುಂದಿನ ದಿನಗಳ ಕಾಳಜಿ ಬಂದಿದ್ದು ಖುಷಿ ಆಯಿತು 😊.

ಮಗಳು ಹೇಳಿದ್ದು ಕೇಳಿ ಆ ಟೈಮ್ ಗೆ ನನಗೆ ಅನ್ನಿಸಿದ್ದು ಇಷ್ಟೇ... ಸದ್ಯ, ನಿಧಾನಕ್ಕೆ ವಯಸ್ಸು ಆಗ್ತಾ ಇರೋ ನನ್ನ ಅಪ್ಪ ಅಮ್ಮನ ಜೊತೆ ನನ್ನ ತಮ್ಮ, ತಮ್ಮನ ಹೆಂಡತಿ ಇರೋದು... ಹಾಗೇ, ನನ್ನ ಅತ್ತೆಯವರ ಜೊತೆ ಅವರ ಮಗ ಸೊಸೆ (ನಾವು) ಇರೋದು.!

ಹಾಗಂತ ಎಲ್ಲರಿಗೂ ತಂದೆ ತಾಯಿಯ ಜೊತೆಗೇ ಇದ್ದು ನೋಡಿಕೊಳ್ಳೋ ಅವಕಾಶ ಇರೋದಿಲ್ಲ. ಈಗ ಕೆಲಸದ ಮೇಲೆ, ಮದುವೆಯ ನಂತರ, ಹಾಗೇ ಇನ್ನ್ಯಾವುದೋ ಕಾರಣಾಂತರಗಳಿಂದ ವಯಸ್ಸಾದ, ಹಾಗೇ ವಯಸ್ಸು ಆಗ್ತಾ ಇರೋ ಅಪ್ಪ, ಅಮ್ಮನಿಂದ ದೂರ ಇರೋ ಸಂದರ್ಭಗಳೇ ಹೆಚ್ಚಾಗಿರೋ ಈ ಕಾಲದಲ್ಲಿ, ನಮ್ಮ ಒಳಿತಿಗಾಗಿ, ನಮ್ಮ ಕನಸಿಗಾಗಿ ಶ್ರಮಿಸಿದ ವಯಸ್ಸಾದ ತಂದೆ ತಾಯಿಯಂದಿರನ್ನೋ, ಇಲ್ಲಾ ನಮ್ಮನ್ನು ಎತ್ತಿ ಆಡಿಸಿದ ಅಜ್ಜ, ಅಜ್ಜಿಯರನ್ನೋ ನಮ್ಮ ಅನುಪಸ್ಥಿತಿಯಲ್ಲಿ ಅಸಹಾಯಕರನ್ನಾಗಲು ಬಿಡದೆ ನಮ್ಮ ಕೈಲಾದ ಮಟ್ಟಿಗೆ ಅವರಿಗೊಂದು ಆರಾಮದಾಯಕ ಸ್ಥಿರತೆಯ ಜೀವನವನ್ನು ಕಲ್ಪಿಸಿಕೊಡುವುದಕ್ಕೆ ವ್ಯವಸ್ಥಿತವಾದ ಮಾರ್ಗವನ್ನ ಒದಗಿಸಿಕೊಡುವುದು ಮಕ್ಕಳಾಗಿ ನಮ್ಮೆಲ್ಲರ ಕರ್ತವ್ಯ ಅನ್ನೋದನ್ನ ಸದಾ ನೆನಪಿನಲ್ಲಿ ಇಟ್ಟುಕೊಂಡು ಸಂಬಂಧಗಳ ಬಂಧ ಸಡಿಲಗೊಳ್ಳದಂತೆ ನೋಡಿಕೊಳ್ಳೋಣ ಅಲ್ವ...?😊



**ಯಶಸ್ವಿನಿ**
ನ್ಯೂ ಜೆರ್ಸಿ

# ಕಾಫಿ ಪ್ರೇಮ!

**ಬೆ**ಳಿಗ್ಗೆ ಎದ್ದೊಡನೆ ಕಾಫಿಯನ್ನು ಗುಟುಕರಿಸುವುದು ಒಂದು ವರ್ಣಿಸಲಾಗದ ಆನಂದ,ಕಾಫಿ ರುಚಿಗೆ ಮನಸೋಲದವರು ,ಅದರ ಘಮಲಿಗೆ ತಲೆದೂಗದವರು ಯಾರೂ ಇಲ್ಲವೆಂದೇ ಹೇಳಬೇಕು.ಕಾಫಿಯು ಜಗತ್ತಿನ ಅತ್ಯಂತ ಜನಪ್ರಿಯ ಪೇಯವಾಗಿದೆ.ದಿನಕ್ಕೆ ಕನಿಷ್ಠ 5-6 ಬಾರಿಯಾದರೂ ಕಾಫಿ ಕುಡಿಯುವ ಕಾಫಿ ಪ್ರೇಮಿಗಳು ಇದ್ದಾರೆ. ಮನೆಗೆ ಬಂದ ಅತಿಥಿಗಳಿಗೆ ಕಾಫಿ ಕೊಟ್ಟು ಸತ್ಕರಿಸುವುದು ಸಾಮಾನ್ಯ ಪದ್ಧತಿ. ವಿಧವಿಧವಾದ ಕಾಫಿ ಬಗೆಗಳು ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ. ಫಿಲ್ಟರ್ ಕಾಫಿ, ನೆಸ್ಕಾಫೆ (nescafe)ಬ್ರೂ (bru)ಕ್ಯಾಪುಸಿನೊ (cappuchino),flavoured cofffee , , ಎಕ್ಸ್ ಪ್ರೆಸೊ,ಲಾಟೆ(latte)ಹೀಗೆ ನಾನಾ ಥರದವು (varieties of coffee ) ಲಭ್ಯವಿದೆ. ನಮ್ಮ ಮನೆಯ ಹತ್ತಿರ ಹೆಚ್ಚಿನವರು ಉತ್ತರಭಾರತದ ಕಡೆಯವರು, ಅವರು ಹೆಚ್ಚಾಗಿ ಚಹಾ ಕುಡಿಯುವವರು,ಅಂಥವರು “ವಿ ಲವ್ ಸೌತ್ ಇಂಡಿಯನ್ ಕಾಫಿ ವೆರಿ ಮಚ್ “ ಅನ್ನುವಾಗ ಏನೋ ಒಂಥರ ಹೆಮ್ಮೆ. ನಿಮ್ಮ ಮನೆಗೆ ಕಾಫಿ ಕುಡಿಯೋಕೆ ಬರ್ತೀವಿ ಎಂದು ಆಗಾಗ್ಗೆ ಹೇಳುತ್ತಿರುತ್ತಾರೆ."ತುಂಬ ಚೆನ್ನಾಗಿ ಕಾಫಿ ಮಾಡ್ತೀರಿ" ಎಂಬ ಕಾಂಪ್ಲಿಮೆಂಟ್ ನನಗೆ ಆಗಾಗ್ಗೆ ಬರುತ್ತಿರುತ್ತದೆ. ನಾನು ಮಲೆನಾಡು ಕಡೆಯವಳಾದ್ದರಿಂದ ಸಹಜವಾಗಿ ಕಾಫಿಪ್ರಿಯೆ.

ಕಾಫಿಯ ಬಗ್ಗೆ ಕಿರು ಮಾಹಿತಿ: ಮಾಹಿತಿಗಳ ಪ್ರಕಾರ ಕಾಫಿಯು ಮೊದಲು ಇತಿಯೊಪಿಯಾದ(Ethiopia )ಕಾಫ ಎಂಬ ಪ್ರದೇಶದಲ್ಲಿ ಸುಮಾರು 9ನೇ ಶತಮಾನದಲ್ಲಿ ಮೊದಲು ಕಾಣಿಸಿಕೊಂಡಿತು,ಆಡು ಮೇಯಿಸುವ ವ್ಯಕ್ತಿಯೊಬ್ಬನು ತನ್ನ ಆಡುಗಳು ಕೆಂಪು ಬಣ್ಣದ ಹಣ್ಣುಗಳಿದ್ದ ಮರದ ಎಲೆಗಳನ್ನು ತಿಂದು ಖುಷಿಯಾಗಿರುವುದು ಕಂಡನು ,ತಾನು ಕೂಡ ಹಣ್ಣನ್ನು ತಿಂದಾಗ ಅವನಿಗೆ ಒಂದು ಬಗೆಯ ಆನಂದವುಂಟಾಯಿತು, ಅವನು ತನ್ನ ಊರಿನ ಮುಖಂಡರಿಗೆ ವಿಷಯ ತಿಳಿಸಿದನು, ಹೀಗೆ ಊರಿಂದ ಊರಿಗೆ ವಿಷಯ ತಲುಪಿ ನಂತರ ಏಷ್ಯ ,ಆಫ್ರಿಕಾ ಹಾಗೂ ಇತರ ಖಂಡಗಳಲ್ಲಿಯೂ ಜನಪ್ರಿಯತೆ ಪಡೆಯಿತು.ನಂತರ ಇದನ್ನು ಪೇಯವಾಗಿ ತಯಾರಿಸುವುದನ್ನು ಜನರು ಕಲಿತರು.
ಕಾಫಿಯನ್ನು ಬೆಳೆಯುವ ಪ್ರಮುಖ ಜಿಲ್ಲೆಗಳು ಚಿಕ್ಕಮಗಳೂರು,ಕೊಡಗು ಮತ್ತು ಹಾಸನ ಜಿಲ್ಲೆ. ಕಾಫಿಪುಡಿಯನ್ನು ಸೌಂದರ್ಯವರ್ಧಕವಾಗಿಯೂ ಬಳಸಬಹುದು ,ಕಾಫಿಪುಡಿ ಹಾಗೂ ಆಲಿವ್ ಆಯಿಲ್ ಅನ್ನು .



ಮಿಶ್ರಣದಂತೆ ಮಾಡಿ ಮುಖಕ್ಕೆ ಲೇಪಿಸಿಕೊಂಡರೆ ತ್ವಚೆಯು ಬಹಳ ಕಾಂತಿಯುತವಾಗಿರುತ್ತದೆ,ಕಣ್ಣಿನ ಸುತ್ತಲಿನ ಕಪ್ಪು ವರ್ತುಲ(dark circles) ಅನ್ನು ಸಹ ಹೋಗಲಾಡಿಸಬಹುದು. ಕಾಫಿ ತೋಟಗಳನ್ನು ನಿಭಾಯಿಸುವುದು ಅಷ್ಟು ಸುಲಭ ಸಾಧ್ಯವಾದ ಕೆಲಸವಲ್ಲ .ನನ್ನ ತಂದೆಯವರು ಕಾಫಿ ಬೆಳೆಗಾರರು,ಹಾಗಾಗಿ ಕಾಫಿ ಬೆಳೆಗಾರರ ಕಷ್ಟಗಳನ್ನು ಹತ್ತಿರದಿಂದ ನೋಡಿ ಬಲ್ಲೆ.ಮೊದಲು ಕಾಫಿ ಹಣ್ಣುಗಳನ್ನು ಗಿಡದಿಂದ ಕೀಳಿಸುವ ಕೆಲಸವಾಗಬೇಕು,ನಂತರ ಆ ಬೀಜಗಳನ್ನು ಚೆನ್ನಾಗಿ ಒಣಗಿಸಿ ,ಸಿಪ್ಪೆಯನ್ನು ಬೇರ್ಪಡಿಸಿ ನಂತರ ಬೀಜಗಳನ್ನು ಹುರಿದು ಪುಡಿ ಮಾಡಲಾಗುತ್ತದೆ.(ಇದಕ್ಕೂ ಅದರದೇ ಆದ ವಿಧಾನ(procedure) ಇರುತ್ತದೆ.)ಕಾಫಿ ಬೀಜವು ಮುಖ್ಯವಾಗಿ (Rubiaceae family) ರೂಬಿಯೆಸಿ ಕುಟುಂಬಕ್ಕೆ ಸೇರಿದ್ದಾಗಿದೆ. ಸುಮಾರು 45 ಪ್ರಭೇದಗಳಿವೆ.ನಮ್ಮ ದೇಶದಲ್ಲಿ ಪ್ರಮುಖವಾಗಿ ಅರೇಬಿಕಾ,ರೊಬಸ್ಟ್,ಕ್ಯಾನಿಪೋರಾ,ಲೈಬೀರಿಕಾ ತಳಿಗಳನ್ನು ಬೆಳೆಯಲಾಗುತ್ತದೆ.ಒಟ್ಟಿನಲ್ಲಿ ಕಾಫಿಯು ನಮ್ಮ ಆಲಸಿತನ,ದುಃಖವನ್ನು ಹೋಗಲಾಜಿಸಿ ಮೈ,ಮನಸ್ಸಿಗೆ ಚೈತನ್ಯವನ್ನು ನೀಡುತ್ತದೆ ಎಂದು ವೈದ್ಯರು ಒಪ್ಪುತ್ತಾರೆ.ನಾನು ಸ್ವತಃ ಕಾಫಿನಾಡಾಗಿರುವ ಕೊಡಗು ಜಿಲ್ಲೆಯವಳಾಗಿರುವುದಕ್ಕೆ ಹೆಮ್ಮೆ ಪಡುತ್ತೇನೆ.ಆದರೂ ಕಾಫಿಯಲ್ಲಿ ಕೆಫಿನ್ ಅಂಶ ಹೆಚ್ಚಾಗಿ ಇರುವುದರಿಂದ ದಿನಕ್ಕೆ 3 ಕ್ಕಿಂತ ಹೆಚ್ಚು ಬಾರಿ ಸೇವನೆ ಮಾಡುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ.
ಯಾರಾದರೂ ಕಾಫಿಗೆ ಬರ್ತೀರಾ ಎಂದು ಕರೆದರೆ ಬಹುಶಃ ನಿರಾಕರಿಸುವವರು ಯಾರೂ ಇಲ್ಲವೆಂದೇ ಹೇಳಬೇಕು ,ಏಕೆಂದರೆ “Coffee is an emotion “.

# ಕಥಾ ಸಂಕಲನ





ವಿಜಯ ಗುರುರಾಜ್

# ಅಸತೋಮಾ ಸದ್ಗಮಯ

**ಬ್ಯಾಂ**ಕಿನ ಕೆಲಸ ಮುಗಿಸಿ ಬರುವಾಗ ರಾಮಮೂರ್ತಿ ಕೈ ಚೀಲಗಳಲ್ಲಿ ತರಕಾರಿ, ಹಣ್ಣುಗಳನ್ನು ಮಾರುಕಟ್ಟೆಯಿಂದ ತರುತ್ತಿದ್ದರು.ಗಂಡ ಸಂಜೆ ಮನೆಗೆ ಬರುವ ವೇಳೆಗೆ ಸೀತಾಲಕ್ಷ್ಮಿ ಹೊಸಲಿನ ಬಳಿ ಇದ್ದ ಸಿಮೆಂಟು ಕಟ್ಟೆಯ ಮೇಲೆ
ಕೂತು ಕಾಯುತ್ತಿದ್ದರು.

ಸೈಕಲ್ ತುಳಿಯುತ್ತಾ ಬರುವ ರಾಮಮೂರ್ತಿಗೆ
ಆಯಾಸವಾಗಿದ್ದರೂ ಸಹ ನಗುಮೊಗದಿಂದ ಎದುರುಗೊಳ್ಳುವ ಹೆಂಡತಿಯನ್ನು ನೋಡುತ್ತಿದ್ದಂತೆ ಆಯಾಸವೆಲ್ಲ ಮಾಯವಾಗಿ ಹೊಸ ಹುರುಪಿನಿಂದ ಮನೆಯೊಳಕ್ಕೆ ಬರುತ್ತಿದ್ದರು.

ಆದರೆ ಇಂದು ಮಾತ್ರ ಸಂಜೆ ಕಳೆದು ಕತ್ತಲೆ ಸಮೀಪಿಸುತ್ತಿದ್ದರೂ ಗಂಡ ಮನೆಗೆ ಬಾರದಾದಾಗ ಕಳವಳಗೊಂಡು ಆಗಷ್ಟೇ ಕೆಲಸದಿಂದ ಬಂದ ಮಗನಿಗೆ" ನಿಮ್ಮ ಅಪ್ಪ ಇನ್ನೂ ಮನೆಗೆ ಬಂದಿಲ್ಲ ಕಣೊ ರಾಘು" ಎಂದು ಮಗನ ಮುಂದೆ ಮುಖ ಸಪ್ಪಗೆ ಮಾಡಿಕೊಂಡು ನಿಂತರು. " ಬಿಡಮ್ಮ ಯಾರೊ ಸ್ನೇಹಿತರು ಸಿಕ್ಕಿರಬೇಕು" ಎಂದು ಕೈ ಕಾಲು ತೊಳೆಯಲು ಹೋದ.

ಸೀತಮ್ಮ ಅನ್ಯಮನಸ್ಕತೆಯಿಂದಲೆ ದೇವರಿಗೆ ತುಪ್ಪದ ದೀಪ ಹಚ್ಚಿಟ್ಟರು. ಸೊಸೆ ಮಗನಿಗೆ ಕಾಫಿ ತಂದಿಟ್ಟಳು. ಅಣ್ಣನ ಮಗಳನ್ನೇ ಸೊಸೆಯಾಗಿ ತಂದುಕೊಂಡು ಮೂರು ತಿಂಗಳಾಗಿತ್ತು. ಲಕ್ಷ್ಮಿ ಕೆಲಸದಲ್ಲಿ ಜಾಣೆ. ಮನೆಯವರಿಗೆಲ್ಲ ಅಚ್ಚುಮೆಚ್ಚು.

ಅಷ್ಟರಲ್ಲಿ ಹೊರಗೆ ಆಟೊ ಶಬ್ಧ ವಾಯ್ತು. ಆಟೋದಿಂದ ಇಳಿದ ರಾಮಮೂರ್ತಿ ತಟ್ಟಾಡುತ್ತ ಮನೆಯ ಕಡೆ ಬರುತ್ತಿರುವುದನ್ನು ಕಂಡು ಹೌಹಾರಿದ ಸೀತಮ್ಮ ಗೇಟಿನ ಬಳಿ ಹೋಗಿ ಕೈ ಹಿಡಿದು ಕರೆತಂದು ಕುರ್ಚಿಯ ಮೇಲೆ ಕೂಡಿಸಿದರು. ಲಕ್ಷ್ಮಿ ನೀರು ತಂದಿತ್ತಳು."ಅಪ್ಪಾ ಏನಾಯ್ತಪ್ಪ" ಎಂದು ತಂದೆಯ ಕೈ ಹಿಡಿದುಕೊಂಡ.ರಾಘು ನೀರು ಕುಡಿದು ಸುಧಾರಿಸಿಕೊಂಡ ರಾಯರು " ಸೀತಾ,ರಾಘು ಗಾಬರಿಯಾಗಬೇಡಿ ಬ್ಯಾಂಕಿನಿಂದ ಇನ್ನೇನು ಹೊರಡಬೇಕು ಎನ್ನುವಾಗ ಏಕೊ ಕಣ್ಣು ಕತ್ತಲಿಟ್ಟಂತಾಯ್ತು. ಅಲ್ಲೇ ಸ್ವಲ್ಪ ಹೊತ್ತು ಕೂತಿದ್ದು
ಆಟೋದಲ್ಲಿ ಬಂದೆ ಎಂದು ಹಿಂದಕ್ಕೊರಗಿ ಕಣ್ಣುಮುಚ್ಚಿಕೊಂಡರು. ಆದರೂ ರಾಘು ಮತ್ತು ಸೀತಮ್ಮನಿಗೆ ಸಮಾಧಾನವಿಲ್ಲ.ಮರುದಿನ ಮಗನಿಗೆ ರಜೆ ಹಾಕಿಸಿ
ಕಣ್ಣಿನ ಡಾಕ್ಟರ್ ಬಳಿ ಕರೆದೊಯ್ದರು. ಎಲ್ಲಾ ತರಹದ ಪರೀಕ್ಷೆಗಳನ್ನು ಮಾಡಿದ ಡಾಕ್ಟರು. " ನೋಡಿ ಇದೊಂದು ರೀತಿಯ ಕಣ್ಣಿನ ದೃಷ್ಟಿ ಮಾಂಧ್ಯತೆಯ ಲಕ್ಷಣ , ಲಕ್ಷಕ್ಕೊಬ್ಬರಿಗೆ ಬರುವಂತದ್ದು. ಆದರೂ ದೊಡ್ಡ ಡಾಕ್ಟರ್ ಬಳಿ ಒಮ್ಮೆ ತೋರಿಸಿ ಎಂದು ವಿಳಾಸ ಬರೆದುಕೊಟ್ಟರು.

ಮನೆಯವರಿಗೆಲ್ಲಾ ಯೋಚನೆಯಾಯಿತು. ಮರುದಿನ ಅಮೂಲಾಗ್ರವಾಗಿ ಟೆಸ್ಟ್ ಮಾಡಿಸಿದರು. ರಿಪೋರ್ಟ್ ಗಳನ್ನೆಲ್ಲ ಪರಿಶೀಲಿಸಿದ ನಂತರ " ಅರವತ್ತು ವರ್ಷವಾಗುತ್ತಿದೆಯಲ್ಲವೆ ನಿಮಗೆ ಕ್ಯಾಟರಾಕ್ಟ್ ಇರಬಹುದು ಎಂದು ಪರೀಕ್ಷಿಸಿದೆ. ರೆಟೀನಾದಲ್ಲಿನ ತೇವಾಂಶ ಒಣಗಿದಾಗ ಇದ್ದಕ್ಕಿದ್ದಂತೆ ಕಣ್ಣು ಕಾಣದೆ ಹೋಗುವುದು. ಅಪರೂಪವಾಗಿ ಕೆಲವರಿಗೆ ಹೀಗೆ ಆಗುತ್ತೆ. ಇದಕ್ಕೇನೂ ನಿವಾರಣೆಯಿಲ್ಲ.ಧೈರ್ಯ ತಂದುಕೊಳ್ಳಿ" ಎಂದು ರಾಮಮೂರ್ತಿಯ ಹೆಗಲನ್ನು ತಟ್ಟಿ ಸಾಂತ್ವನ ಹೇಳಿದರು.

ಅಳುತ್ತಿದ್ದ ಹೆಂಡತಿಯನ್ನು ರಾಮ ಮೂರ್ತಿಯೇ ಸಮಾಧಾನ ಮಾಡಿದರು. ಇಬ್ಬರೂ ಆಟೊ ಹತ್ತಿ ಮನೆಗೆ ಬಂದರು. ಮರುದಿನದಿಂದಲೆ ರಾಮಮೂರ್ತಿ ಕೆಲಸಕ್ಕೆ ಹೋಗುವುದು ನಿಂತುಹೋಯಿತು.ಸೀತಮ್ಮನವರು ಇನ್ನು ಚಿಂತಿಸಿ ಫಲವಿಲ್ಲವೆಲ್ಲವೆಂದು ಸಮಾಧಾನಗೊಂಡು ಗಂಡನ ಸೇವೆಗೆ ಟೊಂಕ ಕಟ್ಟಿ ನಿಂತರು . ದೊಡ್ಡ, ದೊಡ್ಡ ಕಣ್ಣಿನ ಆಸ್ಪತ್ರೆಗಳಿಗೆ ಗಂಡನನ್ನು ತಾವೆ ಕರೆದೊಯ್ಯುತ್ತಿದ್ದರು. ಅವರು ಹೇಳಿದ ವಿಶೇಷ ಶಸ್ತ್ರ ಚಿಕಿತ್ಸೆ ಗಳನ್ನೆಲ್ಲಾ ಮಾಡಿಸಿದರೂ ದೃಷ್ಟಿ ಮರಳದೆ ಬರಿ ನೋವುಣ್ಣುವುದೇ ಆಯಿತು.

ಆಗ ರಾಮಮೂರ್ತಿ ಒಂದು ನಿರ್ಧಾರಕ್ಕೆ ಬಂದರು. "ಇನ್ನು ಯಾವುದೇ ಆಸ್ಪತ್ರೆ, ಆಪರೇಶನ್ ಗಳೂ ಬೇಡ. ಕಣ್ಣಿಲ್ಲದ ಅಂಧನಾಗಿ ಬದುಕುವುದು ನನ್ನ ಹಣೆಯಲ್ಲಿ ಬರೆದಿದ್ದರೆ ಹಾಗೆ ಇರುವೆ" ಎನ್ನುವ ಅಚಲ ತೀರ್ಮಾನದ ಮುಂದೆ ಮನೆಯಲ್ಲಿ ಯಾರಿಗೂ ಏನೂ ಹೇಳುವ ಧೈರ್ಯ ವಾಗಲಿಲ್ಲ. ಮಗ ಸೊಸೆ ಅಪ್ಪನ ವಿಷಯದಲ್ಲಿ ಬಹಳ ಪರಿತಾಪಪಟ್ಟರು. ಸೀತಾಲಕ್ಷ್ಮಿ ಗಂಡನಿಗಾಗಿ ಏನೂ ಮಾಡಲಾಗದ ಅವರ ಹೃದಯ ಪರಿತಪಿಸತೊಡಗಿತು.

ಏನು ಮಾಡಬೇಕೆಂದು ತೋಚದೆ ಮನೆಯಲ್ಲೇ ಕುಳಿತಿದ್ದಾಗ ರಾಮಮೂರ್ತಿಗೆ ಹುಟ್ಟು ಅಂಧಳಾಗಿದ್ದ "ಹೆಲೆನ್ ಕೆಲ್ಲರ್" ಹೇಗೆ ಜೀವನ ನಡೆಸಿದಳು ,ಅಂತೆಯೇ ಅವಳು ಅಂಧರಿಗಾಗಿಯೇ ಬ್ರೈಲ್ ಲಿಪಿಯನ್ನು ಕಲಿತು, ಬರೆದುಅವರಿಗಾಗಿಯೆ ತನ್ನ ಜೀವನವನ್ನು ಸಮರ್ಪಿಸಿದ ಕತೆ ನೆನಪಾಗತೊಡಗಿತು.

ಹಾಗೆಯೆ ಗಾನಯೋಗಿ "ಶಿವ ಪಂಚಾಕ್ಷರಿ ಗವಾಯಿಗಳು" ಸಂಗೀತ ಕಲಿತು ಅದರಲ್ಲೇ ನಿಷ್ಣಾತರಾಗಿ ಹೆಸರುಗಳಿಸಿದ್ದರು. ಅಂಧರಿಗಾಗಿಯೆ ಸಂಗೀತ ಶಾಲೆ ಸ್ಥಾಪಿಸಿ ಅವರಿಗೆಲ್ಲ ಸಂಗೀತ ಕಲಿಸುತ್ತಿದ್ದ ಅವರ ಕಥೆಗಳೆಲ್ಲಾ ನೆನಪಾಗುತ್ತಿದ್ದಂತೆಯೆ ಅವರ ಮನದಲ್ಲೂ ಧೃಡತೆ ಹೆಚ್ಚಾಗತೊಡಗಿತು.

' ಇನ್ನು ಮುಂದೆ ನಾನು ಹೀಗೆ ಕುಳಿತು ಕಾಲ ಕಳೆಯುವುದಿಲ್ಲ. ಮತ್ತೊಮ್ಮೆ ಅಂಧರಂತೆಯೇ ನಾನೂ ಅಕ್ಷರಗಳನ್ನು ಕಲಿಯುತ್ತೇನೆ ಓದಿ ,ಬರೆಯುತ್ತಾ ಕ್ರಿಯಾಶೀಲನಾಗುತ್ತೇನೆ ' ಎಂದು ತೀರ್ಮಾನಿಸಿದಾಗ ಅವರಲ್ಲಿ ಆತ್ಮ ವಿಶ್ವಾಸ ತುಂಬಿಕೊಂಡಿತು.

ಮಗ ತನ್ನ ಕೆಲಸ ಕಾರ್ಯಗಳನ್ನು ಬಿಟ್ಟು ಇವರ ಜೊತೆ ಬರುವಂತಿರಲಿಲ್ಲ. ಸೊಸೆಗೆ ಮನೆ ಮತ್ತು ಮಕ್ಕಳ ಕೆಲಸವೇ ಸಾಕಷ್ಟಿರುತ್ತಿತ್ತು. ಇನ್ನು ಹೆಂಡತಿಯಾದ ಸೀತಳೆ ತನಗೆ ಊರುಗೋಲು ಎನ್ನಿಸಿ ಹೆಂಡತಿಗೆ ತಿಳಿಸಿದಾಗ ,ಗಂಡನಿಗಾಗಿ ಏನು ಮಾಡಲೂ ತಯಾರಿದ್ದರು ಸೀತಮ್ಮ.

" ನಡೆಯಿರಿ ನಾನಿದ್ದೇನೆ ನಿಮ್ಮ ಜೊತೆ " ಎಂದು ಪತ್ನಿ ಹೇಳಿದಾಗ ರಾಮಮೂರ್ತಿಗೆ ನೂರಾನೆ ಬಲ ಬಂದಂತ್ತಾಯ್ತು...ಒತ್ತಾಸೆಯಾಗಿ ಪತ್ನಿ ಜೊತೆಗಿದ್ದಳು ಇನ್ನೇನು ಬೇಕು ಮರುದಿನವೆ ಬ್ರೈಲ್ ಕಲಿಯುವ ಸಲುವಾಗಿ ಗಂಡ ಹೆಂಡಿರಿಬ್ಬರೂ ಬಸ್ಸು ಹತ್ತಿ ಹೊರಟರು. ಸೀತಮ್ಮ ಗಂಡನನ್ನು ಜೋಪಾನವಾಗಿ ನಡೆಸುವ ಊರುಗೋಲಾದರು. ಅವರು " ಡಿವೈನ್ ಲೈಟ್ ಸ್ಕೂಲ್ " ನ್ನು ತಲುಪಿದರು. ಅದೊಂದು ಅಂಧ ಮಕ್ಕಳ ಶಾಲೆ ಯಾಗಿತ್ತು. ಅಲ್ಲಿ ಕಲಿಸುತ್ತಿದ್ದವರೂ ಸಹ ಅಂದತ್ವವುಳ್ಳ ಶಿಕ್ಷಕರಾಗಿದ್ದರು.

ಈ ಇಳಿ ವಯಸ್ಸಿನಲ್ಲಿ ಇದ್ದಕ್ಕಿದ್ದಂತೆ ಅಂಧಕಾರ ಮುಸುಕಿದಾಗ ರಾಮಮೂರ್ತಿ ಅಧೀರರಾದರೂ ಹಾಗೇ ಸ್ವಲ್ಪ ಕಾಲ ನಿಧಾನವಾಗಿ ಯೋಚಿಸಿದಾಗ ನಿಷ್ಕ್ರಿಯೆಯಿಂದ ಮೂಲೆ ಗುಂಪಾಗಿ ಕುಳಿತಿರುವುದು ಸಂಕಟದ ವಿಷಯವಾಗಿತ್ತು.

ಇನ್ನು ಮುಂದೆ ಕ್ರಿಯಾಶೀಲರಾಗಿ ಬದುಕು ಕಳೆಯಬೇಕೆಂಬ ಧೃಡಸಂಕಲ್ಪ ಮನದಲ್ಲಿ ಮೂಡಿತ್ತು. ಸೀತಮ್ಮ ಕ್ಯಾರಿಯರ್ ನಲ್ಲಿ ತಮ್ಮಿಬ್ಬರ ಊಟವನ್ನು ತುಂಬಿಕೊಂಡು ರಾಮಮೂರ್ತಿಯ ಕೈ ಹಿಡಿದು ಮುನ್ನಡೆಸುವರು. ಶಾಲೆಯ ಬಳಿಯೇ ಇದ್ದುಕೊಂಡು ಕೊಂಚವೂ ಬೇಸರವಿಲ್ಲದೆ ಗಂಡನ ಅನುಪಾನಗ ಳನ್ನು ಗಮನಿಸಿಕೊಂಡು ಅವರೊಂದಿಗೆ ಸಂಜೆ ಮನೆ ತಲುಪುತ್ತಿದ್ದರು. ಉತ್ಸಾಹದಿಂದ 'ಡಿವೈನ್ ಲೈಟ್ ಶಾಲೆ'ಯ ಅಂಧ ಮಕ್ಕಳ ಜೊತೆ ಮಕ್ಕಳಾಗಿ ಬ್ರೈಲ್ ಲಿಪಿಯನ್ನು ಕಲಿಯತೊಡಗಿದರು ರಾಮಮೂರ್ತಿ. ಮೊದಲು ಕನ್ನಡ ಬ್ರೈಲ್,ನಂತರ ಇಂಗ್ಲಿಷ್ ಬ್ರೈಲ್ ಲಿಪಿಯನ್ನು ಕೈಬೆರಳು ಮತ್ತು ಮನಸ್ಸಿನಲ್ಲಿ ಅರ್ಥಮಾಡಿಕೊಂಡು ಓದುವುದನ್ನು ಒಂದೂವರೆ ವರ್ಷಗಳ ಕಾಲ ಕಲಿತರು. ಅದಾದ ನಂತರ ಬ್ರೈಲ್ ಮಣೆಯಲ್ಲಿ ಪದಗಳನ್ನು ಚುಚ್ಚಿ ಚುಚ್ಚಿ ಬರೆಯುವುದನ್ನು ಕಲಿತರು.

ರಾಮಮೂರ್ತಿ ಹುಟ್ಟು ಕುರುಡರಲ್ಲವಲ್ಲ.ಮಧ್ಯಂತರ ದಲ್ಲಿ ಕಣ್ಣು ಕಾಣದಾಗಿದ್ದರೂ ಕಣ್ಣಿದ್ದಾಗ ಕಲಿತಿದ್ದ ಅಕ್ಷರ ಜ್ಞಾನದಿಂದ ಬ್ರೈಲ್ ಕಲಿಯುವುದು ಸುಲಭವಾಗತೊಡಗಿತು. ಹೀಗೆ ಸಾಂಗವಾಗಿ ಬರೆಯುವ ಹವ್ಯಾಸದಲ್ಲಿ ತೊಡಗಿಕೊಂಡು ತಮ್ಮ ಅಂಧತ್ವವನ್ನು ಮರೆತು ಅಂತಃಚಕ್ಷುಗಳಿಂದ ಕನ್ನಡದಲ್ಲಿ ಬ್ರೈಲ್ ನಲ್ಲಿಯೇ ಚಿಕ್ಕ ಮಕ್ಕಳಿಗಾಗಿ ಕಥೆಗಳನ್ನು ಬರೆಯುತ್ತಿದ್ದರು. ಅಂಧರ ಶಾಲೆಯ ಮುಖ್ಯಸ್ಥರು ಆ ಕಥೆಗಳನ್ನು ಓದಿ ಸಂತೋಷಪಟ್ಟು ಮಕ್ಕಳ ಓದಿಗಾಗಿ ಬ್ರೈಲ್ ಬರಹದಲ್ಲಿ ಮಕ್ಕಳ ಕಥಾ ಪುಸ್ತಕವನ್ನಾಗಿಸಿದರು. ರಾಮಮೂರ್ತಿ ಯವರ ಶ್ರದ್ಧೆ ಯನ್ನು ಮಗ ಸೊಸೆಯೂ ಸಹ ಅವರನ್ನು ಉತ್ತೇಜಿಸುತ್ತಿದ್ದರು. ಮಕ್ಕಳಿಗಾಗಿ ಬರೆದ ಕಥೆಗಳನ್ನು ಎಲ್ಲರಿಗೂ ಓದಲಾಗುವಂತೆ ಪುಸ್ತಕವನ್ನು ಮಾಡಿ ಹಂಚಿದರು.

ಸೀತಮ್ಮನಿಗಂತೂ ಗಂಡನ ಅಭ್ಯುದಯಕ್ಕೆ ಅವರ ಹೃದಯ ತುಂಬಿ ಬಂದಿತ್ತು. ಗಂಡನ ಒಡನಾಡಿಯಾಗಿ ಅವರಲ್ಲಿ ತೃಪ್ತಿಯ ಭಾವ ಆವರಿಸಿತ್ತು. ಈಗೀಗ ಕೈಗೋಲಿನ ಸಹಾಯದಿಂದ ತಾವೊಬ್ಬರೆ ಡಿವೈನ್ ಶಾಲೆಗೆ ಬಸ್ಸು ಹತ್ತಿಕೊಂಡು ಹೋಗಿ ಬರುತ್ತಿದ್ದರು. ಹೊಸ ಜಾಗಗಳಿಗೆ ಹೋಗುವಾಗ ಮಾತ್ರ ಪತ್ನಿ ಜೊತೆಗಿರುತ್ತಿದ್ದರು.

ಕಬ್ಬನ್ ಪಾರ್ಕ್ ನಲ್ಲಿರುವ ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ ಬ್ರೈಲ್ ಪುಸ್ತಕಗಳ ವಿಭಾಗವಿರುವುದನ್ನು ತಿಳಿದುಕೊಂಡು ಸೀತಮ್ಮನ ಜೊತೆ ಅಲ್ಲಿಗೆ ಹೋಗಿ ಇಂಗ್ಲೀಷ್ ಮತ್ತು ಹಿಂದಿಯ ಬ್ರೈಲ್ ಮುದ್ರಿತ ಪುಸ್ತಕಗಳನ್ನು ಓದುವ ಹವ್ಯಾಸದಲ್ಲಿ ತೊಡಗಿಸಿಕೊಂಡರು. ಅನೇಕ ಮಹಾ ಮಹಿಮಾನ್ವಿತರ,ವಿಷಯಗಳನ್ನೂ,ಭಗವದ್ಭಕ್ತರ ಜೀವನ ಚರಿತ್ರೆಗಳನ್ನೂ ಅಲ್ಲದೆ ದೇಶ,ವಿದೇಶಗಳ ವಿಷಯಗಳನ್ನು ಓದಿ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಓದಿ ತಿಳಿಯುವ ಕ್ರಿಯೆಯಿಂದ ಅವರ ಆತ್ಮಕ್ಕೆ ,ಮನಸ್ಸಿಗೆ ನೆಮ್ಮದಿ ಮೂಡತೊಡಗಿತು. ಆಗ ಅಂಧ ಮಕ್ಕಳ ಶಿಕ್ಷಣದ ಸಮಸ್ಯೆಗಳನ್ನು ಪರಿಹರಿಸಲು ಏನಾದರೂ ಪ್ರಮುಖ ಪ್ರಯತ್ನ ಮಾಡಬೇಕೆಂದು ರಾಮಮೂರ್ತಿಯ ಮನದಲ್ಲಿ ತಾಕಲಾಟ ಶುರುವಾಯಿತು.

ಸತತ ವಾಗಿ ಮೂರು ವರ್ಷಗಳ ಕಾಲ ವಿಶ್ವವಿದ್ಯಾಲಯದೊಡನೆ ವ್ಯವಹಾರ ನಡೆಸಿದ ಫಲವಾಗಿ ಪ್ರೌಢ ಶಾಲೆಯ ಅಂಧರಾದ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳಿಗೆ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಪೌರ ನೀತಿಗಳು ಸಿಲಿಬಸ್ ಗಳನ್ನು ಬ್ರೈಲ್ ಲಿಪಿಯಲ್ಲಿ ಇರಬೇಕೆಂದು ಪ್ರಯತ್ನಿಸಿದ ಫಲವಾಗಿ ಸರಕಾರದಿಂದ ಒಪ್ಪಿಗೆ ದೊರೆಯಿತು. ಅಂತೆಯೆ ಕೈ ಕೆಲಸಗಳಾದ ಬೆತ್ತದ ಬುಟ್ಟಿ ಹೆಣೆಯುವುದು ಮತ್ತು ಪ್ಲಾಸ್ಟಿಕ್ ಹೆಣಿಗೆ ಮಾಡುವುದು ಹಾಗೂ ಶಾಸ್ತ್ರೀಯ ಸಂಗೀತ ಕಲಿಸುವುದು ಸಹ ಮಕ್ಕಳ ಸರ್ವತೋಮುಖ ವ್ಯಾಸಂಗಕ್ಕೆ ಸಹಾಯವಾಗಲಿ ಎಂದು ಅರಿತುಕೊಂಡ ಘನ ಸರ್ಕಾರವು ವಿಶ್ವವಿದ್ಯಾಲಯದ ಬಿ.ಎಡ್. ಪದವಿಯಲ್ಲಿ ಸೇರಿಸಿದ್ದರಿಂದ ಅಂಧ ಪದವೀಧರರೂ ಬಿ.ಎಡ್.ನಲ್ಲಿ ಪರಿಪೂರ್ಣವಾದ ಶಿಕ್ಷಣ ಪಡೆಯುವಂತಾಯಿತು.

ಹೀಗೆ ರಾಮಮೂರ್ತಿಯು ತಮ್ಮ ಬಾಳಿನಲ್ಲಿ ಏಳೆಂಟು 7,8, ವರ್ಷಗಳು ಎಡಬಿಡದ ಕಾರ್ಯಗಳನ್ನು ಹಮ್ಮಿಕೊಂಡಿದ್ದರು. ಅವಿಶ್ರಾತವಾಗಿ ದುಡಿದ ಅವರ ಜೀವ ವಿಶ್ರಾಂತಿಯನ್ನು ಬಯಸುತ್ತಿತ್ತು. ನಂತರ ತಮ್ಮ ಮನೆಯ ಸಮೀಪವೆ ಒಂದು ಅಂಧರ ಶಾಲೆ ಇದೆ ಎಂದು ತಿಳಿಯಿತು. ಅವರಿಗೆ ಕನ್ನಡ ಸಾಹಿತ್ಯದಲ್ಲಿ ಮೊದಲಿನಿಂದಲೂ ಆಸಕ್ತಿ ಇತ್ತು. ಆದರೆ ಸಮಯವೆಲ್ಲಾ ಉದರಂಬರಣಕ್ಕಾಗಿ ಉದ್ಯೋಗ,ಸಂಸಾರ ಅದರಲ್ಲೇ 60ವರ್ಷಗಳು ಕಳೆದು ಹೋಗಿತ್ತು. ಈ ಕೆಲಸಕ್ಕಾಗಿಯೆ ನಾನು ಅಂಧನಾಗಿ ರೂಪುಗೊಂಡಿರಬಹುದು ಎನಿಸಿತು ರಾಮಮೂರ್ತಿ ಗೆ. ಜೀವನದ ಅನೇಕ ಮಜುಲುಗಳಲ್ಲಿ ಅಂಧತ್ವವನ್ನು ಪಡೆದುದಲ್ಲದೆ ಅಂತಹವರ ಜೀವನದ ಅರಿವಿನ ಅನುಭವ ತನಗಾಯಿತು. ಕಣ್ಣಿದ್ದಾಗ ಲೋಕವನ್ನು ಕಂಡಾಯಿತು. ಕಣ್ಣಿಲ್ಲದಾಗ ಮತ್ತೊಂದು ಲೋಕದ ಅರಿವಾಯಿತು.

ಅಂಧತ್ವವನ್ನು ಮೆಟ್ಟಿ ನಿಂತು ಸಾಹಿತ್ಯ ರಚನೆಯಲ್ಲಿ ತನ್ನನ್ನು ನಿರಂತರವಾಗಿ ತೊಡಗಿಸಿಕೊಂಡ ಫಲವಾಗಿ ಅವರ ಅನೇಕ

ನೀಳ್ಗವನಗಳು,ಭಕ್ತಿ ಗೀತೆಗಳು,ಸಣ್ಣ ಕಥೆಗಳ ಗದ್ಯ ಪದ್ಯಗಳು ರಚಿತವಾದವು. ಅದರಲ್ಲಿನ ಉದ್ಗ್ರಂಥ ವೆಂದರೆ "ಶಿಕ್ಷಣ ದ ಮನಃಶಾಸ್ತ್ರ" ಎಂಬ ಆಧುನಿಕ ರೂಪರೇಶೆ ಯುಳ್ಳ ಕೃತಿಯನ್ನು ರಚಿಸಿದರು. ಇವೆಲ್ಲವನ್ನೂ ಬ್ರೈಲ್ ನಲ್ಲಿ ರಚಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಪ್ರಯಾಸದ ಕೆಲಸವಾಗಿತ್ತು. ಎಲ್ಲದಕ್ಕೂ ಸಹಾಯ ಹಸ್ತ ನೀಡಲು ಮಗ ಸೊಸೆ ಕೈ ಗೂಡಿಸಿದರು. ಸೀತಾಲಕ್ಷ್ಮಿಯು ರಾಮಮೂರ್ತಿ ಹೇಳಿದ್ದನ್ನೆಲ್ಲ ತಮ್ಮ ಕೈಯಿಂದ ಬರೆದು ಹಸ್ತಪ್ರತಿ ಮಾಡುತ್ತಿದ್ದರು .ಹೆಂಡತಿ ಸೀತಾಲಕ್ಷ್ಮಿಯ ಅವಿರತವಾದ ಶ್ರಮದಾಯಕವಾದ ಸೇವೆಯು ಗಂಡನ ಕೃತಿಗಳು ಪುಸ್ತಕ ರೂಪದಲ್ಲಿ ಬರುವುದಕ್ಕೆ ಕಾರಣವಾಯಿತು. ರಾಮಮೂರ್ತಿ ಗಳು ಅನೇಕ ಅಂಧರ ಸಂಸ್ಥೆಗಳ ಕ್ಷೇಮಾಭ್ಯುದಯಗಳಿಂದ ಸನ್ಮಾನಿಸಲ್ಪಟ್ಟರು.
ಆ ಸಂಸ್ಥೆಗಳ ಅಭ್ಯುದಯಕ್ಕಾಗಿ ತಮ್ಮ ಜೀವನದ ಕೊನೆವರೆಗೂ ತಮ್ಮ ಸೇವೆಯನ್ನು ಮೀಸಲಾಗಿಟ್ಟರು ಅವರ ಅನೇಕ ದಿನಗಳ ಆಶಯದಂತೆ" ಹೆಲನ್ ಕೆಲರ್" ಅವರ ಪೂರ್ಣ ಜೀವನ ಸಾಧನೆಯ ಕೃತಿಯನ್ನು ಮತ್ತು " ಜೀವನ ಯಾನ " ಎಂಬ ತಾವು ನಡೆದು ಬಂದ ತಮ್ಮ ಜೀವನದ ಕಥೆಯನ್ನು ಸಹ ಬರೆದು ತಮ್ಮದೆ ಸ್ವಂತ ಪ್ರಕಾಶನ ಸಂಸ್ಥೆ ಯಾದ "ರಾಮ್ ಪ್ರಕಾಶನ" ದಲ್ಲಿ ಪ್ರಕಟಿಸಿದರು. ಈ ಸಾಹಿತ್ಯ ರಚನೆಗಳಿಗೆ ಕನ್ನಡ ಸಾಹಿತ್ಯ ಅಕಾಡಮಿಯಿಂದ " ಉತ್ತಮ ಜೀವನ ಚರಿತ್ರೆಯ ಪುಸ್ತಕಗಳು" ಎಂಬ ಪುಸ್ತಕ ಬಹುಮಾನ,ಸಮ್ಮಾನಗಳು ಬಂದಿತು.ಕನ್ನಡ ಸಂಸ್ಕೃತಿ ಇಲಾಖೆಯಿಂದ ಹತ್ತು ಸಾವಿರ ಮೊತ್ತದ ಅವಾರ್ಡ್ "ಸಹ ದೊರೆಯಿತು.

"ಸೀತಾ ಈ ಎಲ್ಲ ಸಾಧನೆಗಳ ಹಿಂದೆ ನಿನ್ನ ಸಹಕಾರ , ಸಹಾಯವಿರುವುದರಿಂದಲೆ ಸಾಧ್ಯವಾಯಿತು.ನಿನಗೆ ನಾನು ಋಣಿಯಾಗಿರುವೆ" ಎಂದು ಹೆಂಡತಿಯ ಪ್ರಸಂಶಿಸಿದರು.

"ಇದು ನಿಮ್ಮ ನಿರಂತರ ಸಾಧನೆ ಮತ್ತು ಧೃಡಸಂಕಲ್ಪಗಳಿಂದ ಸಾಧ್ಯವಾಯಿತು" ಎಂದು ಗಂಡನನ್ನು ಹೊಗಳಿದರು ಸೀತಮ್ಮ. ಅಪೂರ್ವವಾದ ಗಂಡ ಹೆಂಡಿರ ಸಂಬಂಧ ಸಾರ್ಥಕತೆಯನ್ನು ಪಡೆದಿತ್ತು.
ರಾಮಮೂರ್ತಿಗೆ ರಾತ್ರಿಗಳಲ್ಲಿ ಯಾವಾಗಲೊ ಸ್ವಲ್ಪ ಮಾತ್ರ ನಿದ್ರೆ,ಅನಂತರ ಇಡೀ ರಾತ್ರಿ ಎಚ್ಚರವಾಗಿರುವುದು ಅಭ್ಯಾಸವಾಗಿಬಿಟ್ಟಿತ್ತು. ಗೀತೆಯಲ್ಲಿ ಶ್ರೀ ಕೃಷ್ಣ ನು ಹೇಳಿದ
" ಯಾ ನಿಶಾ ಸರ್ವ ಭೂತಾನಿ ತಸ್ಯಾಂ ಜಾಗರ್ತಿ ಸಂಯಮಿ"ಎಂಬಂತೆ ಇದು ಆತ್ಮ ಸಂಯಮದ ಅಭ್ಯಾಸ,ಆನಂದದ ಸಾಧನೆ . ತನಗೆ ಅಂಧತ್ವ ಉಂಟಾಗದಿದ್ದರೆ ಇಷ್ಟೆಲ್ಲ ಅಂಧ ಮಕ್ಕಳ ಶಿಕ್ಷಣ ಸೇವೆ ದೊರೆಯುತ್ತಿತ್ತೆ ಅಂಧರ ಕ್ಷೇಮಾಭ್ಯುದಯ ಪ್ರಗತಿ, ಸಾಹಿತ್ಯ ಕೃತಿಗಳ ರಚನೆ,ನನ್ನ ಆತ್ಮದ ವಿಕಾಸ ಇವೆಲ್ಲ ಕಣ್ಣಿನ ದೃಷ್ಟಿಇಲ್ಲದಿರುವುದರಿಂದಲೆ ಸಾಧ್ಯವಾಯಿತು. "ಭಗವಂತಾ ನೀನೇನೆ ಇತ್ತರೂ ನಾವು ಅದನ್ನು ಭಕ್ತಿಯಿಂದ, ಗೌರವದಿಂದ ಸ್ವೀಕರಿಸಬೇಕು " ಎಂದು ಅವರ ಉದ್ಗರಿಸುತ್ತಿದ್ದರೆ,ಅವರ ಹಸ್ತಗಳು ಕಾಣದ ಪರಮಾತ್ಮನೆಡೆ ಜೋಡಿಸಿಕೊಂಡು, ತುಟಿಗಳು ಶಾಂತಿ ಮಂತ್ರವನ್ನು ಉಸುರುತ್ತಿತ್ತು.

"ಅಸತೋಮಾ ಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ
ಓಂ ಶಾಂತಿ ಶಾಂತಿ ಶಾಂತಿಃ "
********************************



ಚಿತ್ರ ಕೃಪೆ : ಅಂತರ್ಜಾಲ

# ಕವನ ಸಂಕಲನ



**ಉಷಾ ರಾಮಮೂರ್ತಿ**
ಶಿವಮೊಗ್ಗ

## ರಸಋಷಿಗೆ ....

ಕಾಡೆಂದೊಡೇನ್
ಮೇಣ್ ನಾಡೆಂದೊಡೇನ್
ಚಿತ್ತದಲಿ ಚಿತ್ತಾರವಾಗುವುದೇ
ತಮ್ಮ ಚಿತ್ರ

‘ ಕಾಡೆಂ’ದೊಡೆ ಕಣ್ಮನವ ತುಂಬುವುದು
ತಾವ್ ನುಡಿದ
ಸಹ್ಯಾದ್ರಿಯ ಶ್ಯಾಮಲೆಯ ವರ್ಣಚಿತ್ರ
ಕಾಜಾಣದ ಸುಸ್ವರದ ಗೇಯಚಿತ್ರ
ಕಾನೂರಿನ ಸುಬ್ಬಮ್ಮನ ನೈಜಚಿತ್ರ
ಮಲೆಯ ಮದುಮಕ್ಕಳ ಮಧುರಚಿತ್ರ

‘ ನಾಡೆಂ’ದೊಡೆ ನೆನೆವುದೈ
ತಮ್ಮ ಅಸಾಮಾನ್ಯ ನಾಡ/ನುಡಿಭಕ್ತಿ
ಅಂತೆ ಧ್ವನಿಸಿದ ನಮ್ಮ ನಾಡಗೀತೆಯ ಶಕ್ತಿ
ಆಡುಭಾಷೆಯಲ್ಲರಳಿದ ರಾಮಾಯಣದರ್ಶನ
ಅನಂತದೊಳೈಕ್ಯವಾದ ರಸಋಷಿಯ ಚೇತನ

ಇಂದಿಲ್ಲಿ ಕಂಡಿಲ್ಲ
ಇಂದಿಲ್ಲಿ ಕಾಡಿಲ್ಲ
ಗಿಡಮರಗಳ ತಂಪಿಲ್ಲ
ಮಲೆಯ ಜಡಿಮಳೆಯಿಲ್ಲ
ರಸೌಷಧಿಯ ವನಸಿರಿಯಿಲ್ಲ
ತುಂಗೆಯೂ ತುಂಬಿ
ತುಳುಕುವುದಿಲ್ಲ
ಕಣ್ಣಾಡಿದಂತೆಲ್ಲ
ಬಿಸಿಲು ರಣಬಿಸಿಲು
ಮಲೆನಾಡಿನಲ್ಲೂ
ಬಯಲೊ ಬಯಲು

ಅಚಲಬಂಡೆಯ ತೆರದಿ
ಕವಿಶೈಲವೊಂದಿಹುದು
ಕಾವ್ಯರಸವುಣಬಯಸುವ ನಮಗೆ
ಅದಮ್ಯ ಚೇತನವಾಗಿ
ಎಂದಾದರೊಮ್ಮೆ ತಮ್ಮದರುಷನದ ಸಲುವಾಗಿ

ಜನರಿಂದು ನುಡಿದಿಹರು ನಾಡಗೀತೆಯ
ರಾಗೋಪರಾಗವಾಗಿ
ಭಾವನಾಶೂನ್ಯರಾಗಿ !!

ಅಲ್ಲಿಲ್ಲ ಕನ್ನಡಿಗನೆಂಬ
ಅಭಿಮಾನದಾ ಮಂತ್ರ !
ಒಗ್ಗಟ್ಟಿನಾ ತಂತ್ರ !
ಬೆಳೆಸಬೇಕೆನ್ನುವಾ
ಹಂಬಲದ ಮಂತ್ರ !

ಉಳಿಸಬೇಕೆನ್ನುವಾ
ಕಾತರದ ತಂತ್ರ !
ವರುಷದಲ್ಲೊಂದೊಮ್ಮೆ
ಎಲ್ಲೆಡೆಯೂ ಕಾಣುವುದು
ಕನ್ನಡದ ಬಾವುಟ
ತಾಯಿ ಭುವನೇಶ್ವರಿಯ ಪಟ
ಆಗೊಮ್ಮೆ ಎದೆಯೊಳಗೆ ಸುಳಿದಾಡಬಹುದು
ನಾವೂ ಕನ್ನಡಿಗರೇ ದಿಟ!
ನಾವೂ ಕನ್ನಡಿಗರೇ ದಿಟ!!

ಅಕಟಕಟ ! ಹಾಗಾಗದಿರಲೆಂದೂ ಗುರುವೇ !
ಅಹುದುದಿದು ಮೊರೆ , ತಂದೆ !
ಸಕಲ ಜನರಿಂದೆ
ಬೇಡಿಕೆಯದಲ್ಲವಿದು
ಬಳಲಿಕೆಯು ಕೇಳಾ !!
ನಿಮ್ಮ ಹರಕೆಯದೋಳ್
ನಳನಳಿಸೆ ಕನ್ನಡ
ಭವ್ಯತೆಯ ವಿಶ್ವದೋಳ್
ದಿವ್ಯತೆಯ ಕಾಂತಿಯಲಿ
ಸುರಗಿಯಾಗುತೆ ಹೊನ್ನ ರಥವೇರಲಿ
ಕನ್ನಡಮ್ಮಗೆ ಶಾಂತ ಸ್ವರವಾಗಲಿ .

# ಚುಟುಕಗಳು



**ಮಧುಕರ ರಾವ್**
ಮೈಸೂರು

***ಶೀರ್ಷಿಕೆ :- ಅಮ್ಮನ ಪಾದಕೆ***

ಒಂಬತ್ತು ತಿಂಗಳ ಹೊತ್ತು ಹೆತ್ತ ಅಮ್ಮನ ಹಾರೈಕೆ,
ಹೆತ್ತ ಮಡಿಲ ಮನಸಾರೆ ಪೋಷಣೆಯ ಆರೈಕೆ,
ಜನ್ಮ ನೀಡಿದ ಬಾಡಿಗೆ ದೇಹದ ಕಾಣಿಕೆ,
ಬಣ್ಣ ಬಣ್ಣ ಆಸೆ ಆಕಾಂಕ್ಷೆಗಳ ಮರೀಚಿಕೆ,
ಬಂದು ಹೋಗುವ ನಡುವೆ ಜೀವನಾಟಕದ ಪ್ರಾತ್ಯಕ್ಷಿಕೆ,
ಬದುಕು ಒಂದು ಜಟಕಾ ಬಂಡಿಯ ಕುಣಿಕೆ,
ತಿದ್ದಿ ತೀಡಿ ಜೀವನ ರೂಪಿಸಿದ ಮಾತೃಹೃದಯಕೆ,
ತ್ಯಾಗಮಯಿ ತನ್ಮತೆಯ ತಾಯಿ ಶಾಮಲೇ ಜೀವಕೆ,
ಸಾಷ್ಟಾಂಗ ನಮಿಪುವೆ ಅಮ್ಮನ ಪಾದಕೆ.

****

***ಶೀರ್ಷಿಕೆ:- ಬದುಕು***

ಬದುಕಿನಲಿ ಮೆರೆದಾಗ ಅಹಂಭಾವ,
ಬದುಕಿನಲಿ ಬಿದ್ದಾಗ ಅನನುಭವ,
ಬದುಕಿನಲಿ ಸೋತಾಗ ಅನುಭವ,
ಬದುಕಿನಲಿ ಎದ್ದಾಗ ಧನ್ಯಭಾವ,
ಬದುಕಿನಲಿ ಜೊತೆಯಾದಾಗ ಅವಿನಾಭಾವ,
ಬದುಕಿನಲಿ ಅರಿವಾದಾಗ ದೈವಭಾವ,
ಬದುಕಿನಲಿ ಒಂಟಿಯಾದಾಗ ಅನಾಥೋ ದೈವ.
ಬದುಕಿನಲಿ ಹೀಗೆ ಇರಬೇಕೆಂದಾಗ ಅಸಂಭವ.

****

ಬೇಕು ಏನ್ನುವ ಆಸೆ ಇರಬೇಕು,
ಪೂರೈಸುವ ಛಲ ಇರಬೇಕು,
ಅವರಿವರಂತೆ ಎನ್ನೋದು ಬಿಡಬೇಕು,
ಹೋದರು ನೆನಪಿನಲ್ಲಿರುವಂತೆ ಹೋಗಬೇಕು.

****

*** ಶೀರ್ಷಿಕೆ :- ಸಿಂಧೂರ ***

ವಿಕೃತ ಮನಸಿನ ವಕ್ರಬುದ್ಧಿ ವಿಕಾರ,
ಮುಗ್ಧ ಹೆಣ್ಣಿಗೆ ಉಗ್ರ ಅಳಿಸಿದ ಸಿಂಧೂರ,
ಸೇನೆ ಪಣತೊಟ್ಟಿತು ಉಗ್ರ ನಿರ್ನಾಮದ ಪ್ರತೀಕಾರ,
ಮಧ್ಯರಾತ್ರಿ ಗುಂಡಿನ ಸುರಿಮಳೆಯ ಝೇಂಕಾರ,
ಉಗ್ರ ನೆಲೆಗಳ ನೆಲಸಮದ ಸಂಹಾರ,
ಮಹತ್ವ ತಿಳಿದವರ ಹಣೆಯಲ್ಲಿ ಸಿಂಧೂರ,
ಭಾರತ್ ಸೇನೆ ಸಾಧನೆ ಎಲ್ಲೆಲ್ಲೂ ಹರ್ಷೋದ್ಗಾರ.

****

ಶರೀರ ತಂಪಾಗಿರಲು,
ಶರಬತ್ ತಂಪಾಗಿರ ಬೇಕು
ಮನಸ್ಸು ತಂಪಾಗಿರಲು,
ಮಡದಿ ತಂಪಾಗಿರ ಬೇಕು

****

ಇದ್ದಾಗ ಅಪ್ಪ ಅಮ್ಮನ ಪರದಾಡಿಸ್ತಾರೆ,
ಹೋದಾಗ ಫೋಟೋ ಪರ್ಸ್ ಲೀ ಇಟ್ಕೊಂಡು ತಿರಿಗಾಡತಾರೆ.
ಭಗವಂತ ಇಂತವರನ್ನ ನೋಡಿ ನಗ್ತಾರೆ,
ಗುಪ್ತವಾಗಿ ಇವರಲೆಕ್ಕ ಇಡ್ತಾರೆ.
ಕಾಲ ಬಂದಾಗ ಲೆಕ್ಕ ಚುಪ್ತ ಮಾಡ್ತಾರೆ.

****

# ಲಡಿಗೆ ಅರಸಪ





**ಸರಸ್ವತಿ ರಾಮಚಂದ್ರ**
ಮೈಸೂರು

# ಅವರೆ ಕಾಳು ಕೋಡುಬಳೆ






ಅವರೆ ಕಾಳು ಕೋಡುಬಳೆ ಮಾಡುವ ವಿಧಾನ
ಬೇಕಾದ ಪದಾರ್ಥಗಳು:-

ಅವರೆಕಾಳು -1 ಪಾವು
ಅಕ್ಕಿ ಹಿಟ್ಟು -ಒಂದೂವರೆ ಪಾವು
ಚಿರೋಟಿ ರವೆ - ಅರ್ಧ ಪಾವು
ತೆಂಗಿನ ತುರಿ ಅಥವಾ ಕೊಬ್ಬರಿ ತುರಿ -ಒಂದು ಬಟ್ಟಲು
ಓಂ ಕಾಳು/ ಕಾಳಿನ ಪುಡಿ -ಅರ್ಧ ಚಮಚ
ಅಚ್ಚ ಖಾರದ ಪುಡಿ- 2-3 ಚಮಚ
ಇಂಗು- ಅರ್ಧ ಚಮಚ
ಕರಿಯಲು ಎಣ್ಣೆ-
ರುಚಿಗೆ ತಕ್ಕಷ್ಟು ಉಪ್ಪು.

ಮೇಲಿನ ಎಲ್ಲ ಪದಾರ್ಥಗಳನ್ನು ಒಟ್ಟಿಗೆ ಸೇರಿಸಿ, ಎಣ್ಣೆಯನ್ನು ಬಿಸಿಮಾಡಿ, ಅದಕ್ಕೆ ಸೇರಿಸಬೇಕು. ಎಲ್ಲವನ್ನು ಸರಿಯಾಗಿ ಕಲಸಿ ಮಿಶ್ರಣ ಮಾಡಿಕೊಂಡು ಸ್ವಲ್ಪಸ್ವಲ್ಪವೇ ನೀರನ್ನು ಸೇರಿಸುತ್ತಾ ಹದವಾಗಿ ಕಲಸಬೇಕು 10 ನಿಮಿಷ ಹಾಗೆಯೇ ಮುಚ್ಚಿ ಇಡಬೇಕು. ನಂತರ ಹಿಟ್ಟನ್ನು ಚೆನ್ನಾಗಿ ನಾದಿಕೊಂಡು ಸಣ್ಣ ಸಣ್ಣ ಉಂಡೆಗಳನ್ನಾಗಿ ಮಾಡಿ ಕೋಡುಬಳೆಗಳನ್ನು ಮಾಡಿ, ಎಣ್ಣೆಯಲ್ಲಿ ಕರಿಯಬೇಕು. ಸಂಜೆಯ ಕಾಫಿಯ ಜೊತೆ ಸವಿಯಲು ರುಚಿಯಾದ ಅವರೆಕಾಳಿನ ಕೋಡುಬಳೆ ಸಿದ್ಧ.

ಇನ್ನೊಂದು ವಿಧಾನದಲ್ಲಿ ಮೇಲಿನಂತೆ ಎಲ್ಲಾ ಸಾಮಾನುಗಳು:

ಅವರೆಕಾಳನ್ನು ಸ್ವಲ್ಪ (ಅರ್ಧಂಬರ್ಧ) ಬೇಯಿಸಿಕೊಳ್ಳಬೇಕು. ನಂತರ ಮೇಲಿನಂತೆ ಮಾಡಬಹುದು.
ಚಿರೋಟಿ ರವೆಯನ್ನು ಸ್ವಲ್ಪ ಹುರಿದು ಮಿಶ್ರ ಮಾಡಿದರೂ ಚೆನ್ನಾಗಿರುತ್ತದೆ.

(ಹೆಂಗಸರ ಕೈಗೆ ಅಡುಗೆ ಪದಾರ್ಥಗಳು ಸಿಕ್ಕಿಬಿಟ್ಟರೆ, ವಿಧವಿಧದ ,ವಿವಿಧ ಪ್ರಯೋಗಗಳು, ಸಂಶೋಧನೆಗಳು ನಡೆದು ಅಡುಗೆ ಮನೆಯೊಂದು ಪ್ರಯೋಗಶಾಲೆಯೇ ಆಗುವುದು.).

ಇದೇ ಹಿಟ್ಟಿಗೆ ಸ್ವಲ್ಪ ಕಡಲೆಕಾಯಿ ಬೀಜವನ್ನು ಸೇರಿಸಿ ನಿಪ್ಪಿಟ್ಟು ಸಹ ಮಾಡಬಹುದು.



**ಪಲ್ಲವಿ ಮಂಜುನಾಥ್**
ನ್ಯೂ ಜೆರ್ಸಿ

# ಹಾಲು ಹೋಳಿಗೆ





ಸಾಮಾಗ್ರಿ:

1.ಗೋಧಿ ಹಿಟ್ಟು
2.ಬೆಲ್ಲ- 4ಉಂಡೆ
3.ಗಸಗಸೆ - 1cup
4.ಎಲಕ್ಕಿ-10
5.ಕಾಯಿ ತುರಿ- 2cup
6.ಎಣ್ಣೆ
7.ನೀರು
8.ಉಪ್ಪು

ಮಾಡುವ ವಿಧಾನ:

ಗೋಧಿ ಹಿಟ್ಟು, ಚಿಟಿಕೆ ಉಪ್ಪು, ಎಣ್ಣೆ(1 Tbsp), ನೀರು ಹಾಕಿ ಚಪಾತಿ ಹದಕ್ಕೆ ಕಲಸಿ ನೆನೆಯಲು 1 ಗಂಟೆ ಬಿಡಿ. ನಂತರ ಚಪಾತಿ ರೀತಿ ಲಟ್ಟಿಸಿ ಮದ್ಯಕ್ಕೆ ಮಡಿಚಿ ಎಣ್ಣೆಯಲ್ಲಿ ಪೂರಿ ರೀತಿ ಕರೆದಿಟ್ಟು ಕೊಳ್ಳಬೇಕು.


ಕ್ಷೀರ (ಪಾಯಸ) : ಗಸಗಸೆಯನ್ನು ಹುರಿದು ಅದಕ್ಕೆ ಕಾಯಿ ತುರಿ, ಎಲಕ್ಕಿ, ನೀರು ಹಾಕಿ ನುಣ್ಣಗೆ ರುಬ್ಬಿಕೊಳ್ಳಬೇಕು. ಮತ್ತೊಂದು ಪಾತ್ರೆ ಯಲ್ಲಿ ಬೆಲ್ಲ ನೀರು ಹಾಕಿ ಕರಗಿಸಿ (ಸೋಸಿಕೊಂಡು) ಕುದಿಯಲು ಇಡಿ, ಅದಕ್ಕೆ ರುಬ್ಬಿದ ಮಿಶ್ರಣ ಹಾಕಿ ಚೆನ್ನಾಗಿ ಕುದಿ ಬಂದ ಮೇಲೆ ತಣ್ಣಗಾಗಲು ಬಿಡಿ. ನಂತರ ಪೂರಿಯನ್ನು ಪಾಯಸದಲ್ಲಿ ನೆನೆಸಿ. ರುಚಿ ರುಚಿಯಾದ ಹಾಲು ಹೋಳಿಗೆ ತಿನ್ನಲು ಸಿದ್ದ.

ಎಲ್ಲ ತಯಾರಿ ಮಾಡಿಟ್ಟು ಕೊಂಡರೆ ಅಥಿತಿಗಳಿಗೆ ದಿಢೀರಾಗಿ, ಸುಲಭವಾಗಿ ಈ ಸಿಹಿ ಮಾಡಬಹುದು !!

# ಪದಬಂಧ – 2



**ರಚನೆ : ರೋಹಿಣಿ ಮಹೇಶ್**
ನ್ಯೂ ಜೆರ್ಸಿ




### ಎಡದಿಂದ ಬಲಕ್ಕೆ

1.ಮಧುಕರನ ಮಗಳು ವಧುವಾದಳು(5)
2.ಅಬ್ಬಾ ! ಅವಳಿಗೆ ಅದೆಂತ ಗರ್ವ(3)
4.ಈ ರೊಟ್ಟಿಯನ್ನು, ಬಟ್ಟಯಂತೆ ಮಡಿಚಲು ಬರುತ್ತದೆ(5)
6.ಹಾವನ್ನು ಆಭರಣವನ್ನಾಗಿ ಧರಿಸಿದವನು(6)
8.ಕಿವಿಯಲ್ಲಿ ಮೆಲ್ಲಗೆ ಹೇಳಿದ ಮಾತು(4)
10.ವಿಶ್ವನಾಥನ ಊರೇ ಇದು?(2)
11.ಬೆಳ್ಳಿ ಬೆಟ್ಟದಂತೆ ಕಾಣುವ ಕೈಲಾಸ ಪರ್ವತ(5)
13.ಬೇಸಿಗೆಯ ಸೂರ್ಯನ ಝಳ ಬಲು ತೀಕ್ಷ್ಣವಾಗಿದೆ(5)
15.ನೀರಿನಲ್ಲಿ ಹುಟ್ಟಿದಾಕೆಯನ್ನು ಹೀಗೂ ಕೆರೆಯಬಹುದು(3)
19.ನಿಮಿಷ ಮಾತ್ರದ್ದು(3)
20.ದರೋಡೆ ಮಾಡಿ ಬದುಕುವವನು(4)

### ಮೇಲಿಂದ ಕೆಳಗೆ

1.ಶಂತನುವಿನ ಈ ರಾಣಿ ಮೀನಿನ ಮಗಳು(4)
3.ಮಕ್ಕಳ ಗಲಾಟೆಗೆ ಅಪ್ಪ ಬಂದು ಅಬ್ಬರಿಸಿದರು(3)
4.ಸೌರಮಾನದಲ್ಲಿ ಧನುರ್ಮಾಸವಾದರೆ ಚಾಂದ್ರಮಾನ ಲೆಕ್ಕದಲ್ಲಿ ಮಾಸಬಂದೀತು? (4)
5.ಸತ್ಯ ತ್ರೇತಾ ದ್ವಾಪರಗಳ ನಂತರ ಉಳಿದದ್ದು ಇದೇ!(4)
ಸಾರ್ವಜನಿಕರಿಗೆ ಸರಕಾರವು ನಿಗದಿತ ಬೆಲೆಯಲ್ಲಿ ನೀಡುವ ದಿನಸಿ ಸಾಮಗ್ರಿ (4)
7.ಸುರುಳಿಯಾಕಾರದಲ್ಲಿರುವುದು(3)
9.ಅವಸರದಲ್ಲಿ ಸದಸ್ಯರೆಲ್ಲ ಸೇರಿ ಮಾಡಿದ ಸಭೆ(4)
12.ಮುಷ್ಕರದಲ್ಲಿ ಈ ಮಾತು ಸರ್ವೇ ಸಾಮಾನ್ಯ(4)
14.ಪೊಲೀಸ್ ಕೈಗೆ ಸಿಕ್ಕರೆ ಕಳ್ಳ , ಇದನ್ನು ಎಣಿಸುತ್ತಾನೆ(2)
15.ಅರೆ!ಪೀಸಾದ ಗೋಪುರಕ್ಕೇನಾಯಿತು?(2)
16.ಹಾಳಾದದ್ದನ್ನು ದುರಸ್ತಿಗೊಳಿಸು(3)
17.ಆರು ಅಕ್ಷರಗಳ ಈ ಮಂತ್ರ ಬಹಳ ಶಕ್ತಿಯುತವಾದುದು(4)
18.ಆಲಸ್ಯ,ಸೋಮಾರಿ (2)
21.ಲೇಖನಿಗೆ ಇದನ್ನು ಹಾಕಿದರೆ ಬರೆಯಬಹುದು(2)
22.ಭಯವನ್ನುಟ್ಟಿಸುವಂತದು(3)

### ಪದಬಂಧ - 1 ಸರಿಯಾದ ಉತ್ತರಗಳು



**ಪದಬಂಧ - 1 ಸರಿಯಾದ ಉತ್ತರಗಳನ್ನು ಕಳಿಸಿದವರು :**
**ಗಿರೀಶ ಹೆಬ್ಬಾರ್, ಬೆಂಗಳೂರು**


# ಚಿಣ್ಣರ ಲೋಕ





**ಸಮನ್ವಿತ ಆರ್**
ಚಿಕ್ಕಮಗಳೂರು




## "ಕಲೆಯ ಬಲೆ"








**ನವಿಷ್ಕ ಮಂಜುನಾಥ್**
12 ವರ್ಷ, ನ್ಯೂ ಜೆರ್ಸಿ

# “ಬಾಲಬೃಂದ ಯೋಗ”


ನಮಸ್ಕಾರ,

June 7 ಮತ್ತು 8 ನಮ್ಮ ಕನ್ನಡ ಶಾಲೆ ಮಕ್ಕಳಿಗೆ ಅಂತ ಯೋಗಯಾನ ಶಿಬಿರನ ಬೃಂದಾವನ ಕನ್ನಡ ಶಾಲೆ ಸಂಕಲ್ಪ ತಂಡದಿಂದ ಆಯೋಜಿಸಿದ್ರು. ನಾನು ನನ್ನ ತಂಗಿ, ನನ್ನ ಫ್ರೆಂಡ್ಸ್ ಎಲ್ಲಾ ಮಾತಾಡ್ಕೊಂಡು ಸೇರ್ಕೊಂಡ್ವಿ. ಮೊದ್ಲು ಫ್ರೆಂಡ್ಸ್ ಜೊತೆ ಮಜಾ ಮಾಡಬೋದು ಅಂತನೇ ಸೇರಿದು ಆದ್ರೆ ಆಮೇಲೆ ಅನ್ನಿಸ್ತು ಯೋಗದಿಂದ ಇಷ್ಟೊಂದು ಹೆಲ್ಪ್ ಆಗುತ್ತೆ ಅಂತ. ಶನಿವಾರ ಬೆಳಿಗ್ಗೆ ಬೇಗ ಎದ್ದು ready ಆಗಿ ಸರಿಯಾಗಿ 7.30 ಕ್ಕೆ join ಆದ್ವಿ, ಅಷ್ಟ್ರಲ್ಲಿ ನಮ್ಮ ಯೋಗ ಗುರುಗಳು (ಕವಿತ ಆಂಟಿ ಮತ್ತು ಅಂಕಲ್) ನಮಗೋಸ್ಕರ Wait ಮಾಡ್ತಿದ್ರು. ಮೊದ್ಲಿಗೆ prayer ಮೂಲಕ ಶುರು ಮಾಡಿ, basic exersise ಇಂದ ಸೂರ್ಯ ನಮಸ್ಕಾರ ಮಾಡೋ ತನಕ ಹೇಳ್ಕೊಟ್ರು, last ಅಲ್ಲಿ ಪ್ರಾಣಾಯಾಮ, ಮೆಡಿಟೇಶನ್ ಮಾಡ್ಸಿದ್ರು.. ಎಷ್ಟು ಬೇಗ 1.30 ಗಂಟೆ ಮುಗ್ದೋಯ್ತು ಅಂತ ಅನಿಸ್ತು. ಭಾನುವಾರ ಅಮ್ಮ ಕರೆಯೋಕು ಮುಂಚೆನೇ ನಾನು ನನ್ನ ತಂಗಿ ಎದ್ದು ready ಆಗಿ ಕೂತಿದ್ವಿ. ಎರಡೇ ದಿನದಲ್ಲಿ 25-30 ಆಸನಗಳು ಮತ್ತು ಪ್ರಾಣಾಯಾಮಗಳನ ಕಲಿತ್ವಿ. ಯೋಗ ಮಾಡಿದ ಮೇಲೆ ಪೂರ್ತಿ ದಿನ ತುಂಬಾನೇ ಆಕ್ಟಿವ್ ಆಗಿದ್ವಿ. ಆವಾಗ ಗೊತ್ತಾಯಿತು ನಮ್ಮ ಅಮ್ಮ ಯಾಕೆ ಒಂದು ದಿನನೂ ಮಿಸ್ ಮಾಡ್ದೆ ಯೋಗ ಮಾಡ್ತಾರೆ ಅಂತ. ಮಕ್ಕಳಿಗೆ ಅಂತ ಯೋಗಯಾನ ಶಿಬಿರ organize ಮಾಡಿದ್ದಕ್ಕೆ ರೋಹಿಣಿ ಆಂಟಿ ಮತ್ತು ಶುಭ ಆಂಟಿಗೆ ಧನ್ಯವಾದಗಳು.

ನವಿಷ್ಕ ಮಂಜುನಾಥ್

12 ವರ್ಷ, 6 ನೇ ತರಗತಿ


ನ್ಯೂ ಜೆರ್ಸಿ





**ಕೌಸ್ತುಭ ವಿ**
ಬೆಂಗಳೂರು















ಕ್ಯಾಮೆರಾ
ಕಣ್ಣಲ್ಲಿ



**ಶ್ರೀವಿದ್ಯಾ ಪ್ರಶಾಂತ್**
ನ್ಯೂ ಜೆರ್ಸಿ













# ಕ್ಯಾಮರಾ ಕಣ್ಣಲ್ಲಿ



**ಪಲ್ಲವಿ ಮಂಜುನಾಥ್**
ನ್ಯೂ ಜೆರ್ಸಿ





# ಬೃಂದಾವನ ವಾಣಿ ೫೧ನೆಯ ಸಂಚಿಕೆಯ ಬಗ್ಗೆ ಓದುಗರ ಅನಿಸಿಕೆ ಅಭಿಪ್ರಾಯಗಳು

- Yella ಲೇಖನ, ಕವನ ಗಳು ಚೆನ್ನಾಗಿ ಮೂಡಿ ಬಂದಿದೆ. it took only 25 mins to read and comprehend. Liked the ಶೀನ ಪೂಜಾರಿ ಅವರ ವಕ್ತಿ ವಿಶೇಷ ಲೇಖನ. Yogedra bhat avara, " ವ್ಯಾಮೋಹ ಬಿಡ ಬೇಕು" ಕೂಡ ತುಂಬಾ ಚೆನ್ನಾಗಿದೆ. - Gayatri
- Lovely 60 page VaaNi edition, Team Sankalpa Brindavana "Vani"=also read as ವನಿ(ತೆ)😃💃. Congratulations @Shreevidya BB @~Ragini @Pallavi Manjunath Vaani@Vaani BB 😃 @Sowmya Ravi anddd @Rohini Kannada Shaale.Loveeee the page flip feature😃.Lovedddd the crossword puzzle 😍 Beautifully stitched/presented @~Sriram /@~Santosh Prasad ಪೇಜ್ flip ಮಾಡುವ ಸದ್ದು ಬಲು ಇಂಪು - Best wishes - Archana Acharya
- It is not easy to make an edition.. It needs a lot of patience and perseverance.. Thank you all again 👏🏻👏🏻 - Raghavendra Kundalagarki
- Hearty congratulations to Sankalpa editorial team 👍👍👍👍👍 - Ashok kattimani
- Beautiful video and the edition, new concept....Congratulations to the Brindavana editorial team 😊👏👏 - Sandhya Mallik
- ಸಂಚಿಕೆ ಅದ್ಭುತವಾಗಿ ಮೂಡಿಬಂದಿದೆ, ನನ್ನ ಲೇಖನ, ಕವನಗಳನ್ನು ಪ್ರಕಟಿಸಿದ ಸಂಪಾದಕ ಮಂಡಳಿಗೆ ಧನ್ಯವಾದಗಳು - Shashibhushana Raju
- Congrats team!! Has come out very nice 👍 - Jyothi
- Great job 👏🏻 It's very well done. So proud of sahitya team - Savitha
- Very good intro about Brindavana Vaani 👌Congratulations Shreevidya and team. 👏👏 - Mallikarjuna Moogi
- @Shreevidya BB and team Brindaavana vaani is really good 👍 👌 👏 - Lakshmi Kolal
- By the way, this edition shows ladies' touch with beauty and presentation. I felt like reading a kindle e-book. Liked format. - Uma Murthy
- Thank you for sharing. V happy feeling as if I am reading sudha or Taranga magazine - Deepthi Jois




ಬೃಂದಾವನ ವಾಣಿ ೫೧ ನೆಯ ಸಂಚಿಕೆಯನ್ನು ಇಲ್ಲಿ ಓದಬಹುದು :
https://brindavana.org/wp-content/uploads/2025/03/Brindavana-Vani-51.pdf



**ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ನಮಗೆ ಇಲ್ಲಿ ತಿಳಿಸಿ :**

**brindavanavani@gmail.com**

**ಮುಂದಿನ ಸಂಚಿಕೆಯಲ್ಲಿ ಸಿಗೋಣ...**